ಮಾರೆಪ್ಪ ಚೆನ್ನದಾಸರ ಜೀವನ ಮತ್ತು ಸಾಧನೆ

(ತತ್ವಪದ ಹಾಡುಗಾರ)

(ಮಾಸ್ಟರ್ ಆಫ್ ಫಿಲಾಸಫಿ (ಎಂ.ಫಿಲ್) ಪದವಿಯ ಆಂಶಿಕ ಅವಶ್ಯಕತೆಗಾಗಿ
ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಸಂಪ್ರಬಂಧ)

ಸಂಶೋಧಕರು
ನೆಲಾಗಣಿ ಮಹಾಂತೇಶ ಬಸಪ್ಪ

ಮಾರ್ಗದರ್ಶಕರು
ಡಾ. ಹೆಬ್ಬಾಲೆ ಕೆ. ನಾಗೇಶ್
ಪ್ರವಾಚಕರು

ಸಮಾಜ ವಿಜ್ಞಾನಗಳ ನಿಕಾಯ
ಜಾನಪದ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ - ೫೮೩ ೨೭೬
೨೦೦೮-೦೯

ಮಾರೆಪ್ಪ ಚೆನ್ನದಾಸರ ಜೀವನ ಮತ್ತು ಸಾಧನೆ

(ತತ್ವಪದ ಹಾಡುಗಾರ)

(ಮಾಸ್ಟರ್ ಆಫ್ ಫಿಲಾಸಫಿ (ಎಂ.ಫಿಲ್) ಪದವಿಯ ಆಂಶಿಕ ಅವಶ್ಯಕತೆಗಾಗಿ
ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಸಂಪ್ರಬಂಧ)

ಸಂಶೋಧಕರು
ನೆಲಾಗಣಿ ಮಹಾಂತೇಶ ಬಸಪ್ಪ

ಮಾರ್ಗದರ್ಶಕರು
ಡಾ. ಹೆಬ್ಬಾಲೆ ಕೆ. ನಾಗೇಶ್
ಪ್ರವಾಚಕರು

ಸಮಾಜ ವಿಜ್ಞಾನಗಳ ನಿಕಾಯ
ಜಾನಪದ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ - ೫೮೩ ೨೭೬
೨೦೦೮-೦೯

ಮಾರ್ಗದರ್ಶಕರ ದೃಢೀಕರಣ ಪತ್ರ

"ಮಾರೆಪ್ಪ ಚೆನ್ನದಾಸರ ಜೀವನ ಮತ್ತು ಸಾಧನೆ" (ತತ್ವಪದ ಹಾಡುಗಾರ) ಎಂಬ ಸಂಪ್ರಬಂಧವು ಕನ್ನಡ ವಿಶ್ವವಿದ್ಯಾಲಯದ ಎಂ.ಫಿಲ್. ಪದವಿಗಾಗಿ ನೆಲಾಗಣಿ ಮಹಾಂತೇಶ ಬಸಪ್ಪ ಅವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಪ್ರಸ್ತುತ ಪ್ರಬಂಧವು ಮೂಲವಾಗಿದ್ದು ಈ ಹೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

13/10/09

(ಡಾ. ಹೆಬ್ಬಾಲೆ ಕೆ. ನಾಗೇಶ್)
ಪ್ರವಾಚಕರು
ಜಾನಪದ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ದಿನಾಂಕ: 13/10/09
ಸ್ಥಳ : ವಿದ್ಯಾರಣ್ಯ.

ಸಂಶೋಧಕರ ಪ್ರಮಾಣ ಪತ್ರ

"ಮಾರೆಪ್ಪ ಚೆನ್ನದಾಸರ ಜೀವನ ಮತ್ತು ಸಾಧನೆ" (ತತ್ವಪದ ಹಾಡುಗಾರ) ಎಂಬ ಸಂಪ್ರಬಂಧವನ್ನು ಡಾ. ಹೆಬ್ಬಾಲೆ ಕೆ. ನಾಗೇಶ್ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ, ಎಂ.ಫಿಲ್ ಪದವಿಗಾಗಿ ಜಾನಪದ ಅಧ್ಯಯನ ವಿಭಾಗಕ್ಕೆ ಸಲ್ಲಿಸುತ್ತಿದ್ದೇನೆ. ಪ್ರಸ್ತುತ ಪ್ರಬಂಧವು ಮೂಲವಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

(ನೆಲಾಗಣಿ ಮಹಾಂತೇಶ ಬಸಪ್ಪ)
ಸಂಶೋಧಕರು
ಜಾನಪದ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ದಿನಾಂಕ: ೧೨.೧೦.೨೦೦೮

ಸ್ಥಳ : ವಿದ್ಯಾರಣ್ಯ

ಯಾರ್‍ಯಾರ ನೆನೆಯಲಿ.....

ಕನ್ನಡ ವಿಶ್ವವಿದ್ಯಾಲಯದಲ್ಲಿ ಎಂ.ಫಿಲ್. ಅಧ್ಯಯನ ಕೈಗೊಳ್ಳುವ ಅವಕಾಶ ಮಾಡಿಕೊಟ್ಟ ಕನ್ನಡ ವಿಶ್ವವಿದ್ಯಾಲಯದ ಕುಲಪತಿಗಳಾದ ಡಾ.ಎ.ಮುರಿಗೆಪ್ಪ ಅವರಿಗೆ, ಮಾನ್ಯ ಕುಲಸಚಿವರಾದ ಎಸ್.ಎಸ್.ಪೂಜಾರ್, ಸಮಾಜವಿಜ್ಞಾನಗಳ ನಿಕಾಯದ ಡೀನ್ ಡಾ.ಟಿ.ಆರ್.ಚಂದ್ರಶೇಖರ್ ಅವರಿಗೂ ಹೃತ್ಪೂರ್ವಕ ಕೃತಜ್ಞತೆಗಳು.

ಅಧ್ಯಯನಾಂಗದ ನಿರ್ದೇಶಕರಾದ ಡಾ. ವೀರೇಶ ಬಡಿಗೇರ ಅವರಿಗೆ, ಜಾನಪದ ಅಧ್ಯಯನ ವಿಭಾಗದ ಮುಖ್ಯಸ್ಥರಾದ ಡಾ. ಮಂಜುನಾಥ ಬೇವಿನಕಟ್ಟಿ ಅವರಿಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ.

ಎಂ.ಫಿಲ್. ಸಂಶೋಧನಾ ಕೈಗೊಳ್ಳಲು ನಿಬಂಧದ ವಿಷಯ ಸೂಚಿಸಿ, ಅಧ್ಯಯನದುದ್ದಕ್ಕೂ ತಪ್ಪುಗಳನ್ನು ತಿದ್ದುತ್ತಾ, ತಿಳಿಹೇಳಿದ ಅಂದಿನ ವಿಭಾಗದ ಮುಖ್ಯಸ್ಥರಾಗಿದ್ದ ಹಾಗೂ ಮಾರ್ಗದರ್ಶಕರಾದ ಡಾ. ಹೆಬ್ಬಾಲೆ ಕೆ. ನಾಗೇಶ್ ಅವರಿಗೆ ಹೃತ್ಪೂರ್ವಕ ಕೃತಜ್ಞತೆಗಳು. ಹಾಗೂ ಅಧ್ಯಯನಕ್ಕೆ ಸಹಕರಿಸಿದ ವಿಭಾಗದ ಗುರುಗಳಾದ ಡಾ. ಸ.ಚಿ.ರಮೇಶ್, ಡಾ.ಮೊಗಳ್ಳಿ ಗಣೇಶ್ ಅವರುಗಳಿಗೆ ಮತ್ತು ವಿಭಾಗದ ಸಿಬ್ಬಂದಿ ವರ್ಗದವರಾದ ಅಜಿತ್ ಹಾಗೂ ಖಾಸಿಂ ಅವರಿಗೆ ನನ್ನ ಕೃತಜ್ಞತೆಗಳು.

ನನ್ನ ಅಧ್ಯಯನಕ್ಕೆ ಪೂರಕ ಮಾಹಿತಿಯನ್ನು ಒದಗಿಸಿದ ಪ್ರೊ. ಕಾಳೇಗೌಡ ನಾಗವಾರ, ಡಾ. ರಹಮತ್ ತರೀಕೆರೆ, ಶ್ರೀಯುತ ಮುನಿಯಪ್ಪ ಹುಬ್ಬಳ್ಳಿ, ಡಾ. ಮಲ್ಲಿಕಾರ್ಜುನ ಕುಂಬಾರ, ಬಸವರಾಜ ಕೆಂಚರೆಡ್ಡಿ, ಎಸ್.ಎಚ್.ಪವಾರ, ಡಾ. ಕುರುವ ಬಸವರಾಜ್, ಕಿಶನ್‌ರಾವ್ ಕುಲಕರ್ಣಿ, ಪ್ರೊ. ಕೆ.ಎಚ್.ಛತ್ರದ, ಅಶೋಕ ಕೆಂಚರೆಡ್ಡಿ, ವೈ.ಬಿ.ಮೇಟಿ, ಗುರುರಾಜ ಕುಲಕರ್ಣಿಯವರಿಗೆ ನನ್ನ ಹೃತ್ಪೂರ್ವಕ ವಂದನೆಗಳು.

ಹಲವಾರು ಕಷ್ಟಗಳ ನಡುವೆಯೂ ಮಗನ ಓದನ್ನು ಮತ್ತು ಏಳ್ಗೆಯನ್ನು ಸದಾ ಬಯಸುತ್ತಿದ್ದ ನನ್ನ ಪೂಜ್ಯ ತಂದೆಯವರಾದ ದಿ॥ ಬಸಪ್ಪ ಹಾಗೂ ಪ್ರೀತಿಯ ಅಣ್ಣ ದಿ॥ ಮಲ್ಲಿಕಾರ್ಜುನ, ಅಜ್ಜಿಯಂದಿರಾದ ದಿ॥ ಬಸಮ್ಮ, ದಿ॥ ನೀಲಮ್ಮ ಅವರುಗಳಿಗೆ ನನ್ನ ಪ್ರಣಾಮಗಳು.

ನನ್ನ ತಾಯಿಯವರಾದ ಶ್ರೀಮತಿ ಕಲ್ಲಮ್ಮ ಹಾಗೂ ನನ್ನ ತಂದೆಯ ಸ್ಥಾನದಲ್ಲಿ ನಿಂತು ನನ್ನನ್ನು ಸಾಕಿ ಸಲುಹುತ್ತಿರುವ ಪ್ರೀತಿಯ ಅಣ್ಣ ದೊಡ್ಡಬಸಪ್ಪ, ಪ್ರೀತಿಯ ಅಕ್ಕಂದಿರಾದ ಶಕುಂತಲಾ, ಶಂಕ್ರಮ್ಮ, ಅತ್ತಿಗೆ ಅಕ್ಕಮಹಾದೇವಿಯವರಿಗೂ ನಮನಗಳು. ಶ್ರೀಧರ, ಶ್ರೀದೇವಿ ಹಾಗೂ ಅಳಿಯಂದಿರಾದ

ಶರಣಬಸವ, ಅಮರೇಶ, ವಿರೂಪಾಕ್ಷ ಹಾಗೂ ಸೊಸೆಯರಾದ ಶ್ರೇಯಾ, ಬಸವರಾಜೇಶ್ವರಿ ಇವರನ್ನು ನೆನೆಯುತ್ತೇನೆ. ನನ್ನ ಸಂತೋಷದಲ್ಲಿ ತಮ್ಮ ಸಂತೋಷವನ್ನು ಕಂಡು ನನ್ನ ಬದುಕಿಗೆ ಕಾಮಧೇನು ಕಲ್ಪವೃಕ್ಷವಾಗಿರುವ ಚಿಕ್ಕಪ್ಪ, ಚಿಕ್ಕಮ್ಮಂದಿರಿಗೆ, ಅಣ್ಣಂದಿರು, ಅತ್ತಿಗೆಯರಿಗೆ ನನ್ನೆಲ್ಲಾ ತಮ್ಮಂದಿರಿಗೆ ಕೃತಜ್ಞನಾಗಿರುತ್ತೇನೆ.

ನನ್ನ ಅಧ್ಯಯನಕ್ಕೆ ಸ್ಫೂರ್ತಿ ತುಂಬಿದ ಜಿ.ಬಿ.ವೈ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾದ ಶ್ರೀಮತಿ ಗುಂಡಮ್ಮ ಬಸಪ್ಪ ಯಲಬುರ್ಗಿ ಅವರಿಗೆ, ನಿರ್ದೇಶಕರುಗಳಾದ ಮಾನ್ಯ ಶೇಖರಗೌಡ ಉಳ್ಳಾಗಡ್ಡಿ, ಬಸವಲಿಂಗಪ್ಪ ಭೂತೆ, ಡಾ. ಕೆ.ಬಿ.ಬಾಳಿ ಅವರಿಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಸಂಶೋಧನೆಗೆ ಪ್ರೋತ್ಸಾಹಿಸಿ ಅಧ್ಯಯನುದುದ್ದಕ್ಕೂ ಸಕಲ ರೀತಿಯಿಂದ ಸಹಕರಿಸಿದ ಶ್ರೀ. ಗಂಗಾಧರ, ಟಿ.ಶರಣಪ್ಪ, ಅನ್ನದಾನಿ ಸೂಡಿ, ಬಸಲಿಂಗಪ್ಪ ಇವರಿಗೆ ಅನಂತ ವಂದನೆಗಳು.

ಸಂಶೋಧನೆಯ ಸಂದರ್ಭದಲ್ಲಿ ಚರ್ಚೆಗಿಳಿದು ವಿಷಯದಲ್ಲಿ ಸಹಕರಿಸಿ ಸದಾ ಓದುಗನನ್ನಾಗಿ ಮಾಡಿದ ಪ್ರೀತಿಯ ಮಾವಂದಿರಾದ ವೀರಭದ್ರಪ್ಪ ಭದ್ರಗೌಡ್ರ, ಬಸವರಾಜ ಹುಬ್ಬಳ್ಳಿ, ವೀರಭದ್ರಪ್ಪ ಮೂಲಿಮನಿ, ಸಂಗಮೇಶ ಸಿಂಗಾಡಿ ಇವರಿಗೆ ತುಂಬು ಹೃದಯದ ಧನ್ಯವಾದಗಳು.

ಪ್ರಬಂಧವನ್ನು ಸಿದ್ಧಪಡಿಸುವಾಗ ಸೂಕ್ತ ಸಲಹೆಗಳನ್ನು ನೀಡಿರುವ ಹಿರಿಯ ಸಂಶೋಧನಾ ಮಿತ್ರರಾದ ಜಗದೀಶ ಕೆರೆನಹಳ್ಳಿ, ಹುಲಿಯಪ್ಪ ಎಸ್, ಪಂಪಯ್ಯ ದೇವರು ಅವರಿಗೆ ಹೃತ್ಪೂರ್ವಕ ವಂದನೆಗಳು.

ವಿಭಾಗದ ಮಿತ್ರರಾದ ಬಸವರಾಜು ಬಿ.ಎಸ್, ನಾಗಭೂಷಣ, ರೇಖಾ ಇವರಿಗೆ, ಹಲವು ರೀತಿಯಲ್ಲಿ ಮಿತ್ರರಾದ ರಾಜಶೇಖರ್, ತಿಪ್ಪನಾಯಕ, ಗುರುಬಸವ, ವೀರೇಶ, ನಿರಂಜನ, ಶೇಖರಾಚಾರಿ ಅವರಿಗೆ ಧನ್ಯವಾದಗಳು.

ಓದಿನ ಯಶಸ್ಸನ್ನು ಬಯಸಿದ ಮಹೇಶ್ ಆರ್.ಟಿ, ಎಸ್.ಕೆ.ಹೊರಪೇಟೆ, ಎಸ್.ಎಚ್.ದಾಸರ, ಎಲ್.ಡಿ.ದೂರಣ್ಣನವರ, ಕನಕಪ್ಪ ಶಂಕರ ಕರ್ಪಡೆ, ಬಸವರಾಜ ಮಾಸ್ತಿ, ಎಸ್.ಬಿ.ಬೆಲ್ಲದ, ಶ್ರೀಮತಿ ಇಂದುಮತಿ ಭೀಮಸೇನರಾವ್, ಚಂದ್ರಶೇಖರ, ಕೃಷ್ಣಮೂರ್ತಿ, ಶಾರದ, ಶ್ವೇತಾ, ಜಯ, ಸುಜಾತ, ರಮ್ಯ, ಪುಷ್ಕರ, ಪವನ ಇವರೆಲ್ಲರಿಗೂ ಕೃತಜ್ಞತೆಗಳು.

ನನ್ನ ಪೂಜ್ಯ ಗುರುಗಳಾದ ಶ್ರೀ ಸಿದ್ದಪ್ಪ ಡಿ, ಶ್ರೀ. ಸೋಮೇಶ್, ಶ್ರೀ. ಈ.ಬಿ.ತಳವಾರ, ಶ್ರೀ. ಯಮನಪ್ಪ, ಶ್ರೀ. ಎನ್.ಎಸ್. ಕಂಬಳಿ, ಶ್ರೀ. ವಿ.ಎಸ್.ಬೆಣಕಲ್, ಶ್ರೀ. ಟಿ.ಎನ್.ಬಡಿಗೇರ ಇವರಿಗೂ ತುಂಬು ಹೃದಯದ ಕೃತಜ್ಞತೆಗಳು.

ನನ್ನ ಸಹೋದ್ಯೋಗಿ ಮಿತ್ರರಾಗಿರುವ ವಿ.ಎ.ಪತ್ತಾರ, ಜೆ.ಬಿ.ಪತ್ತಾರ, ವಾಣಿಶ್ರೀ, ನಾಗರತ್ನ, ವಿ.ಎಸ್.ಕಮತರ ಹಾಗೂ ಜೆ.ಬಿ.ವೈ ಶಿಕ್ಷಣ ಸಂಸ್ಥೆಯ ನನ್ನೆಲ್ಲಾ ವೃತ್ತಿ ಬಾಂದವರಿಗೂ ಕೃತಜ್ಞತೆಗಳು.

ನನ್ನ ಆತ್ಮೀಯ ಮಿತ್ರರಾಗಿರುವ ಸಂಜಯ, ಮಹೇಶ, ರುದ್ರಗೌಡ, ಬಸವಲಿಂಗಯ್ಯ, ವೆಂಕಟೇಶ್, ಲತಾ, ಸಂತೋಷ, ಸಾವಿತ್ರಿ, ಶರಣಪ್ಪ, ಬಸವರಾಜ, ಎ.ಜಿ.ಅರಳಿಕಟ್ಟಿ, ಮಲ್ಲಿಕಾರ್ಜುನ, ರಮೇಶ, ಅಮರೇಶ, ರಾಘವೇಂದ್ರ, ರಘು, ಶರಣಪ್ಪ ಪರಸಾಪುರ, ಸಬೀನಾ, ಅಪ್ಪು, ಹುಚ್ಚಪ್ಪ, ಶಿವರಾಜ, ಗಂಗಾಧರ ದಫೇದ್, ಎಸ್.ಡಿ. ಅಪ್ಪಾಜಿ, ರವಿ, ವಿದ್ಯಾರ್ಥಿ ಮಿತ್ರರಾದ ಮಹಾದೇವಪ್ಪ, ರಾಘವೇಂದ್ರ, ಶಬ್ಬೀರ್ ಅಹ್ಮಮದ್, ಗೀತಾ, ಮಂಜುಳಾ, ಯಮನೂರಪ್ಪ, ಶ್ರೀಕಾಂತ ಇವರೆಲ್ಲರನ್ನು ಈ ಸಂದರ್ಭದಲ್ಲಿ ನೆನೆಯುತ್ತೇನೆ.

ಗ್ರಂಥಾಲಯದ ಗ್ರಂಥಪಾಲಕರಿಗೂ ಹಾಗೂ ಸಿಬ್ಬಂದಿ ವರ್ಗಕ್ಕೂ ಅನಂತ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಸರಿಯಾಗಿ ಮಾಹಿತಿ ನೀಡಿ ಸಹಕರಿಸಿದ ಮಾರೆಪ್ಪ ಚೆನ್ನದಾಸರು ಹಾಗೂ ಅವರ ಕುಟುಂಬದ ಎಲ್ಲ ಸದಸ್ಯರೆಲ್ಲರಿಗೂ ತುಂಬು ಹೃದಯದ ಕೃತಜ್ಞತೆಗಳು.

ಅಚ್ಚುಕಟ್ಟಾಗಿ ಅಕ್ಷರ ಸಂಯೋಜನೆ ಮಾಡಿಕೊಟ್ಟ ಶ್ರೀಮತಿ ಭಾರತಿ ಹೇಮಂತ ಕರಡಿ ಹಾಗೂ ವೀರೇಶ ಅವರಿಗೂ ನನ್ನ ಹೃದಯಪೂರ್ವಕವಾದ ಧನ್ಯವಾದಗಳನ್ನು ಸಲ್ಲಿಸುತ್ತೇನೆ.

– ಮಹಾಂತೇಶ ನೆಲಾಗಣಿ

ಪರಿವಿಡಿ

ಅಧ್ಯಾಯ ಒಂದು

ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ ಹಾಗೂ ವಿಧಾನ

ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ ಹಾಗೂ ವಿಧಾನ

ಪ್ರಸ್ತಾವನೆ

"ಕನ್ನಡ ನಾಡಿನಲ್ಲಿ ಹೈದರಾಬಾದ್ ಕರ್ನಾಟಕ ಪ್ರದೇಶಕ್ಕೆ ವಿಶಿಷ್ಟವಾದ ಪರಂಪರೆಯಿದೆ. ಕನ್ನಡದ ಪ್ರಥಮ ಕೃತಿ 'ಕವಿರಾಜಮಾರ್ಗ'ವನ್ನು ಕೊಟ್ಟಿದ್ದು ಇದೇ ಪ್ರದೇಶವಾಗಿದೆ. ಶರಣರ, ದಾಸರ ಕಾರ್ಯಕ್ಷೇತ್ರವಾದ ಈ ಪ್ರದೇಶ ತತ್ವಪದಕಾರರ ತಾಣವೂ ಆಗಿದೆ. ವಚನ, ಸ್ವರವಚನ, ಕೀರ್ತನೆ, ಸುಳಾದಿ, ಉಗಾಭೋಗದಂತಹ ವಿಶಿಷ್ಟ ಸಾಹಿತ್ಯ ರೂಪಗಳನ್ನು ನೀಡಿದ ಈ ಪ್ರದೇಶ ಗಮನ ಸೆಳೆಯುವ ತತ್ವಪದಗಳನ್ನು ಕೊಟ್ಟಿದೆ. ಜನಪದ ಸಾಹಿತ್ಯದ ಹೊಸ ಸಾಧ್ಯತೆಗಳನ್ನು ಇಲ್ಲಿ ಕಾಣಬಹುದಾಗಿದೆ. ಭಾವೈಕ್ಯತೆಗೆ ಹೆಸರಾಗಿರುವ ಈ ನೆಲ ಅನೇಕ ಸಮನ್ವಯಗಳನ್ನು ಸಾಧಿಸಿದೆ. ಅನೇಕ ಭಾಷೆಯ, ಅನೇಕ ಮತದ, ಅನೇಕ ಜನಾಂಗಗಳ ಇಲ್ಲಿಯ ಜನರು ಸೌಹಾರ್ದಯುತವಾಗಿ ಬಾಳಿದ್ದಾರೆ. ಶರಣರು, ದಾಸರು, ತತ್ವಪದಕಾರರು ಅಂತಹ ಸೌಹಾರ್ದಯುತ ಬದುಕಿಗೆ ಸಂಕೇತವಾಗಿದ್ದಾರೆ. ಈ ದೃಷ್ಟಿಯಿಂದ ಇಲ್ಲಿನ ತತ್ವಪದಗಳು ತುಂಬಾ ಮುಖ್ಯವಾಗುತ್ತವೆ. ಸಗರನಾಡು, ಎಡೆದೊರೆನಾಡು, ಕಲ್ಯಾಣನಾಡು ಈ ಮೂರು ನಾಡುಗಳನ್ನೊಳಗೊಂಡಿರುವ ಹೈದರಾಬಾದ್ ಕರ್ನಾಟಕದ ಪರಂಪರೆ ವಿಶಿಷ್ಟವಾಗಿದೆ.

ಹೈದರಾಬಾದ್ ನಿಜಾಮನ ಆಳ್ವಿಕೆಗೆ ಒಳಪಟ್ಟಿದ್ದ ಈ ಪ್ರದೇಶ ಕರ್ನಾಟಕದ ಇತರ ಪ್ರದೇಶಗಳಿಗಿಂತ ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಹಿಂದುಳಿದಿದೆ. ಭಾರತ ದೇಶಕ್ಕೆ ೧೯೪೭, ಅಗಸ್ಟ್ ೧೫ರಂದು ಸ್ವಾತಂತ್ರ್ಯ ಲಭಿಸಿದರೆ ಹೈದರಾಬಾದ್ ಕರ್ನಾಟಕ ಪ್ರದೇಶದ ಗುಲಬರ್ಗಾ, ರಾಯಚೂರು, ಬೀದರ್, ಕೊಪ್ಪಳ ಜಿಲ್ಲೆಗಳ ಪ್ರದೇಶಕ್ಕೆ ೧೯೪೮ರ ಸೆಪ್ಟೆಂಬರ್ ೧೭ರಂದು ಸ್ವಾತಂತ್ರ್ಯ ಬಂದಿದೆ. ಈ ನಾಲ್ಕು ಜಿಲ್ಲೆಗಳು ಬರದಿಂದ, ಬಡತನದಿಂದ ತತ್ತರಿಸಿವೆ. ಈ ಪ್ರದೇಶದ ಅಭಿವೃದ್ಧಿಗಾಗಿ ಕರ್ನಾಟಕ ಸರಕಾರ ಇತ್ತೀಚಿಗೆ ಹೈದರಾಬಾದ್ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯನ್ನು ಸ್ಥಾಪಿಸಿದೆ. ಗುಲಬರ್ಗಾ ವಿಭಾಗವನ್ನು ಮಾಡಿ ಅದಕ್ಕೆ ಬಳ್ಳಾರಿ ಜಿಲ್ಲೆಯನ್ನು ಸೇರಿಸಲಾಗಿದೆ. ಸಾಂಸ್ಕೃತಿಕವಾಗಿ ಬಳ್ಳಾರಿ ಜಿಲ್ಲೆ ಬೇರೆಯಾಗಿಯೇ ನಿಲ್ಲುತ್ತದೆ."[೧]

"ಕನ್ನಡದ ಮೊದಲ ಕೃತಿಯೆಂಬ ಖ್ಯಾತಿ ಪಡೆದ 'ಕವಿರಾಜಮಾರ್ಗ'ವು ಅನೇಕ ಕಾರಣಗಳಿಗೆ ಮಹತ್ವದ್ದಾಗಿ ಪರಿಣಮಿಸಿದೆ. ಕೃತಿಕಾರ ೯ನೇ ಶತಮಾನದ ಕರ್ನಾಟಕದ ಭೌಗೋಳಿಕ ಎಲ್ಲೆಗಳನ್ನು, ಕನ್ನಡಿಗರ ಪ್ರತಿಭೆ, ಚೆಲುವು ಮತ್ತು ವ್ಯಕ್ತಿತ್ವವನ್ನು ಅಭಿಮಾನದಿಂದ ಹೇಳಿದ್ದಾನೆ. ಈ ಕಾರಣಗಳೂ ಸೇರಿದಂತೆ ಆ ಕಾಲದ ಸಾಹಿತ್ಯ ಮತ್ತು ರಾಜಕಾರಣದ ಸಂಬಂಧಗಳನ್ನು ಇಲ್ಲಿ ಅಧ್ಯಯನ ಮಾಡಲಾಗುತ್ತದೆ. ೯ನೇ ಶತಮಾನದಲ್ಲಿ ಜನ ಸಮುದಾಯಗಳು ಬಳಸುತ್ತಿದ್ದ ಅನೇಕ 'ಕನ್ನಡಗಳ' (ದೇಶಿಗಳು) ಬದಲಾಗಿ ಕವಿ ಮತ್ತು ರಾಜ (ಪ್ರಭುತ್ವ) ಒಂದು ಕನ್ನಡವನ್ನು ನಿರಾಕರಿಸಿ ತನ್ನದೇ ಆದ ದೇಶೀ ಭಾಷೆಯಲ್ಲಿ ಸಾಹಿತ್ಯ ಹುಟ್ಟಿಕೊಂಡಿದೆ. ಜನಸಮುದಾಯಗಳು ತಾವು ಬಳಸುತ್ತಿದ್ದ ಅನೇಕ ಬಗೆಯ ಕನ್ನಡಗಳನ್ನು (ದೇಶಿಗಳನ್ನು) ಜೀವಂತವಾಗಿ ಉಳಿಸಿಕೊಂಡು ಬಂದಿವೆ. ಈ ಹೊತ್ತಿನ ಈ ಪ್ರಾಂತ್ಯದ ಸಾಹಿತ್ಯವನ್ನು ಗಮನಿಸಬಹುದು.

'ಕವಿರಾಜಮಾರ್ಗ'ಕಾರ ಹೇಳಿದ ಮಾತೊಂದು ಗಮನಾರ್ಹವಾಗಿದೆ.

ಪದನ್ ಅರಿದು ನುಡಿಯಲುಂ ನುಡಿ
ದುದನ್ ಅರಿದು ಆರಯಲುಂ ಮಾರ್ಪರ್ ಆ ನಾಡವರ್ಗಳ್
ಚದುರರ್ ನಿಜದಿಂ ಕುರಿತೋ
ದದೆಯಂ ಕಾವ್ಯ ಪ್ರಯೋಗ ಪರಿಣಿತ ಮತಿಗಳ್

ಬಹು ಜನಪ್ರಿಯವಾದ ಈ ಪದ್ಯದಲ್ಲಿ, ಕನ್ನಡಿಗರು ಆಡುವ ಮಾತನ್ನು ಹದವರಿತು ಮಾತನಾಡುವವರು. ಇದಕ್ಕಿಂತಲೂ ಮುಖ್ಯವಾಗಿ ಶ್ರದ್ಧೆಯಿಂದ ಕಾವ್ಯಾಧ್ಯಯನವನ್ನು ಮಾಡದೆ ಸಹಜವಾಗಿ ಕಾವ್ಯವನ್ನು ಕಟ್ಟುವುದರಲ್ಲಿ ಪರಿಣಿತರು, ಇದು ಜನಸಾಮಾನ್ಯರ ಬಗ್ಗೆ ಹೇಳಿದ ಮಾತು. ವಿಶೇಷವಾಗಿ ಜಾನಪದ ಕವಿಗಳನ್ನು ಕುರಿತು ಹೇಳಿರಬೇಕು. ನಮಗೆ ಇದು ಭಾವುಕವಾಗಿ ಕಾಣಬಹುದು ಅಥವಾ ಅದು 'ಕವಿರಾಜಮಾರ್ಗ'ಕಾರನ ಆದರ್ಶದ ಮಾತಾಗಿ ಕಾಣಬಹುದು. ಆದರೆ ಚರಿತ್ರೆಯನ್ನು ಗಮನಿಸಿದರೆ ಮುಂದೆ ೧೨ನೇ ಶತಮಾನದಲ್ಲಿ ಕಾಣಿಸಿಕೊಂಡ ನೂರಾರು ವಚನಕಾರರನ್ನು ಕಂಡರೆ 'ಕವಿರಾಜಮಾರ್ಗ'ಕಾರನ ಮಾತು ನಿಜ ಎನ್ನಿಸುತ್ತದೆ. ಅವನ ಮಾತಿಗೆ ಮತ್ತಷ್ಟು ಪುಷ್ಟಿ ಸಿಗುವುದಕ್ಕೆ ೧೮ನೇ ಶತಮಾನಕ್ಕೆ ಬರಬೇಕು. ೧೮-೨೦ನೇ ಶತಮಾನದಲ್ಲಿ ಕಾಣಿಸಿಕೊಂಡ ತತ್ವಪದಕಾರರನ್ನು ಮತ್ತು ತತ್ವಪದ ಹಾಡುಗಾರರನ್ನು ಗಮನಿಸಿದರೆ 'ಕವಿರಾಜಮಾರ್ಗ'ಕಾರನ ಆದರ್ಶದ ಕೂಸುಗಳಂತೆ ಕಾಣುತ್ತಾರೆ. ಹೈದರಾಬಾದ್ ಕರ್ನಾಟಕ ಪ್ರಾಂತ್ಯದಲ್ಲಿ ಕಳೆದ ಮೂರು ಶತಮಾನಗಳ ಅವಧಿಯಲ್ಲಿ ಸೃಷ್ಟಿಯಾದ ತತ್ವಪದ ಸಾಹಿತ್ಯ, ಗೀಗಿ ಪದಸಾಹಿತ್ಯ, ಮೋಹರಂಪದ ಸಾಹಿತ್ಯ, ಬುಲಾಯಿಪದ ಸಾಹಿತ್ಯ, ಹರದೇಶಿ, ನಾಗೇಶಿ ಹಾಡುಗಳು ಮತ್ತು ಸಣ್ಣಾಟ ಸಾಹಿತ್ಯವನ್ನು ಗಮನಿಸಿದರೆ ಬೆರಗಾಗುತ್ತದೆ. ಈ ಸಾಹಿತ್ಯವನ್ನು ರಚಿಸಿದವರು ಹೆಚ್ಚಾಗಿ 'ಕುರಿತೋದದೆಯಂ ಕಾವ್ಯ ಪ್ರಯೋಗ ಪರಿಣಿತಮತಿಗಳೇ' ಆಗಿದ್ದಾರೆ.

'ಕವಿರಾಜಮಾರ್ಗ'ಕಾರ ಹೇಳಿದ ಇನ್ನೊಂದು ಮಾತು ವಿಶಿಷ್ಟವಾಗಿದೆ

ಕಸವರಮೆಂಬುದು ನೆರೆಸೈರಿಸಲ್

ಆರ್ಪೊಡೆ ಪರವಿಚಾರಮುದಂ ಪರಧರ್ಮಮುಮಂ

ಅನ್ಯ ವಿಚಾರಗಳನ್ನು, ಅನ್ಯ ಧರ್ಮಗಳನ್ನು ಸಹನೆಯಿಂದ ಕಾಣುವುದೇ ನಿಜವಾದ ಐಶ್ವರ್ಯ. ಇದು ಕೂಡಾ ಕವಿರಾಜಮಾರ್ಗಕಾರನ ಆದರ್ಶದ ಮಾತು ಎಂಬಂತೆ ಕಾಣುತ್ತದೆ. ಅಥವಾ ಸಾಂಸ್ಕೃತಿಕ ರಾಜಕಾರಣದ ಮಾತಿನಂತೆ ಕಾಣುತ್ತದೆ. ಕನ್ನಡ ನಾಡು ಅನೇಕ ಮತಧರ್ಮಗಳಿಗೆ ನೆಲೆಯಾಗಿದೆ ಎಂಬುದು ನಿಜ. ವೈದಿಕ, ಶೈವ, ಬೌದ್ಧ, ಜೈನ, ವೀರಶೈವ, ವೈಷ್ಣವ, ಇಸ್ಲಾಂ ಮತ್ತು ಕ್ರೈಸ್ತ ಮುಂತಾದ ಪ್ರಮುಖ ಧರ್ಮಗಳು ಈ ನಾಡಿನಲ್ಲಿ ನೆಲೆ ನಿಂತು ಬದುಕಿವೆ. ಆಳುವ ಅರಸರಿಂದ ಈ ಧರ್ಮಗಳಿಗೆ ಕಾರಣರಾದ ಸಂತರಿಂದ, ಅನುಯಾಯಿಗಳಿಂದ ಈ ಎಲ್ಲ ಧರ್ಮಗಳು ಕಾಲಾಂತರದಲ್ಲಿ ಬಂದ ಹಾಗೆಲ್ಲ ನೆಲೆ ಪಡೆದಿವೆ. ಜನಸಮುದಾಯಗಳು ಸ್ಪಂದಿಸಿವೆ. ಸ್ಪಂದಿಸುವುದಕ್ಕೆ ರಾಜಕೀಯ ಒತ್ತಡಗಳಿರಬಹುದು, ಪರಿಸ್ಥಿತಿಯ ಒತ್ತಡಗಳಿರಬಹುದು, ಆರಂಭ ಕಾಲದಲ್ಲಿ ಘರ್ಷಣೆಗಳು ನಡೆದಿರಬಹುದು, ಆದರೂ ಅನೇಕ ಮತ ಧರ್ಮಗಳಿಗೆ ನೆಲೆ ಮನೆಯಾದದ್ದರ ಜೊತೆಗೆ ಈ ಎಲ್ಲ ಧರ್ಮಗಳು ಜೊತೆಗೂಡಿ ವರ್ಧಿಸುವ ಅವಕಾಶವನ್ನು ಉದ್ದಕ್ಕೂ ಕಲ್ಪಿಸಿಕೊಟ್ಟಿದೆ. ಕರ್ನಾಟಕದಲ್ಲಿ ಪ್ರವರ್ಧಮಾನವಾದ ಮುಖ್ಯ ಧರ್ಮಗಳು ಇಲ್ಲಿನ ಸಾಹಿತ್ಯ ಹಾಗೂ ಕಲೆಗಳ ಬೆಳವಣಿಗೆಗೆ ಕಾರಣವಾಗಿದೆ ಎಂಬುದು ನಿಜ."[೨]

'ಕವಿರಾಜ ಮಾರ್ಗ'ಕಾರ ಹೇಳಿದ 'ಕುರಿತೋದದಯುಂ ಕಾವ್ಯಪ್ರಯೋಗ ಪರಿಣಿತ ಮತಿಗಳ್' ಎಂಬ ಮಾತು ತತ್ವಪದಕಾರರಿಗೆ ಅಕ್ಷರಶಃ ಅನ್ವಯಿಸುತ್ತದೆ. ಅನ್ಯ ವಿಚಾರಗಳನ್ನು, ಅನ್ಯಧರ್ಮಗಳನ್ನು ಪ್ರೀತಿಯಿಂದ ಗ್ರಹಿಸುವ ಗುಣ ಈ ಪ್ರಾಂತ್ಯದ ಜನ ಸಮುದಾಯಗಳಲ್ಲಿ ಮೂಡಲು ತತ್ವಪದಕಾರರು ಹಾಗೂ ತತ್ವಪದಗಾಯಕರು ಕಾರಣವಾಗಿದ್ದಾರೆ. ಇದರಿಂದ ಕವಿರಾಜಮಾರ್ಗಕಾರನ ಆದರ್ಶದ ಕೂಸುಗಳಂತೆ ತತ್ವಪದಕಾರರು ಕಾಣಿಸುತ್ತಾರೆ. ಈ ಕವಿಯ ಕನಸನ್ನು ನಮ್ಮ ಕೋಪಣಾಚಲ ನಾಡಿನ ಯಲಂಬುರ್ಗಿ (ಯಲಬುರ್ಗಾ) ಪ್ರದೇಶದ ತತ್ವಪದ ಹಾಡುಗಾರನಾಗಿ ರಾಜ್ಯಪ್ರಶಸ್ತಿ ಪಡೆದಿರುವ ಮಾರೆಪ್ಪ ಚೆನ್ನದಾಸರು ನನಸಾಗಿಸಿದ್ದಾರೆ ಎಂದರೆ ತಪ್ಪಾದೀತೆ?

ನಾಡಿನ ಚರಿತ್ರೆಯಲ್ಲಿ ಸಾಂಸ್ಕೃತಿಕ ಅಂಶಗಳಿಗೆ ಹೆಚ್ಚಿನ ಮಹತ್ವವನ್ನು ರಾಜ ಮಹಾರಾಜರು ಹಾಗೂ ಜನಸಾಮಾನ್ಯರು ನೀಡಿರುವುದನ್ನು ನಾವು ಗಮನಿಸಬಹುದು. ಅದರಲ್ಲೂ ಸಾಂಸ್ಕೃತಿಕ ಪರಂಪರೆ ಬೆಳೆಯಲು ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಆದಿವಾಸಿ ಬುಡಕಟ್ಟು ಸಮುದಾಯವೆಂದರೆ ತಪ್ಪಾಗಲಾರದು. ಅಂತಹ ಸಾಂಸ್ಕೃತಿಕ ಬೆಳವಣಿಗೆಯಲ್ಲಿ ಎಲೆಮರೆ ಕಾಯಿಯಂತೆ ಇರುವ ಕೊಪ್ಪಳ ಜಿಲ್ಲೆಯ ಯಲಬುರ್ಗಾ ಪ್ರದೇಶದ ಚೆನ್ನದಾಸರ ಸಮುದಾಯವೂ ಒಂದಾಗಿದೆ. ಈ

ಸಮುದಾಯದವರು ಸುಮಾರು ವರುಷಗಳಿಂದ ಉತ್ತರ ಕರ್ನಾಟಕದಲ್ಲಿ ಜನಪ್ರಿಯವಾಗಿರುವ ಬೊಬಲಾದಿ ಚಿಕ್ಕಯ್ಯ, ಕಡಕೋಳ ಮಡಿವಾಳಜ್ಜ, ಮಹಾಂತ ಶಿವಯೋಗಿ, ಕೂಡಲೂರೇಶ, ಸರ್ಪಭೂಷಣಶಿವಯೋಗಿ, ಶಿಶುನಾಳ ಶರೀಫ್‌ಸಾಹೇಬರು, ಕೂಡಲೂರು ಬಸವಲಿಂಗಶರಣರ ಸ್ವರ ವಚನಗಳು, ಮುದ್ದುವಾಲಿಯವರ ಸಂಕಲನದ 'ಸಿದ್ಧಪದಗಳು' ಮೊದಲಾದವರ ಏಕತಾರಿ ಪದಗಳನ್ನು ಕೇಳುಗರ ಮನಮಿಡಿಯುವಂತೆ ಅರ್ಥ ಹಾಗೂ ಧ್ವನಿ ಪೂರ್ಣವಾಗಿ ಹಾಡಿ ಸಾವಿರಾರು ಜನರ ಮನ ಗೆದ್ದಿದ್ದಾರೆ. ಹೀಗೆ ತತ್ವಪದಗಳನ್ನು ಮೌಖಿಕವಾಗಿ ರಕ್ಷಿಸಿಕೊಂಡುಬಂದ ಅಲೆಮಾರಿ ಸಮುದಾಯಕ್ಕೆ ಸೇರಿದ ಚೆನ್ನದಾಸರ ಸಮುದಾಯದ ಅದರಲ್ಲೂ ನನ್ನ ತಾಲ್ಲೂಕಿನಲ್ಲಿಯೇ ವಾಸವಾಗಿರುವ ಅಂದರೆ ಕೊಪ್ಪಳ ಜಿಲ್ಲೆಯ ಯಲಬುರ್ಗಾದ ಮಾಣಿ ಏಕತಾರಿ ಮಾರೆಪ್ಪ ಚೆನ್ನದಾಸರು ಹಾಡುವ ತತ್ವಪದಗಳ ಜೊತೆಗೆ ಆತನ ಜೀವನ ಚರಿತ್ರೆಯನ್ನು ಕಟ್ಟಿಕೊಡಲು ಬಯಸಿದ್ದೇನೆ.

೧.೧. ಅಧ್ಯಯನದ ಉದ್ದೇಶ ಮತ್ತು ಸ್ವರೂಪ

ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ತತ್ವಪದ ಸಾಹಿತ್ಯವು ತನ್ನದೇ ಆದ ಸ್ಥಾನವನ್ನು ಪಡೆದಿದೆ. ೧೨ನೇ ಶತಮಾನದಿಂದಲೇ ಇದರ ಹುಟ್ಟು-ಬೆಳವಣಿಗೆಯಾದರೂ ಮುಂದೆ ನಿಜಗುಣ ಶಿವಯೋಗಿ, ಮುಪ್ಪಿನ ಷಡಕ್ಷರಿ, ಸರ್ಪಭೂಷಣಶಿವಯೋಗಿ, ಬಾಲಲೀಲಾ ಮಹಾಂತಶಿವಯೋಗಿ, ಶಿಶುನಾಳ ಶರೀಫ್, ನೀರಲಕೇರಿಬಸವಲಿಂಗಶರಣ ಮುಂತಾದವರಿಂದ ಈ ಸಾಹಿತ್ಯ ಸಾಕಷ್ಟು ಬೆಳೆಯಿತು. ೧೮, ೧೯ನೇ ಶತಮಾನದಲ್ಲಿ ಈ ಸಾಹಿತ್ಯವು ಹೈದರಾಬಾದ್ ಕರ್ನಾಟಕದಲ್ಲಿ ಪ್ರಧಾನ ಪ್ರಕಾರವಾಗಿ ಬೆಳೆಯಿತು. ಬಹುಸಂಖ್ಯೆಯಲ್ಲಿ ತತ್ವಪದಕಾರರು ಕಾಣಿಸಿಕೊಂಡರು. ಈ ತತ್ವಪದ ಸಾಹಿತ್ಯವನ್ನು ಈ ಶತಮಾನದಲ್ಲಿ ಸಂಗ್ರಹಿಸುವ, ವ್ಯಾಖ್ಯಾನಿಸುವ ಕೆಲಸವನ್ನು ವಿದ್ವಾಂಸರು ಈಗಾಗಲೇ ಮಾಡಿದ್ದಾರೆ. ಆದರೂ ವಚನ ಸಾಹಿತ್ಯದ ಕಡೆ ಇದ್ದಷ್ಟು ಗಮನ, ಆಸಕ್ತಿ ಈ ಸಾಹಿತ್ಯದ ಕಡೆಗಿರಲಿಲ್ಲ. ವಚನ ಸಾಹಿತ್ಯಕ್ಕೆ ಅನೇಕ ಆಯಾಮಗಳು ಇರುವುದರಿಂದ ಈ ಶತಮಾನದ ಉದ್ದಕ್ಕೂ ಹೊಸ ಸಿದ್ಧಾಂತಗಳ ಜೊತೆ, ಹೊಸ ಚಿಂತಕರು ವಚನಗಳನ್ನು ಬಳಸಿಕೊಂಡು ಅನೇಕ ನಿಟ್ಟಿನಲ್ಲಿ ಅರ್ಥೈಸುತ್ತಾ ಬಂದಿದ್ದಾರೆ. ಆದರೆ ತತ್ವಪದಗಳು ಹೊಸ ಆಲೋಚನೆಗಳ ಜತೆ ಸೇರಿಕೊಂಡು ಬೆಳಕಿಗೆ ಬರಲಿಲ್ಲ. ಆಧ್ಯಾತ್ಮ, ಅನುಭಾವದ ಹಿನ್ನೆಲೆಯಲ್ಲಿ ಕೆಲವರು ಮಾತ್ರ ತತ್ವಪದ ಸಾಹಿತ್ಯವನ್ನು ಅರ್ಥೈಸುವ ಪ್ರಯತ್ನಮಾಡಿದ್ದಾರೆ. ಈಚಿನ ದಶಕದಲ್ಲಿ ಇದರ ಕಡೆ ವಿದ್ವಾಂಸರ ಗಮನ ಹರಿದಿದ್ದರೂ ತತ್ವಪದಗಳ ಸಂಗ್ರಹಕ್ಕೆ ಒತ್ತು ಬಿದ್ದಿದೆಯೇ ಹೊರತು ಅಧ್ಯಯನ ವ್ಯಾಖ್ಯಾನಗಳ ಕಡೆ ಅಲ್ಲ.

ತತ್ವಪದಗಳನ್ನು ಮತ್ತು ಅವುಗಳನ್ನು ಕಟ್ಟಿದ ಅನುಭಾವಿಗಳನ್ನು ಜನಸಮುದಾಯಗಳು ದೀರ್ಘಕಾಲದಿಂದ ತಮ್ಮದಾಗಿಸಿಕೊಂಡು ಅನೇಕ ಬಗೆಯಲ್ಲಿ ಬಳಸುತ್ತಾ ಬಂದಿವೆ. ಅನುಭಾವಿಗಳನ್ನು ದೈವಸ್ವರೂಪದಲ್ಲಿ ಸ್ವೀಕರಿಸಿ ಪೂಜಿಸುತ್ತವೆ. ಸಾಹಿತ್ಯಾಸಕ್ತರು ತತ್ವಪದಗಳ ಮೇಲೆ, ಅವುಗಳನ್ನೂ ಕಟ್ಟಿದವರ ಮೇಲೆ ವಿಶೇಷ ಒಲವಿರಿಸಿಕೊಂಡು ಸಂದರ್ಭಾನುಸಾರ ಚರ್ಚಿಸುತ್ತಾ, ಸಂಗ್ರಹಿಸುತ್ತಾ ಬಂದಿದ್ದಾರೆ.

ಕೊಪ್ಪಳ ಜಿಲ್ಲೆಯ ಯಲಬುರ್ಗಾ ತಾಲ್ಲೂಕಿಗೆ ಸೇರಿದ ಕುಕನೂರು ಮಹತ್ವದ ಐತಿಹಾಸಿಕ ಪರಂಪರೆಯನ್ನು ಪಡೆದ ಸಾಂಸ್ಕೃತಿಕ ಕೇಂದ್ರ. ಮಹಾಮಾಹೆಯ ಮಂದಿರವಿರುವ ಈ ಊರು ಹಿಂದೆ ಪ್ರಸಿದ್ಧ ಅಗ್ರಹಾರವಾಗಿತ್ತು. ಕುಕನೂರು, ಗುದ್ನೆಪ್ಪನಮಠ ಪ್ರದೇಶ ಇಂದು ಗ್ರಾನೈಟ್ ಕಲ್ಲುಗಳಿಗೆ ಪ್ರಸಿದ್ಧಿ ಪಡೆದಿದೆ. ಕೊಪ್ಪಳ ತಾಲ್ಲೂಕಿನ ಹಲಗೇರಿಯ ಹಲಗೇರಮ್ಮ, ಹುಲಿಗಿಯ ಹುಲಿಗೆಮ್ಮ ಈ ಪ್ರದೇಶದ ಪ್ರಮುಖ ಗ್ರಾಮದೇವತೆಗಳಾಗಿದ್ದಾರೆ.

ಶ್ರೀಮಂತ ಸಂಸ್ಕೃತಿಯನ್ನು ಹೊಂದಿರುವ ಕೊಪ್ಪಳ ಜಿಲ್ಲೆಯಲ್ಲಿ ಅನೇಕ ತತ್ವಪದಕಾರರಿದ್ದಾರೆ. ರಾಯಚೂರು ನಗರದ ದಲಿತ ತತ್ವಪದಕಾರರಿಗೆ, ಗುರುವಾಗಿದ್ದ ಹನುಮೇಶಪ್ಪನು ಕೊಪ್ಪಳ ಜಿಲ್ಲೆಯ ಯಲಬುರ್ಗಾ ತಾಲ್ಲೂಕಿನ ರಾಜೂರು ಗ್ರಾಮದ ನಿವಾಸಿಯಾಗಿದ್ದ. ಹನುಮೇಶಪ್ಪನ ಸಮಾಧಿ ಇಂದಿಗೂ ರಾಜೂರು ಗ್ರಾಮದಲ್ಲಿದೆ. ಯಲಬುರ್ಗಾ ತಾಲ್ಲೂಕಿನ ಬನ್ನಿಕೊಪ್ಪದಲ್ಲಿ ಹನುಮೇಶಪ್ಪನ ಶಿಷ್ಯರನೇಕರು ತತ್ವಪದಕಾರರಾಗಿದ್ದಾರೆ. ಈಗಾಗಲೇ ಕೊಪ್ಪಳ ಜಿಲ್ಲೆಯಿಂದ ಮೂವರು ತತ್ವಪದಕಾರರ ಹಾಡುಗಳನ್ನು ಸಂಗ್ರಹಿಸಿದ್ದಾರೆ. ಗಂಗಾವತಿ ತಾಲ್ಲೂಕಿನ ಹೆರೂರು ವಿರುಪಣ್ಣ, ಇದೇ ತಾಲೂಕಿನ ವಡಕಿ ತಾತಪಯ್ಯ ಹಾಗೂ ಯಲಬುರ್ಗಾ ತಾಲ್ಲೂಕಿನ ತಾಳಕೇರಿ ಬಸವರಾಜ, ಇವರ ಪ್ರಾತಿನಿಧಿಕ ಪದಗಳನ್ನು ಡಾ. ಬಸವರಾಜ ಸಬರದ ಅವರು ಸಂಪಾದಿಸಿದ್ದಾರೆ.

ಪ್ರಸ್ತುತ ನನ್ನ ಅಧ್ಯಯನದ ಉದ್ದೇಶ ಯಲಬುರ್ಗಾದಲ್ಲಿ ವಾಸವಾಗಿರುವ ಅಲೆಮಾರಿ ಸಮುದಾಯದ ತತ್ವಪದ ಹಾಡುಗಾರನಾಗಿರುವಂತಹ ಮಾರೆಪ್ಪ ಚೆನ್ನದಾಸರ ಜೀವನ ಮತ್ತು ಸಾಧನೆಯನ್ನು ಅಭ್ಯಸಿಸುವುದಾಗಿದೆ.

'ಜಾನಪದ' ಪದದ ಅರ್ಥವ್ಯಾಪ್ತಿ ವಿಶಾಲವಾದದ್ದು. ಜನಪದರ ನಡೆ, ನುಡಿ, ಬದುಕು-ಬವಣೆ ಜೀವನ ಮೌಲ್ಯಗಳೆಲ್ಲವೂ ಉತ್ಕೃಷ್ಟವಾಗಿವೆ ಎನ್ನುವಲ್ಲಿ ಸಂಶಯವಿಲ್ಲ. ಅವರು ಬಾಳಿ ಬದುಕಿದ ಬದುಕುತ್ತಿರುವ ರೀತಿ-ನೀತಿ ಜೀವನ ಧರ್ಮವನ್ನು ಕಡೆಗಣಿಸಲಾಗದು. ಆ ರೀತಿ ನೀತಿಗಳಿಂದ ನಾಗರೀಕ ಪ್ರಪಂಚ ಅರಿಯಬೇಕಾದ ಎಷ್ಟೋ ಅಂಶಗಳಿವೆ. ಇವು ಮಹತ್ವದ್ದಾಗಿವೆ.

ಜಾನಪದ ಅಧ್ಯಯನ ತನ್ನ ಕಾರ್ಯಕ್ಷೇತ್ರವನ್ನು ವಿಸ್ತರಿಸಿಕೊಳ್ಳುತ್ತಿರುವುದು, ತಮ್ಮ ಹೊಸ ಮುಖಗಳನ್ನು ಜೋಡಿಸಿಕೊಳ್ಳುತ್ತಿರುವುದು ನಮಗೆಲ್ಲರಿಗೂ ಗೊತ್ತಿರುವ ವಿಷಯ. ಜಾನಪದದ

ನಿಜವಾದ ವಾರಸುದಾರರ ಬಗೆಗಿನ ಹೆಚ್ಚಿನ ತಿಳುವಳಿಕೆಗೆ ಇವೊತ್ತು ಗಮನಿಸಿದ್ದೇವೆ. ಅವರ ಆತ್ಮಕಥೆಯನ್ನು ಜ್ಞಾನ ಸಾಮಗ್ರಿಯನ್ನು ಒಟ್ಟಿಗೆ ನೋಡುವ ಪರಿಪಾಟವೊಂದು ಬೆಳೆಯುತ್ತದೆ. ಇಂತಹ ಹಿನ್ನಲೆಯಲ್ಲಿ ನಿರೂಪಿಸಬೇಕೆಂಬ ಮಹತ್ವದ ಉದ್ದೇಶದಿಂದ ಮಾರೆಪ್ಪ ಚೆನ್ನದಾಸರನ ಜೀವನ ಮತ್ತು ಸಾಧನೆಯನ್ನು ಶ್ರದ್ಧಾಸಕ್ತಿ ಪರಿಶ್ರಮಗಳಿಂದ ಕಟ್ಟಿಕೊಡಲು ಪ್ರಯತ್ನಿಸಿದ್ದೇನೆ. ಜನಪದ ಸಾಹಿತ್ಯವನ್ನು ತಲೆಮಾರುಗಳ ಮೂಲಕ ಸಾಗಿಸಿಕೊಂಡು ಬಂದವರ ಹಿಂದೆ ಕೆಲಸ ಮಾಡುವ ಮನಸ್ಸುಗಳ ರೋಚಕ ಕಥೆಯ ವಿಶೇಷ ನಿದರ್ಶನವಾಗಿ ಈ ಸಂಶೋಧನಾ ಪ್ರಬಂಧದಲ್ಲಿ ತತ್ವಪದಗಳ ಮೂಲಕ ಹಾಡುಗಾರನ ಬದುಕನ್ನು ಹಿಂದಿನ ಪಾಡನ್ನು ಯಥೋಚಿತವಾಗಿ ದಾಖಲಿಸಿದ್ದೇನೆ.

ಊರಿಂದ ಊರಿಗೆ ಅಲೆಯುತ್ತಾ, ಮನೆ ಮನೆಗೆ ಹೋಗಿ ಹಾಡಿ ಭಿಕ್ಷಾಟನೆ ಮಾಡಿ ಹೊಟ್ಟೆ ಹೊರೆದು ಬದುಕು ಸಾಗಿಸುವ ಜನಪದ ವೃತ್ತಿಗಾಯಕರು ಹಸಿವು ಬಡತನಗಳಿಂದ ಬಳಲಿ ಹಾಡುತ್ತಾರೆ ಹಾಗೂ ನಲುಗಿ ಹೋಗುತ್ತಾರೆ. ಮಾರೆಪ್ಪ ಚೆನ್ನದಾಸರು ಜನಪದ ಕಲೆಯನ್ನು ತಮ್ಮ ಜೀವಾನಾಧಾರ ಮಾಡಿಕೊಂಡು 'ಏಕತಾರಿ' ಪದಗಳಲ್ಲಿ ಹೆಸರುಗಳಿಸಿದಂತಹ ಇವರನ್ನು ಅಧ್ಯಯನಕ್ಕೆ ಒಳಪಡಿಸುವುದೇ ಕುತೂಹಲವಾಗಿದೆ.

ಸಣ್ಣ ಸಣ್ಣ ಇಡಿ ಗೀತೆಗಳಿಂದ ಹಿಡಿದು ಮಹಾಕಾವ್ಯಗಳವರೆಗೆ ಎಲ್ಲವನ್ನು ತಮ್ಮ ಒಡಲಲ್ಲಿಟ್ಟುಕೊಂಡಿರುವ ಇವರು ಎಷ್ಟೋ ಮನೆ ಅಂಗಳದಲ್ಲಿ ಹಾಡಿದರೂ ಆರಂಭದ ತನ್ಮಯತೆಯನ್ನು ಎಲ್ಲಿಯೂ ಕಳೆದುಕೊಳ್ಳಲಿಲ್ಲ. ಭಿಕ್ಷೆ ಸಿಗಲಿ, ಸಿಗದಿರಲಿ ಹಾಡುವ ಹಾಡುಗಳು ಮಾತ್ರ ತನ್ನ ಸೊಗಸನ್ನು ಕಳೆದುಕೊಳ್ಳುವುದಿಲ್ಲ. ಸುಮಾರು ೬೦ ವರ್ಷಗಳಿಂದ ಜನಪದ ಏಕತಾರಿ ಪದಗಳನ್ನು ಹಾಡುತ್ತಾ ಉತ್ತರ ಕರ್ನಾಟಕದ ಗ್ರಾಮೀಣ ಪ್ರದೇಶದ ಜನರ ಮಾತಾಗಿರುವ ಮಾರೆಪ್ಪ ಚೆನ್ನದಾಸರು ಸತತ ಎಂಟು-ಒಂಬತ್ತು ತಾಸುಗಳಿಗೂ ಮಿಕ್ಕಿ ಅನೇಕ ತತ್ವಪದ ಹಾಡುಗಳನ್ನು ಹಾಡಬಲ್ಲವರು.

ಕಡುಬಡತನದಲ್ಲಿ ಹುಟ್ಟಿ ಬೆಳೆದು ಬಂದ ಇವರು ಓದಿದ್ದು ೪ನೇ ತರಗತಿ ಮಾತ್ರ. ಆದರೆ ಸುಮಾರು ೧೯೭೦ರ ಸಮಯ ಮಾರೆಪ್ಪ ಚೆನ್ನದಾಸರು ಧಾರವಾಡದಲ್ಲಿ ಬೀದಿ ಬೀದಿಗಳಲ್ಲಿ ಹಾಡುತ್ತಾ ಭಿಕ್ಷೆ ಬೇಡುತ್ತಾ ಇದ್ದ ಸಮಯ. ನಾಡಿನ ಹಿರಿಯ ಹಿಂದೂಸ್ಥಾನಿ ಗಾಯಕ ದಿ. ಡಾ॥ ಮಲ್ಲಿಕಾರ್ಜುನ ಮನ್ಸೂರರು ಮಾರೆಪ್ಪ ಚೆನ್ನದಾಸರ ಹಾಡುಗಳನ್ನು ಕೇಳಿಸಿಕೊಂಡು ಇವರನ್ನು ತಮ್ಮ ಮನೆಗೆ ಕರೆಸಿ ಮತ್ತೊಮ್ಮೆ ಹಾಡಿಸಿ, ಇವರ ಏಕತಾರಿ ಹಾಡಿಗೆ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಇವರಿಗೆ ಸಂದ ಪ್ರಶಸ್ತಿ, ಗೌರವಗಳು ಹಲವು ೧೯೮೫ರಲ್ಲಿ ರಾಜ್ಯ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ರಾಜ್ಯ ಪ್ರಶಸ್ತಿ ೦೬.೦೫.೧೯೮೫ರಲ್ಲಿ ರಾಜ್ಯ ಶ್ರೀ ಸಿದ್ಧರಾಮೇಶ್ವರ

ಸಂಸ್ಥಾನ ಹಿರೇಮಠದಲ್ಲಿ "ಕರುನಾಡು ಕೋಗಿಲೆ" ಎಂಬ ಬಿರುದು ಇವರಿಗೆ ದೊರೆತಿದೆ. ಕೃಷ್ಣಗೊಲ್ಲದಾಸರ ಕ್ಷೇತ್ರದಲ್ಲಿ ಸಲ್ಲಿಸಿದ ಸುದೀರ್ಘ ಜಾನಪದ ಸೇವೆಯನ್ನು ಪರಿಗಣಿಸಿ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ೧೯೮೬ರಲ್ಲಿ ಪ್ರಶಸ್ತಿ ಸನ್ಮಾನ ಮತ್ತು ಒಂದುಸಾವಿರ ರೂ. ನಗದು ಬಹುಮಾನ ನೀಡಿ ಗೌರವಿಸಿದೆ. ಹಾಗೂ ತಿಂಗಳಿಗೊಂದು ಜಾನಪದ ಕಾರ್ಯಕ್ರಮದಲ್ಲಿ ದಾಸರ ಪದಗಳ ಹಾಡಿನ ಸಾಧನೆಗಾಗಿ ಕರ್ನಾಟಕ ಜಾನಪದ ಟ್ರಸ್ಟ್ ೧೯೮೭ರಲ್ಲಿ ಇವರನ್ನು ಗೌರವಿಸಿ ಶಾಲು ಹೊದಿಸಿ ನೆನಪಿನ ಕಾಣಿಕೆ ನೀಡಿ ಸನ್ಮಾನಿಸಿದ್ದಾರೆ. ೨೦೦೪ರಲ್ಲಿ ರಾಜ್ಯ ಪ್ರಶಸ್ತಿ, ೧೭, ೧೮, ೧೯ – ೨೦೦೯ರಲ್ಲಿ ಜಾನಪದ ಜಾತ್ರೆ ಪ್ರಶಸ್ತಿಯೂ ಲಭಿಸಿದೆ.

ಇಷ್ಟೆಲ್ಲಾ ಪ್ರಶಸ್ತಿಗಳನ್ನು ಪಡೆದುಕೊಂಡು ಬಹೂಪಯೋಗಿ ಬದುಕನ್ನು ಸಾರ್ಥಕಗೊಳಿಸಿದ ಈ ಮಹಾನುಭಾವನ ಕುರಿತು ಸ್ಥೂಲವಾಗಿ ಅಲ್ಲದಿದ್ದರೂ ಲೇಖನಗಳು, ದಿನಪತ್ರಿಕೆ ಹಾಗೂ ಮಾಸಪತ್ರಿಕೆಗಳಲ್ಲಿ ಪ್ರಕಟಣೆಗೊಂಡಿದ್ದರೂ ಸಹ ಅವು ಅಪರಿಪೂರ್ಣವಾಗಿವೆ. ಹಾಗೂ ಇವರ ಕ್ಷೇತ್ರಕಾರ್ಯವನ್ನೊಳಗೊಂಡ ಯಾವುದೇ ಅಧ್ಯಯನಗಳು ವಿಶ್ವವಿದ್ಯಾಲಯದ ಮಟ್ಟದಲ್ಲಿ ನಡೆಯದೇ ಇರುವುದರಿಂದ ಈಗ ಆ ನಿಟ್ಟಿನಲ್ಲಿ ಅಧ್ಯಯನ ಮಾಡುವುದು ನನ್ನ ಅಧ್ಯಯನದ ಪ್ರಮುಖ ಉದ್ದೇಶವಾಗಿದೆ.

ಹೀಗೆ ಈ ಅಧ್ಯಯನ ಅಲೆಮಾರಿ ಸಮುದಾಯವೊಂದರ ಶ್ರೇಷ್ಠ ತತ್ವಪದ ಹಾಡುಗಾರನು ರೂಪುಗೊಂಡ ಬಗೆಯನ್ನು ವಿವರಿಸಿಕೊಳ್ಳಲು ಯತ್ನಿಸುತ್ತದೆ. ಸದರಿ ಕಲಾವಿದನ ಸಾಮಾಜಿಕ, ಸಾಂಸ್ಕೃತಿಕ ಹಾಗೂ ಆರ್ಥಿಕ ನೆಲೆಗಳಿಂದಲೇ ಅವನ ಕಲಾ ಬದುಕನ್ನು ಅಧ್ಯಯನಕ್ಕೊಳಪಡಿಸಲು ಇಲ್ಲಿ ಪ್ರಯತ್ನಿಸಲಾಗಿದೆ. ಭಾರತದ ಅಧಿಕಾರರಹಿತ ಸಮುದಾಯಗಳ ಸೃಜನಶೀಲ ಚೈತನ್ಯವನ್ನು ಅವುಗಳ ರಾಜಕೀಯಾರ್ಥಿಕ ನೆಲೆಗಳಿಂದಲೇ ಅರ್ಥಮಾಡಿಕೊಳ್ಳಬೇಕೆಂಬ ತಾತ್ವಿಕತೆಯೊಂದಿಗೆ ಇಲ್ಲಿನ ವಿವರಗಳಿಗೆ ಮುಖಾ ಮುಖಿಯಾಗಲು ಯತ್ನಿಸಲಾಗಿದೆ. ಏಕೆಂದರೆ ಭಾರತದ ಶೋಷಿತ ಸಮುದಾಯಗಳ ಅಂತಸ್ತು ಜಗತ್ತು ರೂಪಕಗಳಿಂದ ಕಿಕ್ಕಿರಿದ ಸಂಕೀರ್ಣ ಲೋಕ. ಅಲ್ಲಿ ಶುದ್ಧ ಶೈಕ್ಷಣಿಕ ಮಾನದಂಡಗಳು ತಲೆಕೆಳಗಾಗುತ್ತವೆ. ಈ ಕಾರಣಕ್ಕಾಗಿ ನಾನು ಅಧ್ಯಯನ ಮಾಡಲು ಹೊರಟಿರುವ ಕಲಾವಿದನನ್ನು ಆತನ ಸಾಮಾಜಿಕ, ಆರ್ಥಿಕ ಬದುಕಿನ ವಿವರಗಳೊಂದಿಗೆ ಅಧ್ಯಯನಕ್ಕೊಳಪಡಿಸುವುದು ಪ್ರಸ್ತುತ ಅಧ್ಯಯನದ ಉದ್ದೇಶವಾಗಿದೆ. ಯಾವುದೇ ಕಲೆ ಮತ್ತು ಸಂಸ್ಕೃತಿ ಆಯಾ ಸಮುದಾಯದ ಸಾಮಾಜಿಕ ಮತ್ತು ಆರ್ಥಿಕ ಬದುಕಿನ ಉತ್ಪನ್ನಗಳೆಂದೇ ಇಲ್ಲಿ ಭಾವಿಸಲಾಗಿದೆ. ಮಾರೆಪ್ಪ ಚೆನ್ನದಾಸರು ಜಾನಪದ ಕ್ಷೇತ್ರದಲ್ಲಿ ಸಲ್ಲಿಸಿರುವ ಸೇವೆಯನ್ನು ಈ ಅಧ್ಯಯನ ಗಂಭೀರವಾಗಿ ಪರಿಗಣಿಸುತ್ತದೆ.

/ ಮಾರೆಪ್ಪ ಚೆನ್ನದಾಸರನ್ನು ಯಾವ ಬಗೆಯ ಸಾಮಾಜಿಕ, ಆರ್ಥಿಕ ಒತ್ತಡಗಳನ್ನು ಅನುಭವಿಸಿದರು. ಯಾವ ಬಗೆಯ ಅಧಿಕಾರಗಳೂ ಇರದ ಅಲೆಮಾರಿ ಸಮುದಾಯ ವೊಂದರಿಂದ ಬಂದ ಮಾರೆಪ್ಪನ ಒಳಗೆ, ಅಗಾಧ ಪ್ರತಿಭೆಯ ಕಲಾವಿದನು ರೂಪಗೊಂಡ ಬಗೆ ಯಾವುದು? ಎಂಬ ಪ್ರಶ್ನೆಗಳು ಇಲ್ಲಿ ಮಹತ್ವವೆಂದೇ ನಂಬಲಾಗಿದೆ ಹಾಗೂ ಆತನು ಹಾಡುವ ಪ್ರಮುಖ ತತ್ವಪದಗಳು ಯಾವುವು? ಎಂಬ ಪ್ರಶ್ನೆಯನ್ನು ಕೇಳಿಕೊಳ್ಳಲಾಗಿದೆ. ಜೊತೆಗೆ ಅವುಗಳ ವಿಶ್ಲೇಷಣೆಯನ್ನು ಮಾಡಲಾಗಿದೆ. ನಂತರದಲ್ಲಿ ಮಾರೆಪ್ಪ ಚೆನ್ನದಾಸರನ್ನು ಹಾಡುವ ತತ್ವಪದಗಳು ಇಂದಿನ ಸಮಾಜಕ್ಕೆ ಹೇಗೆ ಉಪಯುಕ್ತವಾಗಿವೆ ಎಂಬುದನ್ನು ಅರ್ಥೈಸುವ ಪ್ರಯತ್ನವನ್ನು ಈ ಅಧ್ಯಯನದಲ್ಲಿ ಕೈಗೊಳ್ಳಲಾಗಿದೆ.

ಅಧ್ಯಯನದ ವ್ಯಾಪ್ತಿ:

"ಮಾರೆಪ್ಪ ಚೆನ್ನದಾಸರ ಜೀವನ ಮತ್ತು ಸಾಧನೆ" ಎಂಬ ವಿಷಯದ ಹಿನ್ನೆಲೆಯಲ್ಲಿ, ಮಾರೆಪ್ಪ ಚೆನ್ನದಾಸರು ಪ್ರಮುಖ ತತ್ವಪದ ಗಾಯಕರಾಗಿ ಹಲವು ತತ್ವಪದಗಳನ್ನು ಹಾಡಿದ್ದಾರೆ. ಹಾಗೇ ಕೆಲವು ತತ್ವಪದಗಳನ್ನು ರಚಿಸಿದ್ದಾರೆ. ಇವರ ಇಡಿಯಾದ ತತ್ವಪದ ಸಾಹಿತ್ಯ ರಚನೆಯನ್ನು ಹಾಗೂ ಅವರ ಜೀವನ ಮತ್ತು ಸಾಧನೆಯನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ. ಇದಕ್ಕೆ ಪೂರಕವಾಗಿ ಬರೆದಂತಹ ಲೇಖನಗಳು, ದಿನಪತ್ರಿಕೆಗಳಲ್ಲಿ ಪ್ರಕಟವಾದ ಮಾಹಿತಿಗಳನ್ನು ಕೂಡಾ ಗಮನಿಸಲಾಗಿದೆ.

ಅಧ್ಯಯನದ ವಿಧಾನ

ಮಾರೆಪ್ಪ ಚೆನ್ನದಾಸರ ಜೀವನ ಮತ್ತು ಸಾಧನೆಯನ್ನು ಕಟ್ಟಿಕೊಡಲು ಆತನನ್ನು ಸಂದರ್ಶಿಸುವ ಮೂಲಕ ಹಾಗೂ ಕ್ಷೇತ್ರಕಾರ್ಯಕ್ಕೆ ತೆರಳಿ ವಕ್ತೃಗಳಿಂದ ಮಾಹಿತಿಯನ್ನು ಪಡೆಯುವುದರ ಮೂಲಕ ಹಾಗೂ ಮಾಸಪತ್ರಿಕೆ, ದಿನಪತ್ರಿಕೆ, ವಾರಪತ್ರಿಕೆಗಳಲ್ಲಿ ಮಾರೆಪ್ಪನನ್ನು ಕುರಿತು ಪ್ರಕಟಣೆಗೊಂಡ ಲೇಖನಗಳನ್ನು ಅಭ್ಯಸಿಸಿ ಇದಕ್ಕೆ ಪೂರಕವಾದ ಮಾಹಿತಿಯನ್ನು ಪಡೆದುಕೊಂಡಿದ್ದೇನೆ. ಅಲ್ಲದೆ ಮಾರೆಪ್ಪ ಚೆನ್ನದಾಸರು, ಹಾಡಿರುವಂತಹ ಪ್ರಮುಖ ತತ್ವಪದಗಳನ್ನು ಜಾನಪದೀಯ ನೆಲೆಯಲ್ಲಿ ಗ್ರಹಿಸಿದ್ದೇನೆ. ಇವರ ತತ್ವಪದಗಳಲ್ಲಿ ಭಕ್ತಿ, ವೈರಾಗ್ಯ, ಮೋಕ್ಷಸಂಪಾದನೆ ಹಾಗೂ ಮಾನವೀಯ ಮೌಲ್ಯಗಳನ್ನು ಪ್ರತಿಬಿಂಬಿಸುವಂತಹ ಅಂಶಗಳನ್ನು ಗುರುತಿಸಬಹುದು/ ಈ ಹಿನ್ನೆಲೆಯಲ್ಲಿ 'ಮಾರೆಪ್ಪ ಚೆನ್ನದಾಸರ ಜೀವನ ಮತ್ತು ಮತ್ತು ಸಾಧನೆ' ಎಂಬ ವಿಷಯವನ್ನು ಕುರಿತಂತೆ ವಿವರಣಾತ್ಮಕವಾಗಿ ಹಾಗೂ ವಿಶ್ಲೇಷಣಾತ್ಮಕವಾಗಿ ಅಧ್ಯಯನ ಮಾಡಲಾಗಿದೆ.

ಅಡಿಟಿಪ್ಪಣಿಗಳು

೧. ಬಸವರಾಜ ಸಬರದ (ಸಂ); ಹೈದರಾಬಾದ್ ಕರ್ನಾಟಕದ ತತ್ವಪದಗಳು; ಪುಟ-೮

೨. ಅಮರೇಶ ನುಗಡೋಣಿ; ನುಡಿವ ಬೆಡಗು; ಪುಟ-೮.

ಅಧ್ಯಾಯ - ೨

ಮಾರೆಪ್ಪ ಚೆನ್ನದಾಸರ ಜೀವನ ಮತ್ತು ಸಾಧನೆ

ಮಾರೆಪ್ಪ ಚೆನ್ನದಾಸರ ಜೀವನ ಮತ್ತು ಸಾಧನೆ

೨.೧. ಬಾಲ್ಯ

ಬಡತನವನ್ನು ಬೆನ್ನಿಗಂಟಿಸಿಕೊಂಡೇ ಬದುಕಿಗೆ ಕಾಲಿಟ್ಟ ಮಾರೆಪ್ಪ ಹುಟ್ಟಿದ್ದು ಕಡುಬಡುತನ ಅನುಭವಿಸುತ್ತಿದ್ದ, ಮಾರೆಪ್ಪ ದುರುಗಮ್ಮ ಎಂಬ ದಂಪತಿಗಳ ಉದರದಲ್ಲಿ. ೧೬ನೇ ಜನವರಿ ೧೯೩೧ರಂದು ಗದಗ ಜಿಲ್ಲೆಯ ಮುಳಗಂದ ಎಂಬ ಗ್ರಾಮದಲ್ಲಿ ಜನಿಸಿದರು. ಅಪ್ಪಟ ದೈವಭಕ್ತರಾಗಿದ್ದರಿಂದ ಮಗನಿಗೂ ಸಹ 'ಮಾರೆಪ್ಪ' ಎಂದೇ ಹೆಸರಿಟ್ಟರು.

ಕಡುಬಡತನ ಅನುಭವಿಸುತ್ತಿದ್ದ ಜೋಪಡಿಯ ಮಧ್ಯದಲ್ಲಿ ಬುಡ್ಡಿಯ ಬೆಳಕಿನಲ್ಲಿ ಕಣ್ಣರಳಿಸುತ್ತಿದ್ದ ಈ ಮಗು ಮುಂದೊಂದು ದಿನ ನಾಡಿಗೆ ಹೆಸರು ಮಾಡುವ ದಾಸನಾಗುತ್ತಾನೆಂದು ಆಗ ಯಾರು ಎಣಿಸಿರಲಿಲ್ಲ. ಈ ಸಮಯದಲ್ಲಿ (೧೯೩೧) ನಾಡಿನಲ್ಲಿ ಬರಗಾಲದ ಛಾಯೆ ಆವರಿಸಿದ್ದರಿಂದ ಅಲೆಮಾರಿ ಜನಾಂಗದ ಈ ಕುಟುಂಬ ಏಕತಾರಿ ಹಿಡಿದು ನಾಡಿನ ತುಂಬೆಲ್ಲಾ ಅಲೆದಾಡಿ ಜೋಳಿಗೆ ತುಂಬಿಸಿಕೊಳ್ಳುತ್ತಿರುವ ದಿನಗಳವು. ಅಲೆಯುತ್ತಾ ಅಲೆಮಾರಿಯಾಗಿ ಹತ್ತಾರು ಊರುಗಳಲ್ಲಿ ಗಿರಕಿ ಹೊಡೆದು ನಾಲ್ಕಾರು ವರ್ಷ ಶಾಶ್ವತ ನೆಲೆಯೂರಿದ್ದು ಈಗಿನ ಕೊಪ್ಪಳ ಜಿಲ್ಲೆಯ ಯಲಬುರ್ಗಾ ತಾಲ್ಲೂಕಿನ 'ಲಿಂಗನಬಂಡಿ' ಎಂಬ ಕುಗ್ರಾಮದಲ್ಲಿ. ಆ ಸಮಯದಲ್ಲಿಯೇ ಮಾರೆಪ್ಪನಿಗೆ ಶಿಕ್ಷಣದ ಭಾಗ್ಯ ಲಭಿಸಿದ್ದು ಎನ್ನಬಹುದು.

ಮಾರೆಪ್ಪ ತನ್ನೆಲ್ಲಾ ಸಂಕಷ್ಟಗಳ ಮಧ್ಯೆಯು ಹಿರಿಯ ಮಗನಾದ ಮಾರೆಪ್ಪನನ್ನು ಶಾಲೆಗೆ ಸೇರಿಸಲು ಇಚ್ಛಿಸಿದ. ಓಣಿಯ ಹುಡುಗರೊಂದಿಗೆ ಆಟ ಆಡಿಕೊಂಡು ಆಗೊಮ್ಮೆ, ಈಗೊಮ್ಮೆ ಅಪ್ಪನ ಹಿಂದೆ ತಂಬೂರಿ ಹಿಡಿದುಕೊಂಡು, ಸಾಯಂಕಾಲದ ಸಮಯದಲ್ಲಿ ಅವ್ವ ದುರಗಮ್ಮಳ ಹಿಂದೆ ಊರ ಮನೆಗೆ ಭಿಕ್ಷೆಗೆ ಹೋಗಿ ಇಷ್ಟೇ ಜೀವನ ಎಂದು ಭಾವಿಸಿದ್ದ ಮಾರೆಪ್ಪನಿಗೆ ಶಾಲೆಯ ಪರಿಸರ ಹೊಸದೆನಿಸಿತು. ಶಾಲೆಗೆ ಹೋಗಲು ಒಪ್ಪಲಿಲ್ಲ. ಆದರೆ ಅಪ್ಪನ ಒತ್ತಾಸೆ ಹಾಗೂ ಖಾಸಗಿ ಶಾಲೆಯ ಮಾಸ್ತರರಾದ ಶ್ರೀ ಅಡವಿರಾವ್ ಕುಲಕರ್ಣಿಯವರ ಪ್ರೀತಿಯ ಕರೆಗೆ ಓಗೊಟ್ಟು ಶಾಲೆಗೆ ಹಾಜರಾಗುತ್ತಿದ್ದ. ಆಗೆಲ್ಲಾ ಈಗಿನಂತೆ ಸರ್ಕಾರಿ ಶಾಲೆಗಳಿರಲಿಲ್ಲ. ಊರ ಗೌಡರೇ ಮಾಸ್ತರ ಒಬ್ಬರನ್ನು ಕರೆದುಕೊಂಡು ಬಂದು ಊರ ಹನ್ಮಂತದೇವರ ಗುಡಿಯಲ್ಲಿ ಶಾಲೆಯನ್ನು ನಡೆಸುತ್ತಿದ್ದರು.

[illegible]

[illegible]

[illegible]

[illegible]

ಶಾಲೆಗೆ ಹಾಜರಾಗುವ ವಿದ್ಯಾರ್ಥಿಗಳು ದವಸ, ಧಾನ್ಯ, ತಮ್ಮ ಜಮೀನಿನಲ್ಲಿ ಬೆಳೆದ ತರಕಾರಿ, ಹಟ್ಟಿಯಲ್ಲಿ ಬಂದ ಹಾಲು, ಬೆಣ್ಣೆ ಇಂತಹ ವಸ್ತುಗಳನ್ನು ಶುಲ್ಕದ ರೂಪದಲ್ಲಿ ಮಾಸ್ತರರಿಗೆ ನೀಡಿ ಶಿಕ್ಷಣ ಪಡೆದುಕೊಳ್ಳುತ್ತಿದ್ದರು. ಇನ್ನು ಹಬ್ಬ ಹರಿದಿನಗಳಲ್ಲಿ ಮಾಸ್ತರ ಮನೆಗೆ ವಿದ್ಯಾರ್ಥಿಗಳಿಂದ ಹಬ್ಬದ ಉಡುಗೊರೆಯಾಗಿ (ಉಲ್ಪಿ) ಅಂದರೆ ಬೆಲ್ಲ, ಹಿಟ್ಟು, ಕೊಬ್ಬರಿ, ಎಣ್ಣೆ ಇಂತಹ ವಸ್ತುಗಳನ್ನು ನೀಡುತ್ತಿದ್ದರು. ಇದರಿಂದಲೇ ಮಾಸ್ತರ ಕುಟುಂಬ ನಡೆಯಬೇಕಾಗಿತ್ತು.

ಸಾಮಾನ್ಯವಾಗಿ ಮೇಲ್ವರ್ಗದ ಜನರಿಗೆ ಮೀಸಲಾಗಿದ್ದ ಶಿಕ್ಷಣ, ಈಗಿನ ಹಾಗೆ ಎಲ್ಲ ಹಳ್ಳಿಗಳಲ್ಲಿ ಸರ್ಕಾರಿ ಶಾಲೆಗಳು ಇದ್ದಿಲ್ಲ. ಖಾಸಗಿ ಶಾಲೆಗಳಲ್ಲಿ ಮುಲ್ಕಿ ಪರೀಕ್ಷೆ ಪಾಸಾದರೆ ಅದೊಂದು ಪದವಿಯೇ ಸರಿ. ಅಂತಹ ದಿನಗಳಲ್ಲಿ ಮಾರೆಪ್ಪನ ಕುಟುಂಬ ಕಾಕತಾಳೀಯವೆಂಬಂತೆ ಶಾಲೆಗೆ ಬಂದದ್ದು ಒಂದು ವಿಚಿತ್ರವೇ ಸರಿ. ಮಾರೆಪ್ಪನ ಶಿಕ್ಷಣ ಒಂದನೇ ತರಗತಿಯಿಂದ ನಾಲ್ಕನೇ ತರಗತಿಯವರೆಗೆ ಇದೇ ಶಾಲೆಯಲ್ಲಿ ಮುಗಿಯಿತು. ಈ ಶಾಲೆಯಲ್ಲಿ ಇದೇ ತರಗತಿ ಅಂತಿಮವಾಗಿದ್ದರಿಂದ ಮುಂದಿನ ತರಗತಿಗೆ ಹೋಗಬೇಕಾದರೆ ಗಾವುದ ದೂರ ನಡೆದುಕೊಂಡೇ ಹೋಗಬೇಕಾಗಿತ್ತು. ಈ ಕಾರಣದಿಂದ ಮಾರೆಪ್ಪನ ಶಿಕ್ಷಣ ಇಲ್ಲಿಗೆ ಮೊಟಕುಗೊಂಡಿತು. ಆಗ ಇವರ ಕುಟುಂಬದ ನೆಲೆಯೂ ಬದಲಾಯಿತು. ಅಲೆಮಾರಿ ಬದುಕಿನಂತೆ ಅವರ ಕುಟುಂಬದ ಬಂಡಿ ಲಿಂಗನಬಂಡಿಯಿಂದ ರಾಯಚೂರು ಜಿಲ್ಲೆಯತ್ತ ಪ್ರಯಾಣ ಬೆಳೆಸಿತು. ಜನಪದ ಸಂಸ್ಕೃತಿಯ ಜನಾಂಗಿಕ ಹಿನ್ನೆಲೆಯಿಂದ ಹುಟ್ಟಿ ಬಂದ ಮಾರೆಪ್ಪನವರು ತಮ್ಮ ಮೂಲ ಕಲೆಯಾದ ಜನಪದ ಹಾಡುಗಾರಿಕೆಯನ್ನು ಬಿಡದೇ ಬೆಳೆಸಿಕೊಂಡು ಬಂದವರು. ಇದೇ ಕಸುಬಿನಲ್ಲಿದ್ದ ಇವರ ತಂದೆ ಆರ್ಥಿಕ ಮುಗ್ಗಟ್ಟಿಗೆ ಸಿಲುಕಿದಾಗ ಜಿಲ್ಲೆಯಾದ್ಯಂತ ಕೋಲೆಬಸವನನ್ನು ಹಿಡಿದು ಸಾಗಿದರು. ಅಲ್ಲಲ್ಲಿ ವಾಸ್ತವ್ಯ ಹೂಡುತ್ತಾ ಜೀವನ ಸಾಗಿಸುತ್ತಿದ್ದರು. ಕೆಲ ದಿನಗಳ ನಂತರ ಈ ಅಲೆಮಾರಿ ಕುಟುಂಬ ಇದೇ ಜಿಲ್ಲೆಯ ಲಿಂಗಸೂರು ತಾಲ್ಲೂಕಿನ ನೀರಲೂಟಿ ಗ್ರಾಮಕ್ಕೂ ಬಂದಿತ್ತು. ಸಂಗೀತ ಸಾಧನಗಳನ್ನು ಅಭ್ಯಸಿಸಬೇಕು, ಹೊಸದನ್ನು ಕಲಿಯಬೇಕು, ಸಾಧನೆ ಮಾಡಬೇಕು ಎಂಬ ಮಹತ್ವಕಾಂಕ್ಷೆ ಹೊಂದಿದ್ದ ಮಾರೆಪ್ಪನಿಗೆ ಇದೇ ಊರಿನಲ್ಲಿ ಅವರ ಜನಾಂಗದವರೆ ಆದ ರಾಮಣ್ಣ ಮಾಸ್ತರ ಎಂಬುವರ ಪರಿಚಯವಾಯಿತು. ರಾಮಣ್ಣ ಮಾಸ್ತರರು ಪಿಟೀಲು ನುಡಿಸುವುದರಲ್ಲಿ ತಕ್ಕ ಮಟ್ಟಿಗೆ ಸಾಧನೆ ಮಾಡಿಕೊಂಡವರಾಗಿದ್ದರು. ಜೋಪಡಿಯ ಸಂಧಿಯಿಂದ ಪಿಟೀಲಿನ ನಾದ ಮಾರೆಪ್ಪನ ಕಿವಿಗೆ ಬೀಳುತ್ತಿದ್ದಂತೆ ಮಾರೆಪ್ಪ ನಾದದ ದಿಕ್ಕು ಹಿಡಿದು ಮಾಸ್ತರರ ಬಳಿಗೆ ಹೋಗುತ್ತಿದ್ದನು. ಹುಡುಗನ ಆಸಕ್ತಿ ಗಮನಿಸಿದ ರಾಮಣ್ಣ ಮಾಸ್ತರರು ಕೋಲೆ ಬಸವ ಮಾರೆಪ್ಪನಿಗೆ “ನಿನ್ನ ಮಗನಿಗೆ ಪಿಟೀಲು ಕಲಿಯಬೇಕೆಂಬ ಆಸೆ ಬಹಳ ಐತೆ. ಬೇಕಾದರೆ ಕಳಿಸಿಕೊಡು, ಕಲಿಸಿಕೊಡತೀನಿ”[೧] ಎಂದಿದ್ದರು. ಹೊಟ್ಟೆಗೆ ಹಿಟ್ಟಿಲ್ಲದಾಗ ಜುಟ್ಟಿಗೆ ಮಲ್ಲಿಗೆ ಏಕೆ ಎಂದು ಜರಿದ ಮಾರೆಪ್ಪ ಅರೆ

ಮನಸ್ಸಿನಿಂದಲೇ ಉಚಿತ ಪಿಟೀಲು ಶಿಕ್ಷಣಕ್ಕೆ ರಾಮಣ್ಣನ ಬಳಿಗೆ ಕಳಿಸಿದರು. ಮೂರು ವರ್ಷಗಳ ಕಾಲ ಗುರುವಿನ ಮನೆಯಲ್ಲಿ ನೀರು, ಕಟ್ಟಿಗೆ, ಕುಳ್ಳು ತರುತ್ತಾ ಗುರುಸೇವೆ ಮಾಡುತ್ತಾ ಪಿಟೀಲು ವಾದನ ಮತ್ತು ತತ್ವ ಪದಗಳನ್ನು ಕಲಿತುಕೊಂಡನು. ಮೂರು ವರ್ಷಕ್ಕಿಂತ ಹೆಚ್ಚಿನ ಅವಧಿಗೆ ಅಭ್ಯಾಸ ಮಾಡಿದ್ದರೆ ಮುಂದೆ ಇನ್ನೆಂತಹ ಸಾಧನೆ ಮಾಡುವ ಅವಕಾಶ ಕಾಯ್ದಿತ್ತೋ ಗೊತ್ತಿಲ್ಲ. ಗುರುಗಳ ಅನಾರೋಗ್ಯದ ನಿಮಿತ್ತ ಮೂರು ವರ್ಷಕ್ಕೆ 'ಮಾರೆಪ್ಪನು ಶಾಸ್ತ್ರೀಯವಾಗಿ ಸಂಗೀತ ಕಲಿಯಬೇಕೆನ್ನುವ ಆಸೆ ನಿಂತೇ ಹೋಯಿತು.'

ಅಷ್ಟಿಷ್ಟು ಕಲಿತುಕೊಂಡಿದ್ದ ಮಾರೆಪ್ಪ ಅವುಗಳಿಗೆ ತಾಲೀಮು ನೀಡಿ ಪಕ್ವವಾಗಿಸಿಕೊಂಡನು. ಅಷ್ಟೊತ್ತಿಗೆ ಹಳೆಯ ಪಿಟೀಲು ಒಂದನ್ನು ಖರೀದಿಸಿದನು. ಆರಂಭದಲ್ಲಿ ಸಿನಿಮಾ ಪದಗಳನ್ನು ಹಾಡುತ್ತಾ ಅಲೆಮಾರಿ ಜೀವನ ನಡೆಸಿದ ಹಂತ ಹಂತವಾಗಿ ಅಲ್ಲಲ್ಲಿ ಕೇಳಿದ ಹಾಡುಗಳನ್ನು ಸಂಗ್ರಹಿಸಿಕೊಂಡು ಅವುಗಳಿಗೆ ಒಂದು ಚೌಕಟ್ಟು ನೀಡಿದ. ದಿಬ್ಬಣ ಪದಗಳು, ಪ್ರಾಸ ಪದಗಳು, ದಾಸರ ಹಾಡುಗಳು, ಜನಪದಗಳು ಹೀಗೆ ನೂರೆಂಟು ಹಾಡುಗಳು ಆತನ ಕಂಠದಲ್ಲಿ ಮೊಳಗುತ್ತಿದ್ದವು. ಈ ಎಲ್ಲಾ ಹಾಡುಗಳಲ್ಲಿ 'ತತ್ವಪದಗಳಿಗೆ' ಹೆಚ್ಚಿನ ಪ್ರಾಶಸ್ತ್ಯ ನೀಡಿ ಅವುಗಳಿಗೊಂದು ವೇದಿಕೆಯನ್ನು ನಿರ್ಮಿಸಿಕೊಟ್ಟರೆಂದು ಹೇಳಬಹುದು. ಹೀಗೆ ಹಾಡು ಹಾಡುವ ಭಿಕ್ಷುಕ ಹುಡುಗನಾಗಿ ಪರಿಚಿತಗೊಂಡು ಕ್ರಮೇಣ ಹಾಡು ಹಾಡುವ ಚೆನ್ನದಾಸರ ಕಲಾವಿದನಾಗಿ ಮುಂದೆ ಇಡೀ ನಾಡಿಗೆ ತತ್ವಪದ ಗಾಯಕನಾಗಿ ಎಲ್ಲರ ಮನದಲ್ಲಿ ನೆಲೆಯೂರಿದವನೇ ಈ ಮಾರೆಪ್ಪ.

೨.೨. ಕೌಟುಂಬಿಕತೆ

"ಮಾರೆಪ್ಪ ಚೆನ್ನದಾಸರ ಪೂರ್ವಜರು ಮೂಲತಃ ಆಂಧ್ರದವರು. ಆಂಧ್ರಮೂಲದ ಈ ಚೆನ್ನದಾಸರಿಗೆ 'ಕಂಚಿ ತಾತಾಚಾರ್ಯರು' ಪೂರ್ವದ ಗುರುಗಳಾಗಿದ್ದರು. ತಿರುಪತಿ ವೆಂಕಟರಮಣನ ಇವರ ಆರಾಧ್ಯ ದೇವರು ಜತೆಗೆ ನರಸಿಂಹಸ್ವಾಮಿ, ಚೆಲುವರಾಯಸ್ವಾಮಿ ಹಾಗೂ ಶ್ರೀರಂಗನಾಥ ದೇವರು ಹನುಮಪ್ಪ ಸ್ವಾಮಿಯ ಭಕ್ತರಾಗಿದ್ದಾರೆ. ಸಇವರು ಪರಿಶಿಷ್ಟ ಜಾತಿಯ ಪಾಯಿಲರ್ ಪಂಗಡಕ್ಕೆ ಸೇರಿದವರಾಗಿದ್ದಾರೆ."[೨]

ಮಾರೆಪ್ಪ-ದುರುಗಮ್ಮ ಎಂಬ ದಂಪತಿಗಳು ಐದು ಜನ ಗಂಡು ಮಕ್ಕಳು ಹಾಗೂ ಇಬ್ಬರು ಹೆಣ್ಣುಮಕ್ಕಳಿಗೆ ಜನ್ಮ ನೀಡಿದರು. ಮನೆಯ ಹಿರಿಯ ಮಗನಾಗಿ ಮಾರೆಪ್ಪ ಹುಟ್ಟಿದನು. ನಂತರ ಸಂಜೀವಪ್ಪ, ಆಂಜನೆಪ್ಪ, ವೆಂಕಪ್ಪ, ಬಾಲಪ್ಪ, ಇವರ ನಂತರ ಯಮನವ್ವ, ವೆಂಕವ್ವ ಹುಟ್ಟಿದರು. ಇವರ ತಂದೆಯ ಉದ್ಯೋಗ ಕೋಲೆ ಬಸವನನ್ನು ಹಿಡಿದುಕೊಂಡು ಮನೆಮನೆಗೆ ಹೋಗಿ ಭಿಕ್ಷಾಟನೆ ಮಾಡುವುದಾಗಿತ್ತು. ಇವರಿಗೆ ಸ್ವಂತದ್ದೂ ಅಂತ ಹೊಲ ಮನೆ ಏನೂ ಇರಲಿಲ್ಲ.

[illegible]

[illegible]

[illegible]

[illegible]

ಅಲೆಮಾರಿ ಜೀವನ ನಡೆಸಿ ಭಿಕ್ಷೆ ಬೇಡಿಯೇ ಇವರು ಹೊಟ್ಟೆ ತುಂಬಿಸಿಕೊಳ್ಳುತ್ತಿದ್ದರು. ಇವರ ಕುಟುಂಬದಲ್ಲಿ ದಿನದಿಂದ ದಿನಕ್ಕೆ ಬಡತನದ ಸಮಸ್ಯೆಗಳು ಇದ್ದರೂ ಕೂಡಾ ಸಣ್ಣಪುಟ್ಟ ಕೆಲಸ ಮಾಡಿಕೊಂಡು ಜೀವನ ಸಾಗಿಸುತ್ತಿದ್ದರು. ಕುಟುಂಬದ ಹೊರೆಯನ್ನು ತಾಳಲಾರದೆ ಹಿರಿಯ ಮಗನಾದ ಮಾರೆಪ್ಪ ಹೆಗಲಿಗೆ ಜೋಳಿಗೆ ಹೇರಿ ಕೈಯಲ್ಲಿ ಒಂದು ಏಕತಾರಿ ಹಿಡಿದು ತತ್ವಪದಗಳನ್ನು ಹಾಡುತ್ತಾ ಭಿಕ್ಷಾಟನೆಯಲ್ಲಿ ತೊಡಗಿದನು.

ದಿನಗಳು ಉರುಳಿದಂತೆಲ್ಲಾ ತಮ್ಮ ಇನ್ನುಳಿದ ಮಕ್ಕಳು ಸಹ ದುಡಿಯುವ ವಯಸ್ಸಿಗೆ ಬಂದರು. ತಂದೆಯಂತೆ ಮಕ್ಕಳು ಸಹ ವಂಶಪಾರಂಪರ್ಯವಾಗಿ ಬಂದ ವೃತ್ತಿಯಲ್ಲೇ ತೊಡಗಿದರು. ಹಿರಿಯ ಮಗನಾದ ಮಾರೆಪ್ಪನಿಗೆ ೨೫ನೇ ವಯಸ್ಸಿನಲ್ಲಿ ದುರುಗವ್ವಳೊಡನೆ ಮದುವೆ ಮಾಡಿ ಕುಟುಂಬದ ಹೆಚ್ಚಿನ ಹೊಣೆಯನ್ನು ಹೊರಿಸಿದರು. ಹಗಲು ರಾತ್ರಿ ಎನ್ನದೆ ದಿನಾಲು ಊರಿಂದೂರಿಗೆ ಸುತ್ತಿಕೊಂಡು ಬಂದು ಜನರು ಕೊಟ್ಟ ದವಸ ಧಾನ್ಯಗಳನ್ನು ತಂದು, ಅದರಿಂದಲೇ ಜೀವನ ಸಾಗಿಸುತ್ತಿದ್ದರು. ಹೆಚ್ಚಿನ ಶ್ರಮವಹಿಸಿ ತತ್ವಗೀತೆಗಳನ್ನು ಕಲಿತು ಏಕತಾರಿ ಮೀಟಿ, ಹಾಡುತ್ತಾ ಹೋದರೆ ಕೈಗೆ ಸಿಗುವುದು ಮೂರು ನಾಲ್ಕು ಕಾಸು ಮಾತ್ರ. ಇದರಿಂದಾಗಿ ತಮ್ಮ ಜೀವನವನ್ನು ನಡೆಸುವುದು ಕಷ್ಟ ಸಾಧ್ಯದ ಮಾತಾಗಿತ್ತು. ಹೀಗೆ ಹಲವು ದಿನಗಳಿಂದ ದುಡಿದುಕೊಂಡು ಬರುತ್ತಿದ್ದ ಇವರು ತಮ್ಮ ಇನ್ನುಳಿದ ನಾಲ್ಕು ಗಂಡುಮಕ್ಕಳಿಗೆ ಮದುವೆ ಮಾಡಿದರು. ಹೀಗೆ ಕೆಲವು ವರ್ಷಗಳ ನಂತರ ಈರ್ವರು ಹೆಣ್ಣುಮಕ್ಕಳಿನ್ನು ಕೂಡಾ ತಮ್ಮ ರಕ್ತ ಸಂಬಂಧಿಕರಲ್ಲಿಯೇ ಮದುವೆ ಮಾಡಿಕೊಟ್ಟರು. ಮುಂದೆ ತುಂಬಿದ ಕುಟುಂಬವಾಗಿ ಬೆಳೆದಿದ್ದರಿಂದ ಹೆಚ್ಚಾಗಿ ದುಡಿಯುವ ಸಂದರ್ಭ ಬಂತು. ಹಲವು ದಿನಗಳ ಕಾಲ ಅಣ್ಣ ತಮ್ಮಂದಿರು ಕೂಡಿಕೊಂಡು ಹೆಚ್ಚು ಶ್ರಮ ವಹಿಸಿ ಕೆಲಸವನ್ನು ನಿರ್ವಹಿಸಿದರೂ ಕುಟುಂಬದ ಜೀವನವನ್ನು ಸಾಗಿಸುವುದು ಕಷ್ಟವಾಗುತ್ತಿತ್ತು. ಹೀಗೆ ಹಲವು ವರ್ಷಗಳ ಕಾಲ ಎಲ್ಲರೂ ಕೂಡಿ ಬಾಳಿದರು. ಮುಂದೆ ಕುಟುಂಬದಲ್ಲಿ ಜನರು ಹೆಚ್ಚಾದಂತೆಲ್ಲಾ ಎಲ್ಲರೂ ಒಂದೇ ಗುಡಿಸಲಿನಲ್ಲಿ ಒಟ್ಟಿಗೆ ಕೂಡಿ ಬಾಳುವುದಕ್ಕೆ ಕಷ್ಟವಾಗಿದ್ದರಿಂದ ಬೇರೆ ಬೇರೆ ಜೋಪಡಿಗಳನ್ನು ಹಾಕಿಕೊಂಡು ಜೀವನ ಸಾಗಿಸುತ್ತಾ ಬಂದರು.

ವಂಶವೃಕ್ಷ

ಮಾರೆಪ್ಪ – ದುರುಗಮ್ಮ (ದಂಪತಿಗಳು)

ಮಾರೆಪ್ಪ ಸಂಜೀವಪ್ಪ ಆಂಜನೆಪ್ಪ ವೆಂಕಪ್ಪ ಬಾಲಪ್ಪ ಯಮನವ್ವ ವೆಂಕವ್ವ

+ ದುರುಗವ್ವ (ಹೆಂಡತಿ)

ವೆಂಕಪ್ಪ ಹನ್ಮಂತಪ್ಪ ಧನವಂತಪ್ಪ ವೆಂಕೋಬ ವೀರಣ್ಣ ಮಾರುತಿ ವೆಂಕವ್ವ ನೀಲವ್ವ

[illegible]

ಮಾರೆಪ್ಪ-ದುರುಗವ್ವ ಎಂಬ ದಂಪತಿಗಳ ಉದರದಲ್ಲಿ ಆರು ಜನ ಗಂಡುಮಕ್ಕಳು ಇಬ್ಬರು ಹೆಣ್ಣುಮಕ್ಕಳು ಹುಟ್ಟಿದರು. ಮೊದಲು ವೆಂಕಪ್ಪನಿಗೆ ಜನ್ಮ ನೀಡಿದರು. ನಂತರ ಹನ್ಮಂತಪ್ಪ ಘನವಂತಪ್ಪ, ವೆಂಕೋಬ, ವೀರಣ್ಣ, ಮಾರುತಿ ನಂತರದಲ್ಲಿ ವೆಂಕವ್ವ, ನೀಲವ್ವ ಹುಟ್ಟಿದರು. ಮಾರೆಪ್ಪನು ಚಿಕ್ಕವಯಸ್ಸಿನಲ್ಲಿಯೇ ಬಡತನದ ಬೇಗೆಯಲ್ಲಿ ಬಾಳಿದ್ದರಿಂದ ಮುಂದೆ ತಮ್ಮ ಕುಟುಂಬದಲ್ಲಿ ಸಾಕಷ್ಟು ಕಷ್ಟಗಳು ಎದುರಾದರೂ ಎದೆಗುಂದದೆ ದಿನಾಲು ಊರೂರು ಸುತ್ತಿಕೊಂಡು ಕಾಯಕದಲ್ಲಿ ತೊಡಗುತ್ತಿದ್ದರು. ಇವರ ಮಡದಿಯಾದ ದುರುಗವ್ವಳು ಕೂಡಾ ಸಂಸಾರದ ಕಷ್ಟವನ್ನು ನೀಗಿಸಲೆಂದು ತಾನು ಸಹ ಪ್ರತಿದಿನ ಭಿಕ್ಷಾ ಕಾಯಕದಲ್ಲಿ ತೊಡಗುತ್ತಿದ್ದಳು. ಹೀಗೆ ಸಂಸಾರವೆಂಬ ದೋಣಿಯನ್ನು ಗಂಡ ಹೆಂಡತಿ ಇಬ್ಬರೂ ಜೊತೆಯಾಗಿ ದುಡಿದು ತಮ್ಮ ಜೀವನವನ್ನು ಸಾಗಿಸುತ್ತಿದ್ದರು. ಹಾಗೂ ವಯಸ್ಸಾದ ತಂದೆ ತಾಯಿಗಳನ್ನು ಮತ್ತು ಮಕ್ಕಳನ್ನು ಚೆನ್ನಾಗಿ ನೋಡಿಕೊಳ್ಳಬೇಕೆಂಬುದು ಇವರ ಮನದಾಳದ ಬಯಕೆಯಾಗಿತ್ತು. ಕಷ್ಟಪಟ್ಟು ಊರೂರು ತಿರುಗಿ ತತ್ವಪದ ಗಾಯಕನಾಗಿ ಭಿಕ್ಷಾಟನೆ ಮಾಡಿ ಜೀವನ ಸಾಗಿಸಹತ್ತಿದ್ದರು.

ಬಡತನದ ಬೇಗೆಯಲ್ಲಿದ್ದರೂ ಸಹ ಅಜ್ಜ ಯಲ್ಲಪ್ಪನಿಂದಲೇ ಬಳುವಳಿಯಾಗಿ ಬಂದಿದ್ದ ಹಾಡುಗಾರಿಕೆಯನ್ನು ಮತ್ತಷ್ಟು ಪುಷ್ಟೀಕರಿಸಿಕೊಂಡು ಬಂದು ತತ್ವಪದ ಹಾಡುವ ಕಲೆಯನ್ನು ಕರಗತ ಮಾಡಿಕೊಂಡು ಹಾಡಲು ಪ್ರಾರಂಭಿಸಿದರು. ಎಷ್ಟೇ ತೊಂದರೆಗಳು ಬಂದರೂ ಸಹ ಮಾರೆಪ್ಪ ತತ್ವಪದ ಹಾಡುವುದನ್ನು ಬಿಡಲಿಲ್ಲ. ಕಾರಣ ಆತನ ಉತ್ಕಟವಾದ ಬಯಕೆಯೇ ಸಂಗೀತ ಅಭ್ಯಾಸ ಮಾಡುವುದಾಗಿತ್ತು. ಅಂತೆಯೇ ರಾಮಣ್ಣ ಮಾಸ್ತರ ಬಳಿ ಪಿಟೀಲು ನುಡಿಸುವುದನ್ನು ಕಲಿತ. ಇವರು ಸರಿಯಾಗಿ ಕಲಿಸದೇ ಇದ್ದುದರಿಂದ, ನಂತರ ವೀರಣ್ಣ ಮಾಸ್ತರ ಬಳಿ ಹೋದ ಇವರು ಕಾಯಿಲೆ ಬಿದ್ದು ಬಹುಬೇಗನೆ ತೀರಿಕೊಂಡಿದ್ದರಿಂದ ಯಕ್ಸಲ್‌ಪುರದ ರಂಗಪ್ಪ ದಾಸರ ಬಳಿ ಹೋಗಿ ಸೇರಿಕೊಂಡರು. ಇವರು ಕೂಡಾ ಸರಿಯಾಗಿ ಕಲಿಸದೇ ಇದ್ದಾಗ ಸ್ವಂತ ಬುದ್ದಿಯಿಂದ ಹೆಚ್ಚು ಅಭ್ಯಾಸ ಮಾಡಿ ತತ್ವಪದಗಳನ್ನು ಅಚ್ಚುಕಟ್ಟಾಗಿ ಹಾಡುವುದನ್ನು ರೂಢಿಸಿಕೊಂಡರು. ಊರಲ್ಲಿ ಓಣಿ ಓಣಿ ತಿರುಗಿ ಏಕತಾರಿ ಹಿಡಿದು ಹಾಡುತ್ತಾ ಭಿಕ್ಷಾಟನೆ ಮಾಡಿ ಮನೆಗೆ ಬಂದು ರಾತ್ರಿ ಸಮಯದಲ್ಲಿ ಗುರುಗಳು ಕಲಿಸಿದ ಪಿಟೀಲು ನುಡಿಸುವುದನ್ನು ಅಭ್ಯಾಸ ಮಾಡುತ್ತಿದ್ದನು. ಒಂದು ಕಡೆ ಕುಟುಂಬದ ಭಾರವನ್ನು ಹೊತ್ತುಕೊಂಡು, ಇನ್ನೊಂದು ಕಡೆ ಜನಪದ ಕಲೆಯ ಉಳುವಿಗಾಗಿ ಸಾಕಷ್ಟು ಶ್ರಮಿಸಿದರು. ಹಗಲು-ರಾತ್ರಿ ಎನ್ನದೇ ಊರೆಲ್ಲಾ ಸುತ್ತಿಬಂದರೂ ಸಹ ಪಿಟೀಲು ನುಡಿಸುವುದನ್ನೂ ಮಾತ್ರ ಬಿಡಲಿಲ್ಲ. ದಿನಾಲು ರಾತ್ರಿ ಸಮಯದಲ್ಲಿ ಭಜನೆ ಪದ, ಶರೀಫರ ಪದಗಳನ್ನು ಊರ ಹನುಮಪ್ಪ ದೇವರ ಗುಡಿ ಮುಂದೆ ಕುಳಿತು ಪದಗಳನ್ನು ಹಾಡುವ ತಯಾರಿ ನಡೆಸುತ್ತಿದ್ದರು. ಇಂತಹ ಕಷ್ಟದ ಪರಿಸ್ಥಿತಿಯಲ್ಲಿ "ಬೇರೆಯವರಾಗಿದ್ದರೆ ಯಾರಿಗೆ

ಬೇಕೋ ಮಾರಾಯಾ ಈ ಹಾಡುವ ಕೆಲಸ, ಮೂರು ಸೇರು ಜೋಳಕ್ಕೆ ರಾತ್ರಿಯೆಲ್ಲಾ ಹಾಡಬೇಕು"[೩] ಎಂದು ಬೇಸರಪಟ್ಟುಕೊಂಡು ಹಾಡುವುದನ್ನೇ ಬಿಡುತ್ತಿದ್ದರು ಎಂದು ಮಾರೆಪ್ಪ ತಮ್ಮ ಹಿಂದಿನ ಪಾಡನ್ನು ನೆನಪಿನ ಬುತ್ತಿಯಿಂದ ಬಿಚ್ಚಿಟ್ಟರು. ಆದರೆ ಮಾರೆಪ್ಪನವರು ಎಂತಹ ಕಷ್ಟ ಬಂದರೂ ಕೂಡಾ ಪಿಟೀಲು ನುಡಿಸಿ ಪದಗಳನ್ನು ಹಾಡುವುದನ್ನು ನಿಲ್ಲಿಸುವ ಯೋಚನೆಯನ್ನು ಮಾಡಲಿಲ್ಲ. ಸಮಯ ಸಿಕ್ಕಾಗ ದೇಹಕ್ಕೆ ವಿಶ್ರಾಂತಿಯನ್ನು ಕೊಡದೇ ಹೆಗಲಿಗೆ ಜೋಳಿಗೆ ಕೈಯಲ್ಲಿ ಪಿಟೀಲನ್ನು ಹಿಡಿದುಕೊಂಡು ಹೊರಟರೆಂದರೆ ಮುಗಿಯಿತು. ಅವರ ಮನಸ್ಸಿಗೆ ಸಾಕಾಗುವಷ್ಟು ತತ್ವಪದಗಳನ್ನು ಹಾಡಿ ಮಧ್ಯ ರಾತ್ರಿಯಲ್ಲಿ ಅಥವಾ ಕೆಲವು ಸಾರಿ ಮುಂಜಾವಿನ ಸಮಯಕ್ಕೆ ಮನೆಗೆ ಬಂದು ಸೇರುತ್ತಿದ್ದರು. ಇಡೀ ರಾತ್ರಿ ಕಣ್ಣಿಗೆ ನಿದ್ದೆ ಇಲ್ಲದಿದ್ದರೂ ಸಹ ಬೆಳಿಗ್ಗೆ ಬೇಗ ಎದ್ದು ಮತ್ತೆ ಕಾಯಕಕ್ಕೆ ತೆರಳುತ್ತಿದ್ದರು. ಹೀಗೆ ಅವಿರತ ಶ್ರಮದಿಂದ ಪಿಟೀಲು ನುಡಿಸುವುದನ್ನು ಚೆನ್ನಾಗಿ ಕರಗತ ಮಾಡಿಕೊಂಡು ತತ್ವಪದಗಳನ್ನು ಯಥೇಚ್ಛವಾಗಿ ಹಾಡುತ್ತಾ ಜನಪದ ಕಲೆಯನ್ನು ಉಳಿಸಿ ಬೆಳೆಸಿಕೊಂಡು ಬಂದಿದ್ದಾರೆ.

"ಮಿರ-ಮಿರ ಮಿಂಚುವ ಜರತಾರಿ ರುಮಾಲು, ಹೆಗಲ ಮೇಲೊಂದು ವಸ್ತ್ರ, ಬಣ್ಣ ಮಾಸಿದ ಕೋಟು, ಅದರೊಳಗೊಂದು ಬಿಳಿ ಅಂಗಿ, ಧೋತಿ, ತಿದ್ದಿ ತೀಡಿದ ಕೋರೆ ಮೀಸೆ, ಹಣೆಯ ಮೇಲೆ ಆಕರ್ಷಕ ಕುಂಕುಮ ಹಚ್ಚಿಕೊಂಡು ಬೀದಿ-ಬೀದಿಗಳಲ್ಲಿ ಅಲೆಯುತ್ತಾ ಏಕತಾರಿ ಮೀಟುತ್ತಾ ದಾಸರ ಕೀರ್ತನೆಗಳು, ತತ್ವಪದಗಳನ್ನು ಹಾಡುವ ಕಾರ್ಯ ದಿನದಿಂದ ದಿನಕ್ಕೆ ಹೆಚ್ಚಾಗುತ್ತಾ ಹೋದವು. ಇದರಿಂದ ಹೋದಲೆಲ್ಲಾ ಪ್ರೋತ್ಸಾಹ ಹಾಗೂ ಮೆಚ್ಚುಗೆ ದೊರೆಯುತ್ತಿತ್ತು." ಇವರು ಹತ್ತು ಹಲವು ಊರುಗಳಲ್ಲಿ ಸಂಚರಿಸಿ ತತ್ವಪದ ಹಾಡುಗಾರಿಕೆಯನ್ನು ಪ್ರದರ್ಶಿಸಿದ್ದಾರೆ. ಅವುಗಳೆಂದರೆ- ಯಲಬುರ್ಗಾ, ಕೊಪ್ಪಳ, ಆನೆಗೊಂದಿ, ಹಂಪಿ, ರಾಯಚೂರು, ಗುಲಬರ್ಗಾ, ಬೀದರ, ಬಿಜಾಪೂರ, ಬಳ್ಳಾರಿ, ಹೊಸಪೇಟೆ, ಚಿತ್ರದುರ್ಗ, ಶಿವಮೊಗ್ಗ, ದಾವಣಗೆರೆ, ಹರಿಹರ, ಬೆಳಗಾಂವ, ಧಾರವಾಡ, ಹಾವೇರಿ, ರಬಕವಿ, ಮಹಾಲಿಂಗಪುರ, ಮೈಸೂರು, ಬೆಂಗಳೂರು, ರಾಣೆಬೆನ್ನೂರು, ಕಿತ್ತೂರು ಇತ್ಯಾದಿ ಊರುಗಳಲ್ಲಿ ಕಾರ್ಯಕ್ರಮಗಳನ್ನು ಕೊಟ್ಟು ಬಂದಿದ್ದಾರೆ. ಜೊತೆಗೆ "ನಮ್ಮ ನಾಡಿನ ಬಹುಮುಖ್ಯವಾದ ಜಾನಪದ ಕಲೆಯ ತತ್ವಪದ ವೃತ್ತಿಗಾಯಕರಾಗಿ ಪ್ರಸಿದ್ಧಿ ಪಡೆದು ಹೆಸರು ಮಾಡಿದ ಮಾರೆಪ್ಪನವರಿಗೆ ಸರ್ಕಾರದ ವತಿಯಿಂದ ಮಾಶಾಸನ ಮಂಜೂರು ಮಾಡಿಸುವಲ್ಲಿ ಹಿರಿಯ ಸಾಹಿತಿಗಳಾದ ಮುನಿಯಪ್ಪ ಹುಬ್ಬಳ್ಳಿಯವರು ಸಹಕಾರ ನೀಡಿದರು."[೪]

ನಮ್ಮ ನಾಡಿನ ಮುಖ್ಯವಾದ ಜಾನಪದ ಕಲೆಗಳಲ್ಲಿ ಒಂದಾದ ತತ್ವಪದಗಳನ್ನು ಏಕತಾರಿ ಮೀಟಿ ಹಾಡುತ್ತಾ ಅದನ್ನು ತನ್ನ ಇಂಪಾದ ಧ್ವನಿಯಿಂದ ಹಾಡಿಕೊಂಡು ಬಂದು ಕಲೆಯನ್ನು

ಉಳಿಸಿ ಬೆಳೆಸಿಕೊಂಡು ಬಂದಿದ್ದರಿಂದ ಸರ್ಕಾರದ ವತಿಯಿಂದ ತಿಂಗಳಿಗೆ ಎರಡುನೂರಾ ಐವತ್ತು ರೂಪಾಯಿಗಳ ಮಾಶಾಸನವನ್ನು ಇವರ ಕುಟುಂಬಕ್ಕೆ ನೀಡುತ್ತಿದ್ದರು. ಆದರೆ ಅಷ್ಟು ಹಣ ಜೀವನಕ್ಕೆ ಆಗುತ್ತಿರಲಿಲ್ಲ. ಹಲವು ವರ್ಷಗಳು ಕಳೆದ ನಂತರ ಸರ್ಕಾರವು ಕಲಾವಿದರಿಗೆ ನೀಡುತ್ತಿದ್ದ ಮಾಶಾಸನವನ್ನು ಹೆಚ್ಚಿಗೆ ಮಾಡಿದರು. ಆದರೂ ಮಾರುಕಟ್ಟೆಯಲ್ಲಿ ದವಸ ಧಾನ್ಯಗಳು ಹೆಚ್ಚಿನ ದರದಲ್ಲಿ ಮಾರಾಟವಾಗುತ್ತಿದ್ದರಿಂದ ಜೀವನಕ್ಕೆ ಬೇಕಾದ ಕನಿಷ್ಠ ಸೌಲಭ್ಯಗಳು ದೊರೆಯುತ್ತಿರಲಿಲ್ಲ. ಆದ್ದರಿಂದ ಕಲಾವಿದರು ತುಂಬಾ ಕಷ್ಟದಿಂದ ತಮ್ಮ ಜೀವನವನ್ನು ಕಳೆಯುತ್ತಿದ್ದರು. ದಿನ ಕಳೆದಂತೆಲ್ಲಾ ತತ್ವಪದ ಹಾಡುಗಾರಿಕೆಯಲ್ಲಿ ಮಾರೆಪ್ಪ ಜೀವನದಲ್ಲಿ ಕಂಡರಿಯದಷ್ಟು ಹೆಸರನ್ನು ಸಂಪಾದಿಸಿದರು. ಇವರು ಕೇವಲ ಹಳ್ಳಿಗಳಿಗೆ ಮಾತ್ರವಲ್ಲದೆ ರಾಜ್ಯದ ರಾಜ್ಯಧಾನಿಯಾದ ಬೆಂಗಳೂರುನಿಂದ ಹಿಡಿದು ದೆಹಲಿಯವರಿಗೂ ಹೋಗಿ ಕಲೆಯನ್ನು ಪ್ರದರ್ಶನ ಮಾಡಿ ಬಂದಿದ್ದಾರೆ. “ಅಷ್ಟೆ ಅಲ್ಲದೇ ಬೆಂಗಳೂರಿನಲ್ಲಿರುವ ಖ್ಯಾತ ವೀಣಾ ವಾದಕರಾಗಿರುವ ಶ್ರೀಮತಿ ಎಚ್.ಆರ್. ಗಾಯಿತ್ರಮ್ಮನವರು ಈತನ ಕಲೆಯನ್ನು ಮೆಚ್ಚಿ, ಮಾರೆಪ್ಪ ನೀನು ನನ್ನ ಜೊತೆ ಅಮೇರಿಕಾಕ್ಕೆ ಬಾ ನಿನಗೆ ಇನ್ನೂ ಹೆಚ್ಚಿನ ಅವಕಾಶಗಳನ್ನು ಕೊಡಿಸುತ್ತೇನೆಂದರೂ ಕೂಡಾ ಮಾರೆಪ್ಪ ಅದನ್ನು ನಿರಾಕರಿಸಿದರು.”[೫] ಹೀಗೆ ರಾಜ್ಯದ ನಾನಾ ಮೂಲೆಗಳಲ್ಲಿ ಏಕತಾರಿ ಹಿಡಿದು ತಮ್ಮ ಕಂಚಿನ ಕಂಠದಿಂದ ಉತ್ತಮವಾಗಿ ಹಾಡಿ ಹಲವಾರು ಪ್ರಶಸ್ತಿಗಳಿಗೆ ಭಾಜನರಾಗಿದ್ದಾರೆ. ಇವರು ಜಾನಪದ ಕ್ಷೇತ್ರದಲ್ಲಿ ಗಣನೀಯ ಸಸೇವೆ ಸಲ್ಲಿಸಿದ್ದರಿಂದ ಕರ್ನಾಟಕ ರಾಜ್ಯ ಸರಕಾರವು ೨೦೦೪ನೇ ಸಾಲಿನಲ್ಲಿ ರಾಜ್ಯೋತ್ಸವ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ. ಸತತ ೬೦ ವರ್ಷಗಳಿಂದ ತತ್ವಪದ ಹಾಡುಗಾರಿಕೆಯಲ್ಲಿ ಮಾರೆಪ್ಪನವರು ಸಲ್ಲಿಸಿದ ಅವಿರತ ಸೇವೆಗಾಗಿ ಈ ಎಲ್ಲ ಪುರಸ್ಕಾರಗಳು ಲಭಿಸಿವೆ.

ಮಾರೆಪ್ಪನವರು ಕಷ್ಟಪಟ್ಟು ಜೀವನವನ್ನು ಸಾಗಿಸಿ ಕೊನೆಗೆ ಕಲೆಯನ್ನು ಉಳಿಸಿಕೊಂಡು ಬಂದು, ಈಗ ಐದು ಮಕ್ಕಳ ಮದುವೆಯನ್ನು ಮಾಡಿದ್ದಾರೆ. ಇನ್ನೂ ಮೂವರು ಮಕ್ಕಳು ವ್ಯಾಸಂಗ ಮಾಡುತ್ತಿದ್ದಾರೆ. ಮುಂದೆ ಈ ಹಾಡುಗಾರಿಕೆಯನ್ನು ಉಳಿಸಿಕೊಂಡು ಹೋಗಲು ತಮ್ಮ ಹಿರಿಯ ಮಗನಾದ ವೆಂಕಪ್ಪನಿಗೆ ತಾನೇ ಗುರುವಾಗಿ ತಂಬೂರಿ ನುಡಿಸುವುದನ್ನು ಕಲಿಸಿಕೊಟ್ಟಿದ್ದಾನೆ. ಜೊತೆಗೆ ತನ್ನ ತಮ್ಮ ಆಂಜಿನೆಪ್ಪನು ತತ್ವಪದಗಳನ್ನು ಹಾಡುವ ಕಲೆಯನ್ನು ಕಲಿತುಕೊಂಡು, ಅಣ್ಣನ ಜೊತೆಯಲ್ಲಿ ಹಲವಾರು ಕಾರ್ಯಕ್ರಮಗಳನ್ನು ನೀಡಿದ್ದಾರೆ. ಈ ಜಾನಪದ ಹಾಡುಗಾರಿಕೆ ಕಲೆಯು ಇವರ ಮನೆತನದ ಕಲೆಯಾಗಿ ಹರಿದು ಬಂದಿದೆ. ಅಜ್ಜನಿಂದ ಮೊಮ್ಮಗನಿಗೆ ಇದರಿಂದ ಮರಿಮಕ್ಕಳಿಗೆ ಹೀಗೆ ಈ ಕಲೆ ರಕ್ತಗತವಾಗಿ ಹರಿದುಕೊಂಡು ಬಂದಿದೆ. ಮಾರೆಪ್ಪನವರು ತಮ್ಮ ಜೀವನದಲ್ಲಿ ಈ ಹಾಡುಗಾರಿಕೆಯಲ್ಲಿ ನಿರತರಾಗಿದ್ದಾರೆ. ಇವತ್ತಿಗೂ ಕೂಡ ಸಂಗಡಿಗರು ಏಕತಾರಿ ಮೀಟಿದರೆ, ತಂತಿಯ ನಿನಾದಕ್ಕೆ ಹಾಡು ಶುರು ಹಚ್ಚಿಕೊಳ್ಳುತ್ತಾರೆ.

೨.೩. ಸಾಮಾಜಿಕ ಜೀವನ

ಮಾರೆಪ್ಪ ತಮ್ಮ ಕುಟುಂಬದಲ್ಲಿ ಹಿರಿಯ ಮಗನಾಗಿದ್ದು ತಮ್ಮಂದಿರೊಡನೆ ಪರಸ್ಪರ ಸಹಕಾರದಿಂದ ಜೀವನ ನಡೆಸುತ್ತಿದ್ದಾರೆ. ಗ್ರಾಮದ ನೆರೆಹೊರೆಯ ಜನರೊಂದಿಗೆ ಪ್ರೀತಿ-ವಿಶ್ವಾಸಗಳ ಆದರದಿಂದ ಜೀವನವನ್ನು ಸಾಗಿಸುವಂತವರು ಹಾಗೂ ಅಕ್ಕಪಕ್ಕದ ಊರಿನ ಜನರೊಂದಿಗೆ ಎಂದೂ ಬೇಧ-ಭಾವ ಕಂಡವರಲ್ಲ. ಎಲ್ಲರೂ ಒಂದೇ ಎಂಬ ಮನೋಭಾವನೆ ಹೊಂದಿದ್ದಾರೆ. ಯಾವುದೇ ಊರಿನಿಂದ ತತ್ವಗೀತೆ ಹಾಡಲು ಆಹ್ವಾನ ಬಂದರೆ ಸಾಕು ಸೌಜನ್ಯದಿಂದ ಸ್ವೀಕರಿಸಿ ಕಾರ್ಯಕ್ರಮಕ್ಕೆ ಹೋಗಿಬರುತ್ತಾರೆ. ಕೆಲವರು ಖುದ್ದಾಗಿ ಬಂದು ಅವರ ಜೊತೆ ಮಾತನಾಡಿ ಕಾರ್ಯಕ್ರಮಕ್ಕೆ ಬರಲು ಭಂಡಾರವನ್ನು ಕೊಟ್ಟು ಹೋಗುತ್ತಾರೆ. ಇವರನ್ನು ಕಾಣಲು ಬಂದ ವ್ಯಕ್ತಿಗಳನ್ನು ಸೌಹಾರ್ದತೆಯಿಂದ ಬರಮಾಡಿಕೊಂಡು ಅಷ್ಟೇ ಸೌಜನ್ಯದಿಂದ ಅವರೊಂದಿಗೆ ಮಾತನಾಡುತ್ತಾರೆ. ಸಿಟ್ಟು-ಸಿಡುಕಿನ ಸ್ವಭಾವದವರಲ್ಲ. ಇವರು ಮೃದುವಾದ ಸೃಜನಶೀಲ ಮನಸ್ಸಿನ ಸ್ವಭಾವದವರಾಗಿದ್ದಾರೆ.

ಮಾರೆಪ್ಪನವರು ದೇವರಲ್ಲಿ ಅಪಾರವಾದ ನಂಬಿಕೆಯುಳ್ಳವರಾಗಿದ್ದಾರೆ. ಇವರ ಆರಾಧ್ಯದೈವ ತಿರುಪತಿ ತಿಮ್ಮಪ್ಪ, ಜೊತೆಗೆ ಮಾರೆಮ್ಮ, ಹನುಮಂತ, ದೇವರಿಗೆ ಪೂಜೆ-ಪುನಸ್ಕಾರಗಳನ್ನು ಮಾಡುತ್ತಾರೆ. ಇವರು ಯಾವುದೇ ಹಳ್ಳಿಗಾಗಲೀ ಅಥವಾ ಪಟ್ಟಣಕ್ಕಾಗಲೀ ಕಾರ್ಯಕ್ರಮಕ್ಕೆ ಹೊರಡುವಾಗ ದೇವರ ದರ್ಶನವಿಲ್ಲದೇ ಎಂದೂ ಹಾಗೇ ಹೋದವರಲ್ಲ. ಹೆಗಲಿಗೆ ಜೋಳಿಗೆ ಹಾಕಿಕೊಂಡು ಕೈಯಲ್ಲಿ ಏಕತಾರಿಯನ್ನು ಹಿಡಿದುಕೊಂಡು ಹಣೆಗೆ ಕುಂಕುಮ ಹಚ್ಚಿಕೊಂಡು ದೇವರಿಗೆ ನಮಸ್ಕರಿಸಿ ನಂತರ ಕಾರ್ಯಕ್ರಮ ನೀಡಲು ಹೊರಡುತ್ತಾರೆ. ಯಾವುದೇ ಊರಿಗೆ ಹೋದರೂ ಇವರನ್ನು ಪ್ರೀತಿಯಿಂದ ಸ್ವಾಗತಿಸುತ್ತಾರೆ ಹಾಗೂ ಹೋದಲ್ಲೆಲ್ಲಾ ಇವರನ್ನು ಗೌರವದಿಂದ ಕಾಣುತ್ತಾರೆ. ಇವರಿಗೆ ಹಲವಾರು ಪ್ರಶಸ್ತಿಗಳು ಹಾಗೂ ಮೆಚ್ಚುಗೆ ಪತ್ರಗಳು ಬಂದರೂ ಎಂದೆಂದಿಗೂ ಅಹಂಕಾರದಿಂದ ಮೆರೆದವರಲ್ಲ.

೨.೪. ಸಾಂಸ್ಕೃತಿಕ ಅಂಶಗಳು

ಕೆಲವೊಂದು ವಿಶಿಷ್ಟ ಸಂಪ್ರದಾಯ ಆಚರಣೆಗಳ ಮೇಲೆ ನಂಬಿಕೆ ಹೊಂದಿರುವ ಮಾರೆಪ್ಪ ಚೆನ್ನದಾಸರು ತಮ್ಮ ನಡೆ-ನುಡಿಗಳಿಗೆ ಎಂದೂ ದಕ್ಕೆ ಬಾರದಂತೆ ತಮ್ಮ ವೃತ್ತಿ ಕಾಯಕವನ್ನು ಮುಂದುವರೆಸಿಕೊಂಡು ಬಂದಿದ್ದಾರೆ. ಕಂಠಸಿರಿ ಹೊಂದಿರುವ ಮಾರೆಪ್ಪ ಹಿಂದಿನ ದಿನಗಳಲ್ಲಿ ಮನೆ ಬಾಗಿಲಿಗೆ ಬಂದಾಗ ಒಬ್ಬ ಶ್ರೇಷ್ಠ ಕಲಾವಿದ ಎಂದು ಪರಿಗಣಿಸಿ ಮಾಡಿದ ಸನ್ಮಾನ, ನೀಡಿದ ಗೌರವ ಹಾರೈಸಿದ ಹರಕೆ, ಕೊಟ್ಟ ಕಾಣಿಕೆ ಅಷ್ಟಿಷ್ಟಲ್ಲ. ಆ ದಿನಗಳಲ್ಲಿ ಸಾಂಸ್ಕೃತಿಕವಾಗಿ ಗ್ರಾಮೀಣ ಪ್ರದೇಶದಲ್ಲಿ ಮಾಧ್ಯಮಗಳ ಹಾವಳಿಗಳಾಗಲಿ, ಚಲನಚಿತ್ರಗಳಾಗಲಿ, ಇಲ್ಲದ ದಿನಗಳು.

ಈ ದಾಸರೇ ಗ್ರಾಮೀಣ ಜನರಿಗೆ ರಂಜನೆ ನೀಡುತ್ತಿರುವ ಸಾಂಸ್ಕೃತಿಕ ದಾಸರಾಗಿದ್ದರು. ರೈತರು ರಾಶಿ ಮಾಡುವಾಗ ಇವರನ್ನು ಆಯಗಾರರೆಂದು ಪರಿಗಣಿಸಿ ರಾಶಿಯಲ್ಲಿ ಸ್ವಲ್ಪ ಕಾಳು ಕಡಿಯನ್ನು ಇವರಿಗೆ ನೀಡುತ್ತಿದ್ದರು. ಇಂದಿನ ದಿನಗಳಲ್ಲಿ ಸಾಂಸ್ಕೃತಿಕ ವೈಭವ ಲೋಕವೇ ಗ್ರಾಮೀಣ ಪ್ರದೇಶಗಳಲ್ಲಿ ತೆರೆದುಕೊಂಡಿರುವುದರಿಂದ ಈ ಚೆನ್ನದಾಸರು ಕೈಯಲ್ಲಿ ಏಕತಾರಿ ಹಿಡಿದು ಹಾಡುತ್ತಾ ಮನೆಬಾಗಿಲಿಗೆ ಬಂದರೆ ಭಿಕ್ಷುಕರನ್ನು ನೋಡುವ ಹಾಗೆ ಕಾಣುತ್ತಾರೆ. ಈಗ ಅವರಿಗೆ ದಾಸರ ಸಾಹಿತ್ಯ ಪದಗಳಲ್ಲಿ, ತತ್ವಪದಗಳಾಗಲಿ, ಜನಪದಗಳಾಗಲಿ ಬೇಕಾಗಿಲ್ಲ. ಕೇಳುವ ತಾಳ್ಮೆಯೂ ಇಲ್ಲ. ಹೀಗಾಗಿ ಕಿಲುಬು ಕಾಸು ಇಲ್ಲವೆ ತುಂಡು ರೊಟ್ಟಿ ನೀಡಿ ಮುಂದೆ ಸಾಗಹಾಕುತ್ತಾರೆ. ಇಂತಹ ಒಂದು ಸಮಾಜದ ಪರಿಸ್ಥಿತಿಯಲ್ಲಿ ತಲೆ ತಲಮಾರುಗಳಿಂದ ಸಮಾಜಕ್ಕೆ ತತ್ವಬೋಧನೆ ಮಾಡಿದ ಈ ತತ್ವಪದಗಳ ದಾಸರನ್ನು ಕೈ ಹಿಡಿಯಬೇಕಾಗಿದ್ದ ಸರಕಾರ, ಸಂಘ ಸಂಸ್ಥೆಗಳು ತಮ್ಮ ಜವಾಬ್ದಾರಿಯಿಂದ ನುಣುಚಿಕೊಂಡಿವೆ. ತಿಂಗಳಿಗೆ ಒಂದು ಸಾವಿರ ರೂಪಾಯಿಯಂತೆ ರಾಜ್ಯ ಸರಕಾರ ಮಂಜೂರು ಮಾಡುವ ಕಲಾವಿದರ ಮಾಶಾಸನ ಒಂದನ್ನು ಬಿಟ್ಟರೆ ಮತ್ತಿನ್ಯಾವ ನೆರವು ಇಲ್ಲ. ಕೇಂದ್ರ ಸರ್ಕಾರ ಕಲಾವಿದರಿಗಾಗಿ ಕೊಡುವ ಮಾಶಾಸನದ ಸೌಲಭ್ಯಕ್ಕಾಗಿ ಹತ್ತಾರು ಬಾರಿ ಹಲುಬಿದರೂ ಸಹಾಯ ಮಾತ್ರ ಶೂನ್ಯ.

ವರ್ಷದಲ್ಲಿ ನಾಲ್ಕಾರು ಬಾರಿ ರಾಜ್ಯಮಟ್ಟದ ಕಾರ್ಯಕ್ರಮಗಳಿಗೆ ಆಹ್ವಾನಿಸುವ ಸಂಘ ಸಂಸ್ಥೆಗಳು ಕೈಗೊಂದಿಷ್ಟು ಹಣ ನೀಡಿ ಸನ್ಮಾನಿಸುತ್ತವೇನೋ ನಿಜ. ಆದರೆ ಇಂತಹ ತುಟ್ಟಿ ದಿನಗಳಲ್ಲಿ ಬದುಕು ನಡೆಸುವುದು ಈ ದೊಡ್ಡ ಕುಟುಂಬಕ್ಕೆ ಹೆಬ್ಬಂಡೆಯಷ್ಟೇ ಭಾರವಾಗಿದೆ.

೨.೫. ಆರ್ಥಿಕ ಸ್ಥಿತಿಗತಿಗಳು

ತತ್ವಪದ ಗಾಯಕರಲ್ಲಿ ಅರಸನಾಗಿ ಮೆರೆದರೂ ಸಾಮಾಜಿಕ ಬದುಕಿನಲ್ಲಿ ಭಿಕ್ಷುಕನಾಗಿಯೇ ಊರೂರು ಸುತ್ತುವ ಈ ಮಾರೆಪ್ಪನಿಗೆ ಬೆಚ್ಚಗಿನ ಒಂದು ಮನೆಯೂ ಇಲ್ಲ. ಕೆಲವರ್ಷಗಳ ಹಿಂದೆ ಸರ್ಕಾರ ನೀಡಿದ ನಿರಾಶ್ರಿತರಿಗಾಗಿ ಆಶ್ರಯ ಮನೆ ಮಂಜೂರಾದದ್ದು, ಅದು ಇಂದೋ ನಾಳೆ ಗಾಳಿಗೆ ಹಾರಿಹೋಗುವಂತಿದ್ದು ಆ ಮನೆಯಲ್ಲಿ ವಾಸಿಸಲಾಗದೆ ತನ್ನ ಜೋಪಡಿಯೇ ರಕ್ಷಣೆ ನೀಡುವ ತಾಣವೆಂದು ಬಗೆದು ಮಕ್ಕಳೊಂದಿಗೆ ಜೋಪಡಿಯಲ್ಲಿ ಬಿಡಾರ ಹೂಡಿದ್ದಾರೆ. ಹಾಡುಗಾರಿಕಾ ಕ್ಷೇತ್ರದಲ್ಲಿ ತನ್ನ ಇಡೀ ಜೀವನವನ್ನೇ ಸವೆಸಿ ಜನಪದ ಲೋಕಕ್ಕೆ ಒಂದು ಗಟ್ಟಿಯಾದ ನೆಲೆಗಟ್ಟನ್ನು ನೀಡಿರುವ ಈ ತತ್ವ ಗಾಯಕ ಜಟ್ಟಿಗನಿಗೆ ಗಟ್ಟಿಮುಟ್ಟಾದ ಮನೆಯನ್ನು ನಿರ್ಮಿಸಿಕೊಳ್ಳಬೇಕೆಂಬ ಬಯಕೆ ಇದೆ. ಆದರೆ ಹಣಕಾಸಿನ ಕೊರತೆಯಿಂದಾಗಿ ಅದು ಇನ್ನೂ ಕೈಗೂಡಿಲ್ಲ.

ಇವರ ಕುಟುಂಬದ ಆರ್ಥಿಕ ಪರಿಸ್ಥಿತಿ ತುಂಬಾ ಜಟಿಲವಾಗಿದೆ. ಊರೂರು ಅಲೆಯುತ್ತಾ ಭಿಕ್ಷೆ ಬೇಡುತ್ತಾ ಏಕತಾರಿ ಹಿಡಿದು ಹಾಡುತ್ತಾ ಹೆಚ್ಚು ಶ್ರಮವಹಿಸಿ ಕಲೆಯನ್ನು ಪ್ರದರ್ಶಿಸಿದರೂ

ತಕ್ಕ ಪ್ರತಿಫಲ ಸಿಗುತ್ತಿಲ್ಲ. ಅಲ್ಪಸ್ವಲ್ಪ ಕಾಳು-ಕಡಿಗಳನ್ನು ಜೊತೆಗೆ ಮುಡಿಗಾಸನ್ನು ಕೊಟ್ಟು ಕಳುಹಿಸುತ್ತಿದ್ದರು. ಇವುಗಳಿಂದ ಬಂದ ಆದಾಯದಿಂದ ತಮ್ಮ ಜೀವನವನ್ನು ಸಾಗಿಸುತ್ತಿದ್ದರು. ದಿನಕಳೆದಂತೆಲ್ಲಾ ತತ್ವಗೀತೆಗಳನ್ನು ಹಾಡುವುದರಲ್ಲಿ ಪ್ರಸಿದ್ಧಿ ಪಡೆದಿದ್ದರಿಂದ ಯಲಬುರ್ಗಾದ ಶ್ರೀಯುತ ಮುನಿಯಪ್ಪ ಹುಬ್ಬಳ್ಳಿಯವರು ಸರ್ಕಾರದ ವತಿಯಿಂದ ದೊರೆಯುವ ಮಾಶಾಸನಕ್ಕೆ ಅರ್ಜಿ ಹಾಕಿಸಿದರು. ಜೊತೆಗೆ ಶ್ರೀಯುತ ವೀರಪ್ಪ ಎಂ. ಕಂಬಳಿಯವರು ಸಹಕಾರ ನೀಡಿದರು. ಹಲವು ದಿನಗಳ ನಂತರದಲ್ಲಿ ಸರ್ಕಾರವೂ ಇವರ ಜಾನಪದ ಪ್ರತಿಭೆಯನ್ನು ನೋಡಿ ಮಾರೆಪ್ಪನಿಗೆ ಮಾಶಾಸನವನ್ನು ಮಂಜೂರು ಮಾಡಿತು. ಸರ್ಕಾರದಿಂದ ತಿಂಗಳಿಗೆ ರೂ.೨೫೦.೦೦ಗಳ ಮಾಶಾಸನ ಇವರ ಕುಟುಂಬಕ್ಕೆ ಬರುತ್ತಿತ್ತು. ಹೀಗೆ ಕೊಟ್ಟಂತಹ ಹಣದಿಂದ ಜೀವನ ಸಾಗಿಸುವುದು ತುಂಬಾ ಕಷ್ಟವಾಗುತ್ತಿತ್ತು. ಆದರೂ ಅಷ್ಟರಲ್ಲಿಯೇ ತುಂಬು ಕುಟುಂಬದ ಜೀವನವನ್ನು ಸಾಗಿಸುತ್ತಿದ್ದರು.

ಸರ್ಕಾರವು ಕಲಾವಿದರಿಗೆ ರೂ.೨೫೦.೦೦ ದಿಂದ ಇಂದು ರೂ. ೧೦೦೦.೦೦ಗಳವರೆಗೆ ಸಹಾಯಧನವನ್ನು ನೀಡುತ್ತದೆ. ಆದರೆ ಇದು ಕಲಾವಿದರ ಜೀವನಕ್ಕೆ ಸಾಕಾಗುವುದಿಲ್ಲವೆಂದು ಸಣ್ಣಪುಟ್ಟ ವ್ಯಾಪಾರಗಳನ್ನೂ ಮಾಡುತ್ತಾ ಜೀವನ ಸಾಗಿಸುತ್ತಿದ್ದಾರೆ.

ತುಂಬಾ ಸ್ವಾಭಿಮಾನಿಯಾದ ಮಾರೆಪ್ಪ ಸರಕಾರದ ಯಾವುದೇ ಸವಲತ್ತಿನ ಹಿಂದೆ ಬೀಳದೆ, ಈಗಲೂ ತನ್ನ ಸಮುದಾಯದ ಚೆನ್ನದಾಸರೊಂದಿಗೆ ಗುಡಾರದಲ್ಲಿ ಆರ್ಥಿಕವಾಗಿ ಕಡುಬಡತನದಲ್ಲಿ ಬದುಕುತ್ತಿದ್ದಾರೆ.

೨.೬. ಪ್ರಶಸ್ತಿಗಳು-ಪುರಸ್ಕಾರಗಳು

"ಸುಮಾರು ೧೯೭೦ರ ಸಮಯ ಮಾರೆಪ್ಪ ಚೆನ್ನದಾಸರು ಧಾರವಾಡದ ಬೀದಿ ಬೀದಿಗಳಲ್ಲಿ ಹಾಡುತ್ತಾ ಭಿಕ್ಷೆ ಬೇಡುತ್ತಾ ಇದ್ದ ಸಮಯ. ನಾಡಿನ ಹಿರಿಯ ಹಿಂದೂಸ್ತಾನಿ ಗಾಯಕ ದಿ. ಡಾ॥ ಮಲ್ಲಿಕಾರ್ಜುನ ಮನ್ಸೂರರು ಇವರ ಹಾಡುಗಳನ್ನು ಕೇಳಿಸಿಕೊಂಡು ಇವರನ್ನು ತಮ್ಮ ಮನೆಗೆ ಕರೆಸಿ ಮತ್ತೊಮ್ಮೆ ಹಾಡಿಸಿ, ಇವರ ಏಕತಾರಿ ಪದಗಳಿಗೆ ಬೆರಗಾಗಿ ಹೋದರು.

ದಾಸರನ್ನು ಸತ್ಕರಿಸಿ ಧಾರವಾಡ ಆಕಾಶವಾಣಿ ಕೇಂದ್ರಕ್ಕೆ ಪರಿಚಯಿಸಿದರು. ಅಂದಿನಿಂದ ಇಲ್ಲಿಯವರೆಗೂ ಮಾರೆಪ್ಪ ಚೆನ್ನದಾಸರ ಏಕತಾರಿ ಪದಗಳು ಬಾನುಲಿ ಕೇಂದ್ರದಲ್ಲಿ ಯಾವಾಗಲೂ ಪ್ರಸಾರಗೊಳ್ಳುತ್ತಿದ್ದು ಜನಮೆಚ್ಚುಗೆ ಪಡೆದಿವೆ. ಡಾ. ಮಲ್ಲಿಕಾರ್ಜುನ ಮನ್ಸೂರರನ್ನು ಸದಾ ನೆನೆಯುವ ಮಾರೆಪ್ಪ ಚೆನ್ನದಾಸರು ಈಗಿನ ಎಲ್ಲ ಕೀರ್ತಿ ಗೌರವಗಳಿಗೆ ಮನ್ಸೂರ್ ಅವರೇ ಕಾರಣ ಎನ್ನುತ್ತಾರೆ. ಕರ್ನಾಟಕ ವಿಶ್ವವಿದ್ಯಾಲಯದ ಮಾಜಿ ಕುಲಪತಿಗಳಾದ ಡಾ.ಆರ್.ಸಿ.ಹಿರೇಮಠ ಅವರು ಮಾರೆಪ್ಪ ಚೆನ್ನದಾಸರ ಏಕತಾರಿ ಹಾಡಿಗೆ ಮನಸೋತು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ."[೬]

ಇವರಿಗೆ ಸಂದ ಪ್ರಶಸ್ತಿ ಗೌರವಗಳೂ ಹಲವು.

೧. ಕರುನಾಡು ಕೋಗಿಲೆ ಬಿರುದು, ದಿನಾಂಕ: ೦೬.೦೫.೧೯೮೫, ಯಲಬುರ್ಗಾದ ಶ್ರೀಸಿದ್ದರಾಮೇಶ್ವರ ಸಂಸ್ಥಾನ ಹಿರೇಮಠ.

೨. ಕರ್ನಾಟಕ ಜಾನಪದ ಟ್ರಸ್ಟ್ ಅಕಾಡೆಮಿ, ದಿನಾಂಕ: ೧೩.೦೧.೧೯೮೭.

೩. ಶ್ರೀ ಜಗದ್ಗುರು ತೋಂಟದಾರ್ಯ ವೀರಶೈವ ಸಂಘ ಪ್ರಶಸ್ತಿ, ದಿನಾಂಕ: ೧೬.೦೧.೧೯೮೯

೪. ಕನ್ನಡ ಅಧ್ಯಯನ ಪೀಠ ಪ್ರಶಸ್ತಿ ಪತ್ರ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ದಿನಾಂಕ: ೨೦.೦೩.೧೯೯೩.

೫. ಸೂರ್ ಸಂಗೀತ ಸಭಾ ಕಲಾವೈಭವ ಉತ್ಸವದ ಜಾನಪದ ಸಂಗೀತ ನಾಟ್ಯ ಅಭಿನಂದನೆ ಪತ್ರ ದಿನಾಂಕ: ೨೪, ೨೫, ೨೬, ೧೯೯೩.

೬. ಗೌರವ ಪ್ರಶಸ್ತಿ, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು, ದಿನಾಂಕ: ೧೬.೦೩.೧೯೮೯.

೭. ರಾಜೀವಗಾಂಧಿ ಪ್ರಶಸ್ತಿ ಪತ್ರ, ದಿನಾಂಕ: ೧೫.೧೧.೨೦೦೦.

೮. ಜಾನಪದ ಕೋಗಿಲೆ, ವೀರಪುಲಕೇಶಿ ಕನ್ನಡ ಬಳಗ, ದಿನಾಂಕ: ೦೩.೦೭.೨೦೦೦.

೯. ರಾಜ್ಯ ಜಾನಪದ ಕಲಾ ಸಂಗಮ ಪ್ರಶಸ್ತಿ ಪತ್ರ, ದಿನಾಂಕ: ೨೦.೦೩.೨೦೦೧.

೧೦. ಶ್ರೀ ಶರೀಫ ಶಿವಯೋಗಿ ಸೇವಾ ಸಮಿತಿ ಪ್ರಮಾಣ ಪತ್ರ, ದಿನಾಂಕ: ೦೩.೦೭.೨೦೦೭

೧೧. ಆನೆಗೊಂದಿ ಉತ್ಸವ ಪ್ರಶಸ್ತಿ ಪತ್ರ, ದಿನಾಂಕ: ೦೪.೧೧.೨೦೦೨.

೧೨. ಸಮತಾ ಸಂಸ್ಕೃತಿ ಸಂಭ್ರಮ ಗುಲಬರ್ಗಾ ಪ್ರಮಾಣ ಪತ್ರ, ದಿನಾಂಕ:೦೩.೦೯.೨೦೦೪.

೧೩. ಕೊಪ್ಪಳ ಜಿಲ್ಲಾ ಆಡಳಿತ ಕೊಪ್ಪಳ ಪ್ರಮಾಣ ಪತ್ರ, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಆಕಾಡೆಮಿ, ದಿನಾಂಕ: ೦೫.೦೬.೨೦೦೮.

೧೪. ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತು, ಸಮ್ಮೇಳನ ಯಲಬರ್ಗಾ ಪ್ರಶಸ್ತಿ ಪತ್ರ, ದಿನಾಂಕ: ೨೬.೦೯.೨೦೦೪.

೧೫. ಬುದ್ಧ ಬಸವ ಅಂಬೇಡ್ಕರ ಭವನ ಪ್ರಶಸ್ತಿ ಪತ್ರ, ದಿನಾಂಕ: ೨೬.೦೯.೨೦೦೪.

೧೬. ಕನ್ನಡ ಸಾಹಿತ್ಯ ಪರಿಷತ್ತು, ಯಲಬುರ್ಗಾ ಅಭಿನಂದನಾ ಪತ್ರ, ದಿನಾಂಕ: ೧೩.೦೩.೨೦೦೫

೧೭. ಅಖಿಲ ಕರ್ನಾಟಕ ಸಾಂಸ್ಕೃತಿಕ ಮಹೋತ್ಸವ ಪ್ರಮಾಣ ಪತ್ರ ದಿ: ೦೩, ೦೪.೦೯.೨೦೦೫.

೧೮. ಮೈಸೂರು ದಸರಾ ಮಹೋತ್ಸವ ಅಭಿನಂದನಾ ಪತ್ರ, ದಿನಾಂಕ: ೦೬.೧೦.೨೦೦೫.

೧೯. ಕರ್ನಾಟಕ ಸಂಘ, ನವದೆಹಲಿ ಪ್ರಮಾಣ ಪತ್ರ, ದಿನಾಂಕ: ೨೧, ೨೨.೦೭.೨೦೦೭.

೨೦. ಜಾನಪದ ಜಾತ್ರೆ ಪ್ರಶಸ್ತಿ ಪತ್ರ, ದಿನಾಂಕ: ೦೭, ೧೮, ೧೯, ೨೦೦೭.

೨೧. ಸಮತಾ ಸಂಭ್ರಮ, ಧಾರವಾಡ ಪ್ರಮಾಣ ಪತ್ರ ದಿನಾಂಕ: ೨೯.೦೭.೨೦೦೭

೨೨. ರಾಜ್ಯ ಪ್ರಶಸ್ತಿ, ೦೧.೧೧.೨೦೦೪.

ಇಷ್ಟೆಲ್ಲಾ ಪ್ರಶಸ್ತಿ ಬಿರುದುಗಳನ್ನು ಪಡೆದುಕೊಂಡ ಮಾರೆಪ್ಪ ಚೆನ್ನದಾಸರು, ಚೆನ್ನದಾಸರ ಸಮಾಜದಲ್ಲಿಯೇ ಮೇರು ವ್ಯಕ್ತಿಯಾಗಿ ನಿಲ್ಲುವವರು. ಬಾಲ್ಯದಿಂದಲೇ ಅಪ್ಪನ ಹಿಂದೆ ಅಲೆಮಾರಿಯಾಗಿ ತಿರುಗಿ ಹಾಡಿ ಹಾಡಿ ಈಗ ಮುಪ್ಪಿನ ಹಂತಕ್ಕೆ ಬಂದಿದ್ದಾರೆ. ಹಿರಿಯರು ಹಾಡಿದ ರಾಗಕ್ಕೆ ಜನಪದ ಸೊಗಡಿನ ಲಯ ತುಂಬಿ ಜನಮನದಲ್ಲಿ ಮೋಡಿ ಮಾಡಿದ ಕಲಾವಿದ ಈ ಮಾರೆಪ್ಪ ಚೆನ್ನದಾಸರು ದೂರದರ್ಶನದಲ್ಲಿ ಹಾಗೂ ಆಕಾಶವಾಣಿಯಲ್ಲಿ ಹಲವಾರು ಕಾರ್ಯಕ್ರಮಗಳನ್ನು ನೀಡಿದ್ದಾರೆ. ಮಾಗಿದ ಕಂಠದಲ್ಲಿ ಹೊರಬರುವ ಧ್ವನಿ ಊರಿನ ಕಿವಿ ಆಗುತ್ತಿತ್ತು. ಆದರೆ ವಯಸ್ಸಿಗನುಗುಣವಾಗಿ ಕಿವಿ ಮಂದಾಗಿವೆ, ಕೈ ನಡುಗುತ್ತಿವೆ. ಚರ್ಮ ಸುಕ್ಕುಗಟ್ಟಿದೆ. ಕಾಲುಗಳು ಬಳಲಿವೆ. ಮನಸ್ಸು ನೊಂದಿದೆ. ಆದರೆ ಕಂಠಕ್ಕೆ ಮಾತ್ರ ಚಿರಯೌವ್ವನ ತುಂಬಿದೆ ಎಂಬುದು ಈಗಲೂ ಅವರು ಹಾಡುವ ಕೌಶಲ್ಯ ನೋಡಿದವರಿಗೆ ಹೀಗನಿಸುತ್ತದೆ. ಹತ್ತಾರು ವರುಷಗಳಿಂದ ದಣಿದ ಈ ಕಂಠಕ್ಕೆ ಸಹಜವಾಗಿಯೇ ಬಳಲಿಕೆಯ ನೋವಿದೆ. ಸಹಾಯಕ್ಕಾಗಿ ಕೂಗಿದೆ. ಸಮಾಜವಾಗಲಿ, ಸರಕಾರವಾಗಲಿ ಅವರ ಕಂಠಕ್ಕೆ ವಿರಾಮ ನೀಡಲು ಸಹಾಯದ ಹಸ್ತಚಾಚಬೇಕಿದೆ.

ಅಡಿಟಿಪ್ಪಣಿಗಳು:

೧. ಈ ಎಲ್ಲಾ ಮಾಹಿತಿಯನ್ನು ನಾನು ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡಿರುವ ತತ್ವಪದ ಗಾಯಕ ಮಾರೆಪ, ಚೆನ್ನದಾಸರಿಂದ ಸಂಗ್ರಹಿಸಲಾಗಿದೆ.

೨. ಕಿಶನ್‌ರಾವ್ ಕುಲಕರ್ಣಿ ಹಾಗೂ ಬಸವರಾಜ ಮೂಲಿಮನಿ; ಅಲೆಮಾರಿ ಲೇಖನಗಳ ತರಂಗವಾರಪತ್ರಿಕೆ; ಅಗಸ್ಟ್ ೨೦೦೯, ಪುಟ-೨೬.

೩. ಅದೇ, ಸಂದರ್ಶನ.

೪. ಅದೇ, ಸಂದರ್ಶನ.

೫. ಅದೇ, ಸಂದರ್ಶನ.

೬. ವಿ.ಎಸ್.ಶಿವಪ್ಪಯ್ಯನಮಠ; ಲೇಖನ; ಹೊಸದಿಗಂತ ಪತ್ರಿಕೆ.

೭. ಅದೇ, ತರಂಗ ವಾರಪತ್ರಿಕೆ, ಪುಟ-೨೭.

ಅಧ್ಯಾಯ ಮೂರು

ಮಾರೆಪ್ಪ ಚೆನ್ನದಾಸರು ಹಾಡಿರುವ ತತ್ವಪದಗಳು ಹಾಗೂ ಅವುಗಳ ವಿಶ್ಲೇಷಣೆ

ಮಾರೆಪ್ಪ ಚೆನ್ನದಾಸರು ಹಾಡಿರುವ ತತ್ವಪದಗಳು ಹಾಗೂ ಅವುಗಳ ವಿಶ್ಲೇಷಣೆ

ತತ್ವಪದಗಳ ಅರ್ಥ ವಿವರಣೆ:

'ತತ್ವ' ಎಂದರೆ ಸಿದ್ಧಾಂತ, ಪರಮಾತ್ಮ, ನಿಜಸ್ಥಿತಿ ಎಂದರ್ಥವಾಗುತ್ತದೆ. ತತ್ವಜ್ಞಾನವನ್ನು ಬ್ರಹ್ಮ ಜ್ಞಾನವೆಂದು ಕರೆಯಲಾಗಿದೆ. 'ಪದ' ಎಂಬುದನ್ನು 'ಹಾಡು', 'ಹದಗೊಂಡ ಶಬ್ದ' ಎಂದು ಕರೆಯಲಾಗಿದೆ. ಪರಮಾತ್ಮನಿಗೆ ಸಂಬಂಧಿಸಿದ, ಸಿದ್ಧಾಂತವನ್ನು ಹಾಡಿನ ಮೂಲಕ ಅಭಿವ್ಯಕ್ತಿಸುವ ಕ್ರಿಯೆಗೆ ತತ್ವಪದ ಎನ್ನುತ್ತಾರೆ. 'ತತ್ವಪದ'ದಲ್ಲಿ ತತ್ವ ಮತ್ತು ಪದ ಇವೆರಡಕ್ಕೂ ಅರ್ಥಪೂರ್ಣವಾದ ಸಂಬಂಧವಿದೆ. 'ತತ್ವ' ವಸ್ತುವಾದರೆ, 'ಪದ' ಅಭಿವ್ಯಕ್ತಿ ಮಾಧ್ಯಮ. ವಸ್ತು ಮತ್ತು ಅಭಿವ್ಯಕ್ತಿ ಇವೆರಡನ್ನು ಸಮನ್ವಯಗೊಳಿಸಿಕೊಂಡಿರುವ 'ತತ್ವಪದ' ಕನ್ನಡ ಸಾಹಿತ್ಯದ ಒಂದು ವಿಶಿಷ್ಟ ಸಾಹಿತ್ಯ ಪ್ರಕಾರವಾಗಿರುವುದರ ಜೊತೆಗೆ ಸಂಸ್ಕೃತಿಯೊಂದರ ಪ್ರತೀಕವೂ ಆಗಿದೆ. ತತ್ವಪದಗಳು "ಹರಸಂಸ್ಕೃತಿಯನ್ನು ಹೇಳಿದರೆ, ಕೀರ್ತನೆಗಳು ಹರಿಸಂಸ್ಕೃತಿಯನ್ನು ಹೇಳಿವೆ."[೧]

ತತ್ವಪದಗಳನ್ನು ಭಜನೆ ಪದಗಳೆಂದೂ, ಅನುಭಾವ ಪದಗಳೆಂದೂ ಕರೆಯುತ್ತಾರೆ. ಈ ಪದಗಳನ್ನು ಭಜನೆಗಳ ಮೂಲಕ ಅಭಿವ್ಯಕ್ತಿಸಲು ಪ್ರಾರಂಭಿಸಿದಾಗ ಇವುಗಳಿಗೆ ಭಜನೆ ಪದಗಳೆಂದು ಹೆಸರು ಬಂದಂತೆ ಕಾಣುತ್ತದೆ. ಭಜನೆಯು ಸಾಮಾನ್ಯವಾಗಿ ಎರಡು ರೀತಿಯಿಂದ ನಡೆಯುತ್ತದೆ. ವ್ಯಕ್ತಿಗತ ಭಜನೆ ಮತ್ತು ಸಾಮೂಹಿಕ ಭಜನೆಗಳನ್ನು ಉದಾಹರಿಸಬಹುದು. ಭಕ್ತನೊಬ್ಬನೇ ದೇವರ ಮುಂದೆ ಕುಳಿತು ಹಾಡುತ್ತಾ, ದೇವರನ್ನು ಕುರಿತು ಭಜಿಸುವ ಕ್ರಿಯೆ ವ್ಯಕ್ತಿಗತ ಭಜನೆಯಾದರೆ, ಏಳೆಂಟು ಜನರು ಸಮೂಹಗೊಂಡು ತಾಳ, ದಮ್ಮಡಿ, ಏಕತಾರಿ ಈ ಮುಂತಾದ ವಾದ್ಯಗಳೊಂದಿಗೆ ಸ್ವರವೆತ್ತಿ ಹಾಡುವುದು ಸಾಮೂಹಿಕ ಭಜನೆಯಾಗುತ್ತದೆ. ಈ ತತ್ವಪದ ಹೀಗೆ ಭಜನೆ ಮೇಳದ ಮೂಲಕ ಬಂದಾಗ ಪರಿಣಾಮಕಾರಿಯಾದ ಒಂದು ಸಮೂಹ ಮಾಧ್ಯಮವಾಗುತ್ತದೆ. ಮುಮ್ಮೇಳದಲ್ಲಿ ಪ್ರಮುಖ ಹಾಡುಗಾರನೊಬ್ಬ ಪದ ಎತ್ತಿಕೊಂಡು ಹಾಡಿ ಪಲ್ಲವಿ ಹೇಳಿದ ಕೂಡಲೇ ಹಿಮ್ಮೇಳ ಅದನ್ನೇ ಅನುಕರಿಸಿ ಸ್ವರವೆತ್ತಿ ಹಾಡಲು ಪ್ರಾರಂಭಿಸುತ್ತದೆ. ಅಂತೆಯೇ ತತ್ವಪದಗಳನ್ನು ಸ್ವರವಚನಗಳೆಂದೂ ಕರೆಯಲಾಗಿದೆ.

ತತ್ವಪದಗಳನ್ನು ಅನುಭಾವ ಪದಗಳೆಂದೂ ಇದಕ್ಕೆ ಸಂಬಂಧಿಸಿದ ಸಾಹಿತ್ಯವನ್ನು ಕೈವಲ್ಯ ಸಾಹಿತ್ಯವೆಂದು ಗುರುತಿಸಲಾಗಿದೆ. ಕನ್ನಡದಲ್ಲಿ ರಚನೆಯಾಗಿರುವ ತತ್ವಪದ ಸಾಹಿತ್ಯಕ್ಕೆ ಒಂದು ಪರಂಪರೆಯನ್ನು ಕಟ್ಟಿಕೊಂಡು ಡಾ. ಎಚ್. ತಿಪ್ಪೇರುದ್ರಸ್ವಾಮಿಯವರು "ಕನ್ನಡದಲ್ಲಿ ಕೈವಲ್ಯ ಸಾಹಿತ್ಯ ಎಂಬ ಗ್ರಂಥವನ್ನೇ ರಚಿಸಿದ್ದಾರೆ."[೨]

"ತತ್ವಪದಗಳು ಒಂದು ಅನುಭವದ ಘಟನೆಯಿಂದ ಹುಟ್ಟುತ್ತವೆ. ಆ ಘಟನೆಗಳ 'ತತ್ವ'ವನ್ನು ಬೇಧಿಸುವುದರ ಮೂಲಕ ಆ ಅನುಭವವನ್ನು ಅನುಭಾವಕ್ಕೆ ತಿರುಗಿಸುತ್ತವೆ. ಸಂತರ ಅಥವಾ ಅವರ ಶಿಷ್ಯರ ಬದುಕಿನ ಘಟನೆಗಳೇ ತತ್ವಪದಗಳಿಗೆ ವಿವರಣೆಯಾಗುತ್ತವೆ. ಕೆಲವು ಸಲ ವಿಲಕ್ಷಣವಾದ ಸ್ಥಿತಿಗಳ ಮುಖಾಂತರ ಸಂತರು ಲೋಕದವರ ಮನಸ್ಸಿನಲ್ಲಿ ಹೊಸ ಅರ್ಥಗಳನ್ನು ಹೊರಡಿಸುತ್ತಾರೆ. ಇದನ್ನು ಸಂತ ಪರಂಪರೆಯಲ್ಲಿ ಕ್ರಿಯಾರೂಪಗಳು; ತತ್ವಪದಗಳು 'ಕಾರಣೀಕ'ಗಳ ವಾಗ್ರೂಪಗಳು ಎನ್ನುವ ಪ್ರೊ. ಎಚ್.ಎಸ್.ಶಿವಪ್ರಕಾಶ್ ಅವರು 'ತತ್ವಪದ'ಗಳಿಗೂ 'ಕಾರಣೀಕ'ಗಳಿಗೂ ಇರುವ ಅರ್ಥಪೂರ್ಣ ಸಂಬಂಧವನ್ನು ವಿವರಿಸಿದ್ದಾರೆ.

ತತ್ವಪದ ಸಾಹಿತ್ಯ ಅಧ್ಯಾತ್ಮಕ್ಕೆ ಸಂಬಂಧಿಸಿರುವುದರಿಂದ, ಈ ಸಾಹಿತ್ಯ ಪ್ರಕಾರ ಧರ್ಮದ ಚೌಕಟ್ಟಿನಲ್ಲಿ ಬೆಳೆದುಬಂದಿರುವುದನ್ನು ಕಾಣಬಹುದಾಗಿದೆ. ತತ್ವಪದಗಳನ್ನು ಜನಪದ ಹಾಡುಗಳೆಂದು ಕೆಲವು ವಿದ್ವಾಂಸರು ಗುರುತಿಸಿದರೆ ಅವುಗಳನ್ನು ಶಿಷ್ಟ ಸಾಹಿತ್ಯ ಪರಂಪರೆಗೆ ಸೇರಿಸಿದವರೂ ಇದ್ದಾರೆ. ತತ್ವಪದವನ್ನು ಇತ್ತೀಚೆಗೆ Mysticism ಪದದೊಂದಿಗೆ ಸಮೀಕರಿಸಲಾಗುತ್ತದೆ. ಬೇರೆ ಬೇರೆ ಮಾರ್ಗಗಳ ಮೂಲಕ ಒಂದೇ ಸತ್ಯವನ್ನು ಕಂಡುಕೊಳ್ಳುವ ಕ್ರಿಯೆಗೆ Mysticism ಎಂದು ಕರೆಯಲಾಗುತ್ತದೆ. ಈ ಪದವು 'ಅನುಭಾವ' ಪದಕ್ಕೆ ಸಮಾನವಾಗಲಾರದೆಂದು ಕೆಲವರು ಅಭಿಪ್ರಾಯಪಟ್ಟಿದ್ದಾರೆ. ತತ್ವಪದಗಳನ್ನು ಅನುಭಾವ ಪದಗಳೆಂದು ಈಗಾಗಲೇ ಕೆಲವರು ಒಪ್ಪಿಕೊಂಡಿದ್ದಾರೆ. ಆದರೆ ಅನುಭಾವವೆಂಬುದು ಕೇವಲ ತತ್ವಪದ ಸಾಹಿತ್ಯ ಪ್ರಕಾರದಲ್ಲಿ ಮಾತ್ರ ಇರದೆ ವಚನ, ಕೀರ್ತನೆಯಂತಹ ಇತರ ಪ್ರಕಾರಗಳಲ್ಲಿಯೂ ಹುದುಗಿಕೊಂಡಿದೆ.

ತತ್ವಪದಗಳನ್ನು ರಚಿಸುವವರಿಗೆ ಅನುಭಾವಿ ಕವಿಗಳೆಂದು ಕರೆದರೆ, ತತ್ವಪದಗಳನ್ನು ಪ್ರಸಾರ ಮಾಡುವವರಿಗೆ ಭಜನೆ ಮೇಳಗಳೆಂದು ಗುರುತಿಸಲಾಗಿದೆ. ಅಂದರೆ ತತ್ವಪದ ಸಾಹಿತ್ಯ ಪ್ರಕಾರ ಪೂರ್ಣಗೊಳ್ಳಬೇಕಾದರೆ ಅದರ ರಚನೆಕಾರನಷ್ಟೇ ಅದನ್ನು ಪ್ರಸಾರಗೊಳಿಸುವ ಹಾಡುಗಾರನ ಪ್ರಾಮುಖ್ಯತೆಯೂ ಎದ್ದು ಕಾಣುತ್ತದೆ. ಕನ್ನಡ ತತ್ವಪದ ಸಾಹಿತ್ಯ ಪರಂಪರೆಯಲ್ಲಿ ತತ್ವಪದ ರಚನಾಕಾರರೇ ಅದರ ಹಾಡುಗಾರರಾಗಿರುವುದು ವಿಶಿಷ್ಟವಾಗಿದೆ.

ವಚನಕಾರರನ್ನು ಕೀರ್ತನಕಾರರನ್ನು ಅನುಭಾವಿ ಕವಿಗಳೆಂದು ಕರೆದಿಲ್ಲ. ಆದರೆ ವಚನ, ಕೀರ್ತನೆಗಳಲ್ಲಿ ಅನುಭಾವ ತುಂಬಿದೆ. ತತ್ವಪದ ರಚನಾಕಾರರನ್ನು ಮಾತ್ರ ಅನುಭಾವಿ ಕವಿಗಳೆಂದು

ಕರೆಯಲಾಗಿದೆ. ಆದ್ದರಿಂದ ತತ್ವಪದಕ್ಕೂ-ಅನುಭಾವಕ್ಕೂ ಅವಿನಾಭಾವ ಸಂಬಂಧವಿದೆ. ಅನುಭಾವವನ್ನು ಹೊರತುಪಡಿಸಿದ ತತ್ವಪದಗಳು ತುಂಬಾ ವಿರಳವೆನ್ನಬಹುದು. ಇಲ್ಲಿ ಬರುವ ತತ್ವ, ಅನುಭವದ ಮೂಲಕ ಹುಟ್ಟಿಕೊಂಡು, ಅನುಭಾವದ ಮುಖಾಂತರ ಹೊರ ಹೊಮ್ಮುತ್ತದೆ."[೩]

೩.೧. ತತ್ವಪದ ಪರಂಪರೆ

"ಕನ್ನಡದಲ್ಲಿ ತತ್ವಪದ ಸಾಹಿತ್ಯಕ್ಕೆ ಒಂದು ದೀರ್ಘವಾದ ಪರಂಪರೆಯಿದೆ. ಆ ಪರಂಪರೆ ಹನ್ನೆರಡನೆಯ ಶತಮಾನದ ವಚನಕಾರರಿಂದ ಪ್ರಾರಂಭವಾಗುತ್ತದೆ. ತತ್ವಪದಗಳನ್ನೇ ಸ್ವರ ವಚನಗಳೆಂದು ಗುರುತಿಸಿದರೆ, ಸ್ವರವಚನಗಳನ್ನು ಮೊಟ್ಟ ಮೊದಲು ರಚಿಸಿದ ಕೀರ್ತಿ ಶಿವಶರಣರಿಗೆ ಸಲ್ಲುತ್ತದೆ. ಸಕಲೇಶ ಮಾದರಸ ಕನ್ನಡದ ಮೊಟ್ಟ ಮೊದಲನೆಯ ಸ್ವರ ವಚನಕಾರನೆಂಬುದು ಈಗಾಗಲೇ ಸ್ಪಷ್ಟವಾಗಿದೆ. ಹನ್ನೆರಡನೆಯ ಶತಮಾನದ ಶಿವಶರಣರು ಅಸಂಖ್ಯಾತ ಸ್ವರವಚನಗಳನ್ನು ರಚಿಸಿದ್ದು ಅವುಗಳ ಸಾಂಸ್ಕೃತಿಕ ಅಧ್ಯಯನ ನಡೆಯಬೇಕಾಗಿದೆ.

ಆದ್ಯ ಸ್ವರ ವಚನಕಾರ ಸಕಲೇಶ ಮಾದರಸನಾದರೂ ಕೂಡ ಇದೇ ಸಾಹಿತ್ಯ ಪ್ರಕಾರವನ್ನು 'ಕೀರ್ತನೆ' ಎಂಬ ಹೆಸರಿನಲ್ಲಿ ರಚಿಸಿ ಜನಮನಕ್ಕೆ ಮುಟ್ಟಿಸಿದ ಕೀರ್ತಿ ಮುಂದೆ ಬಂದ ಪುರಂದರದಾಸಾದಿ ಕೀರ್ತನಕಾರರಿಗೆ ಸಲ್ಲುತ್ತದೆ. ಶಿವಪರವಾದ ಸ್ತುತಿ ಶರಣರದಾದರೆ ವಿಷ್ಣುಪರವಾದ ಸ್ತುತಿ ದಾಸರದಾಗಿದೆ. ಹೀಗೆ ಹುಟ್ಟಿಕೊಂಡ ಸ್ತುತಿ ಸಾಹಿತ್ಯಕ್ಕೆ ಕನ್ನಡದಲ್ಲಿ ದೀರ್ಘವಾದ ಪರಂಪರೆಯೇ ಇದೆ.

ತತ್ವಪದಗಳು ಶರಣರ ಸ್ವರವಚನಗಳಂತೆ ದಾಸರ ಕೀರ್ತನೆಗಳಂತೆ ಕಂಡರೂ ಅಭಿವ್ಯಕ್ತಿ ಕ್ರಿಯೆಯಲ್ಲಿ ಇವು ಸ್ವರವಚನ, ಕೀರ್ತನೆಗಳಿಗಿಂತ ಭಿನ್ನವಾಗಿವೆಯೆಂದೆನಿಸುತ್ತದೆ. ಶರಣರ ಸ್ವರವಚನಗಳಲ್ಲಡಗಿರುವ ಆಧ್ಯಾತ್ಮ ಜನಸಾಮಾನ್ಯರನ್ನು ತಲುಪಲಿಲ್ಲ. ವಚನಗಳು ಜನಪ್ರಿಯವಾದಂತೆ ಸ್ವರವಚನಗಳು ಜನಪ್ರಿಯವಾಗಲಿಲ್ಲ. ಇನ್ನೂ ಕೀರ್ತನೆಗಳು ಸಮೂಹ ಮಾಧ್ಯಮವಾಗಿ ಹೊರಹೊಮ್ಮಲಿಲ್ಲ. ಈ ಕೋರಿಕೆಯನ್ನು ತುಂಬಿಕೊಡುವ ತತ್ವಪದ ಭಜನೆಯಂತಹ ಸಮೂಹ ಮಾಧ್ಯಮದ ಮೂಲಕ ಬಹುಬೇಗ ಜನಮನವನ್ನು ತಲುಪಿತು. ನಿಜಗುಣ ಶಿವಯೋಗಿಗಳನ್ನು ಈ ತತ್ವಪದ ಸಾಹಿತ್ಯದ ಆದ್ಯ ಪ್ರವರ್ತಕರೆನ್ನಬಹುದಾಗಿದೆ. ಕ್ರಿ.ಶ. ೧೫೦೦ರಲ್ಲಿದ್ದ ನಿಜಗುಣರು ಗಹನಾದ ಉದಾತ್ತವಾದ ತತ್ತ್ವಗಳನ್ನು ಸರಳಗೊಳಿಸಿದರು. ಸುಲಭವಾದ ರೀತಿಯಲ್ಲಿ ಹೇಳಿದರು. ಆಗ ಈ ಸಾಹಿತ್ಯ ಜನಪ್ರಿಯತೆಯನ್ನು ಪಡೆಯಿತು. ಅಂತೆಯೇ ಈ ಸಾಹಿತ್ಯ ಪ್ರಕಾರವನ್ನು ಡಾ. ಚಂದ್ರಶೇಖರ ಕಂಬಾರರು ಜನಪ್ರಿಯ ಸಾಹಿತ್ಯವೆಂದು ಕರೆದರು.

ಹೀಗೆ ಹದಿನಾರನೆಯ ಶತಮಾನದಲ್ಲಿ ನಿಜಗುಣರಿಂದ ಅಧಿಕೃತವಾಗಿ ಪ್ರಾರಂಭವಾದ ಈ ತತ್ವಪದ ಸಾಹಿತ್ಯ ಇಂದಿನವರೆಗೂ ವಿವಿಧ ರೀತಿಯ ಆಯಾ ಮಗಳನ್ನು ಪಡೆದು ಬೆಳೆದುಕೊಂಡು

ಬಂದಿವೆ. ನಿಜಗುಣರು ಪ್ರಾರಂಭಿಸಿದ ಈ ಸಾಹಿತ್ಯ ರೂಪವನ್ನು ೧೮, ೧೯ನೆಯ ಶತಮಾನದಲ್ಲಿ 'ಸರ್ಪಭೂಷಣ ಶಿವಯೋಗಿಗಳು, ಬಾಲಲೀಲಾ ಮಹಾಂತ ಶಿವಯೋಗಿಗಳು ಮುಂದುವರೆಸಿಕೊಂಡು ಬಂದರು' ನಿಜಗುಣರು ತಮ್ಮ ತತ್ವಪದಗಳ ಸಂಕಲನವನ್ನು "ಕೈವಲ್ಯ ಪದ್ಧತಿ" ಎಂದು ಕರೆದರೆ, ಸರ್ಪಭೂಷಣರು ತಮ್ಮ ಹಾಡುಗಳ ಸಂಕಲನವನ್ನು "ಕೈವಲ್ಯ ಕಲ್ಪವಲ್ಲರಿ" ಎಂದು ಕರೆದಿದ್ದಾರೆ. ಅದೇ ರೀತಿ ಬಾಲಲೀಲಾ ಮಹಾಂತ ಶಿವಯೋಗಿಗಳು "ಕೈವಲ್ಯ ದರ್ಪಣ" ಎಂದಿದ್ದಾರೆ.

ಹೀಗೆ ೧೬ ರಿಂದ ೧೯ನೇ ಶತಮಾನದವರೆಗೆ ತತ್ವಪದ ಸಾಹಿತ್ಯವು ಕನ್ನಡದಲ್ಲಿ ವಿಪುಲವಾಗಿ ಬೆಳೆದುಕೊಂಡು ಬಂದಿದೆ. ಇಂತಹ ಮಹತ್ವದ ತತ್ವಪದಕಾರರನ್ನು ಚರಿತ್ರೆ ಮರೆತುಬಿಟ್ಟಿದೆ. ನಿಜವಾಗಿ ನೋಡಿದರೆ ಹದಿನೆಂಟು ಹತ್ತೊಂಬತ್ತನೆಯ ಶತಮಾನವನ್ನು ಕನ್ನಡ ತತ್ವಪದ ಸಾಹಿತ್ಯದ ಸುವರ್ಣಯುಗವೆಂದು ಕರೆಯಬಹುದು. ಈ ತತ್ವಪದ ಸಾಹಿತ್ಯ ಪರಂಪರೆಯಲ್ಲಿ ಪ್ರಮುಖವಾಗಿ ಮೂರು ಘಟ್ಟಗಳನ್ನು ಗುರುತಿಸಬಹುದಾಗಿದೆ. ಹನ್ನೆರಡನೆಯ ಶತಮಾನದಲ್ಲಿ ಸಕಲೇಶ ಮಾದರಸ, ಮುಂತಾದ ಶಿವಶರಣರಿಂದ ಪ್ರಾರಂಭಗೊಂಡ ಸ್ವರವಚನ ಸಾಹಿತ್ಯದ ಮೊದಲನೆಯ ಹಂತ. ಹದಿನಾರನೆಯ ಶತಮಾನದಲ್ಲಿ ನಿಜಗುಣ ಶಿವಯೋಗಿಗಳಿಂದ ಜನಪ್ರಿಯವಾದ ತತ್ವಪದ ಸಾಹಿತ್ಯದ ಎರಡನೆಯ ಹಂತ. ಹದಿನೆಂಟು, ಹತ್ತೊಂಬತ್ತನೆಯ ಶತಮಾನದಲ್ಲಿ ಶಿಶುನಾಳ ಶರೀಫ, ಕಡಕೋಳ ಮಡಿವಾಳಪ್ಪ, ಮೈಲಾರ ಬಸವಲಿಂಗಶರಣ, ಕೈವಾರ ನಾರಾಯಣಪ್ಪ ಮುಂತಾದ ತತ್ವಪದಕಾರರಿಂದ ಜನಮನ ತಲುಪಿ, ಜನಪದ ರೂಪ ಪಡೆದ ಮೂರನೇ ಹಂತ. ಈ ಮೂರು ಘಟ್ಟಗಳಲ್ಲಿ ರಚನೆಯಾಗಿರುವ ತತ್ವಪದಗಳಲ್ಲಿ ಮೊದಲು ಹಾಗೂ ಎರಡನೇ ಘಟ್ಟದ ತತ್ವಪದಗಳು ಪ್ರಕಟವಾಗಿವೆ. ಆದರೆ ಮೂರನೇ ಘಟ್ಟದ ಬಹುಮುಖ್ಯವಾದ ತತ್ವಪದ ಸಾಹಿತ್ಯವನ್ನು ಇನ್ನು ಸಂಗ್ರಹಿಸಬೇಕಾಗಿದೆ."[೨]

ಮೌಖಿಕವಾಗಿರುವ ತತ್ವಪದಗಳನ್ನು ಹಾಡುತ್ತಾ ಅವುಗಳನ್ನು ಪ್ರಸಾರ ಮಾಡುವ ಮತ್ತು ಅವುಗಳನ್ನೇ ಜೀವನದ ಉಸಿರಾಗಿಸಿಕೊಂಡಿರುವ ಮಾರೆಪ್ಪ ಚೆನ್ನದಾಸರು ಹಾಡುವ ವಡಕಿ ತಾತಪ್ಪಯ್ಯನ ತತ್ವಪದಗಳು, ಶಿಶುನಾಳ ಶರೀಫರು, ಫೀರ್ ಸಾಹೇಬರು, ಬಸವರಾಜ ತಾಳಕೇರಿ, ಸರ್ಪಭೂಷಣ ಶಿವಯೋಗಿ ಇನ್ನೂ ಮುಂತಾದವರ ತತ್ವಪದಗಳನ್ನು ಇಲ್ಲಿ ವಿಶ್ಲೇಷಣೆಗೆ ಒಳಪಡಿಸಿದ್ದೇನೆ.

೧. ಕರುಣವು ನೀ ಮಾಡೋ

ಕರುಣವು ನೀ ಮಾಡೊ ಸದ್ಗುರುದೇವ
ಕರುಣವು ನೀ ಮಾಡೊ ॥ಪ॥
ಕರುಣಸಾಗರ ಎನ್ನ ಕಡೆ ಹಾಯಿಸಯ್ಯೊ ಭವ ॥ಅನು ಪ॥

ಸತಿ ಸುತ ಪಿತಮತಿ ಅತಿ ಆಸೆಯಿಂದ ನಾನು
ಘಾಸಿ ಪಡುವೆನಯ್ಯ ಕಾಶಿನಾಥನೆ ಬಂಧು ॥೧॥

ಅಷ್ಟ ಮದಗಳಿಂದ ನಷ್ಟವಾದೆನು ದೇವ
ಸಪ್ತ ವ್ಯಸನದೊಳು ಮುಳಗಿ ಮರುಗಲಾರೆ ॥೨॥

ಭಕ್ತವತ್ಸಲನೆಂಬ ಬಿರುದು ಸಾರುತಲಿದ್ದಿ
ಮುಕ್ತಿದಾಯಕ ಪ್ರಭು ಕಡಿವಡಿಕೆ ತಾತನೆ ॥೩॥

ಇದು ವಡಕಿ ತಾತಪಯ್ಯ ರಚಿಸಿದ ತತ್ವಪದ (೧೮೫೦-೧೯೫೫)

ತತ್ವಪದಕಾರರು ಮನುಕುಲಕ್ಕೆ ಒಂದು ಉತ್ತಮ ಸಂದೇಶವನ್ನು ನೀಡಿದ್ದಾರೆ. ಅದು ಸದ್ಗುರು ದೇವನಲ್ಲಿ ಪ್ರಾರ್ಥಿಸಿಕೊಂಡಾಗ ಮನುಷ್ಯರಿಗೆ ಮುಕ್ತಿ ದೊರೆಯುವ ಮಾರ್ಗವನ್ನು ತಿಳಿಸಿದ್ದಾರೆ.

ಮಾನವನು ಹೆಂಡತಿ-ಮಕ್ಕಳೆಂಬ ಅತಿಯಾದ ಮಮಕಾರದೊಂದಿಗೆ ಈ ಭೂಮಂಡಲದಲ್ಲಿದ್ದು, ನಾನಾ ರೀತಿಯ ತೊಂದರೆಗಳನ್ನು ಅನುಭವಿಸುವ ಪರಿಯನ್ನು ಇಲ್ಲಿ ಮಾರ್ಮಿಕವಾಗಿ ತಿಳಿಸಿದ್ದಾರೆ. ಮನುಷ್ಯನು ಅಷ್ಟಮದಗಳಿಂದ ಅಂದರೆ- ಕುಲ ಮದ, ಛಲ ಮದ, ಧನಮದ, ರೂಪಮದ, ಯೌವನಮದ, ರಾಜಮದ, ತಪೋಮದ, ಸ್ತ್ರೀಮದ ಎಂಬ ಎಂಟು ಮದಗಳಲ್ಲಿ ಸಿಲುಕಿ ನಷ್ಟವನ್ನು ಅನುಭವಿಸುತ್ತಿದ್ದಾನೆ. ಅದೇ ರೀತಿ ಸಪ್ತವ್ಯಸನದಲ್ಲಿ ಅಂದರೆ- ಬೇಟೆ, ಮದ್ಯಪಾನ, ದ್ಯೂತ, ಕಠಿಣಮಾತು, ಕಠಿಣಶಿಕ್ಷೆ, ಕಠಿಣ ದಂಡ ಮತ್ತು ವ್ಯಭಿಚಾರ ಈ ಏಳು ದುಶ್ಚಟಗಳಲ್ಲಿ ತೊಡಗಿ ಬಳಲುತ್ತಿದ್ದಾನೆ. 'ಭಕ್ತವತ್ಸಲನೆಂಬ ಬಿರುದು ಸಾರುವ ಪ್ರಭುವೆ ಮುಕ್ತಿಯನ್ನು ಕರುಣಿಸು' ಎಂದು ವಡಕಿ ತಾತಪಯ್ಯನು 'ಕಡಿವಡಿಕೆ ತಾತ' ಎಂಬ ಅಂಕಿತದೊಂದಿಗೆ ಸದ್ಗುರುವಿನಲ್ಲಿ ಬೇಡಿಕೊಂಡಿದ್ದಾನೆ.

೨. ಮರ್ಯಾದೆಯಿಂದ ಬಾಳಿರೊ

ಮರ್ಯಾದೆಯಿಂದ ಬಾಳಿರೋ ಮಾನವರು ನೀವು
ಮರ್ಯಾದೆಯಿಂದ ಬಾಳಿರೋ ॥ಪ॥

ಮಾನವಂತನಿಗೆ ಮರ್ಯಾದೆ ಬೇಕು
ಹೀನ ಮನುಜಗೆ ಏನು ಹೇಳಬೇಕು
ಶ್ವಾನನಂಥ ಅವನ ಕರಿಯಬೇಕು
ನಾಯಿಜನ್ಮಕಿಂತ ಕಡಿ ಎನಬೇಕು ॥೧॥

ಮಾನ ಹೋದ ಮೇಲೆ ಮರಣ ಬಂದಂತೆ
ಹೀನ ಮನುಜಗೆ ಇನ್ನು ಇದ್ದಂತೆ
ಅರಿವು ಇಲ್ಲದ ಮನುಜನ ಬಾಯಿ
ಮನಿಯ ಹಿಂದಿನ ಬಚ್ಚಲದಂತೆ ॥೨॥

ಪಾಪ ಪುಣ್ಯ ವಿಚಾರಮಾಡ್ರಿ
ತಾಪದಿಂದ ಬಳಲುಬೇಡ್ರಿ
ಕೋಪ ಬಂದಾಗ ಸಮಾಧಾನಮಾಡ್ರಿ
ದುಡಿಕಿಹೋಗಿ ನೀವು ಕೆಡಬೇಡ ನೋಡ್ರಿ ॥೩॥

ಅರುವಿಗೆ ಕಾರಣ ಗುರುವು ನೋಡ್ರಿ
ಗುರುವಿನ ಪಾದ ಸೇವೆಯ ಮಾಡ್ರಿ
ಹೊಟ್ಟೆಯೊಳಗಿನ ದುರ್ಗುಣ ದೂಡ್ರಿ
ಶ್ರೀರಾಮಪಾದಕ ಮುಕ್ತಿಯ ಬೇಡ್ರಿ ॥೪॥

ಈ ತತ್ವಪದವನ್ನು ಸ್ವತಃ ಮಾರೆಪ್ಪ ಚೆನ್ನದಾಸರೇ ರಚಿಸಿ ಹಾಡಿದ್ದಾರೆ. ಇವರು ಮಾನವ ಜನಾಂಗಕ್ಕೆ ಉತ್ತಮವಾದ ಸಂದೇಶವನ್ನು ರವಾನಿಸಿದ್ದಾರೆ. ಮನುಷ್ಯರಾದವರು ಮಾನವೀಯತೆಯ ದೃಷ್ಟಿಯನ್ನಿಟ್ಟುಕೊಂಡು ಈ ಭೂಮಿಯ ಮೇಲೆ ಬದುಕನ್ನು ಸವೆಸಿದಾಗ ಅವರಿಗೊಂದು ಮರ್ಯಾದೆ ಇರುತ್ತದೆ.

ಬೆಲೆಯುಳ್ಳ ಮನುಷ್ಯ ಯಾವಾಗಲೂ ಇತರರಿಗೆ ಮಾದರಿಯಾಗಿರುತ್ತಾನೆ. ಅದೇ ದುಷ್ಟ ವ್ಯಕ್ತಿಯನ್ನು ನಾಯಿಯಂತೆ ಕರೆಯಬೇಕಾಗುತ್ತದೆ. ಎಂದು ತಿಳಿಸಿ ನಾಯಿ ಜನ್ಮಕ್ಕಿಂತಲೂ ಅವನು ಕಡೆ ಎಂದು ತಮ್ಮ ಅನುಭವದ ಮೂಲಕ ವ್ಯಕ್ತಪಡಿಸಿದ್ದಾರೆ.

ಮನುಷ್ಯ ಮಾನವನ್ನು ಕಳೆದುಕೊಂಡ ಮೇಲೆ ಮರಣವನ್ನು ತಂದುಕೊಂಡಂತೆ ಎಂದು ತಿಳಿಸಿದ್ದಾರೆ. ಹಾಗೆಯೇ ತಿಳುವಳಿಕೆ ಇಲ್ಲದೆ ಮಾತನಾಡುವ ಮನುಷ್ಯನ ಬಾಯಿ ಮನೆಯ ಹಿಂದಿನ ಬಚ್ಚಲದಂತೆ ಎಂದು ಹೋಲಿಕೆ ಮಾಡಿದ್ದಾರೆ.

ಪಾಪ, ಪುಣ್ಯ, ವಿಚಾರ ಮಾಡಿ ನಾವುಗಳು ಸಮಾಜದಲ್ಲಿ ಜೀವಿಸಬೇಕು. ಅದನ್ನು ಬಿಟ್ಟು ಯಾವಾಗಲೂ ತಾಪದಿಂದ ಬಳಲುವುದು ಬೇಡ. ಕೋಪ ಬಂದಾಗ ಸಮಾಧಾನಿಯಾಗಿರಬೇಕು. ದುಡುಕಿ ಕೆಡಬೇಡಿ ನಮ್ಮ ಅರಿವೇ ನಮಗೆ ಗುರು ಎಂದು ನಮ್ಮಲ್ಲಿಯ ಅಂತರಾತ್ಮವನ್ನು ಅರಿತುಕೊಂಡು ಗುರುತ್ವ ಪಡೆದು ಜ್ಞಾನವಂತರಾಗಿ ಸಮಾಜ ಒಪ್ಪುವ ರೀತಿಯಲ್ಲಿ ಬದುಕಬೇಕು.

ನಾವುಗಳು ಗುರುವಿನಲ್ಲಿ ಅಚಲ ನಂಬಿಕೆ, ನಿಷ್ಠೆ, ವಿಶ್ವಾಸದಿಂದ ಅವನ ಪಾದಕ್ಕೆ ಎರಗಿ ನಮ್ಮಲ್ಲಿರುವ ದುರ್ಗುಣಗಳನ್ನು ಹೊಡೆದೋಡಿಸಿ ನಮಗೆ ಮುಕ್ತಿಯನ್ನು ಕರುಣಿಸು ಎಂದು ಭಕ್ತಿಯಿಂದ ಗುರುವಿನಲ್ಲಿ ಕೇಳಿ ಮುಕ್ತಿಯನ್ನು ಪಡೆದುಕೊಳ್ಳಿರಿ ಎಂದು ತಿಳಿಸಿದ್ದಾರೆ.

ತತ್ವಪದಕಾರರೆಲ್ಲರೂ ತತ್ವಪದ ಗಾಯಕರಾಗಿರುವಂತೆ, ಮಾರೆಪ್ಪ ಚೆನ್ನದಾಸರು ತತ್ವಪದ ಗಾಯಕರಾಗಿದ್ದುಕೊಂಡು, ಕೆಲವೊಂದು ಇಂತಹ ಉತ್ತಮ ತತ್ವಪದಗಳ ರಚಿಸುವ ಕೌಶಲವನ್ನು ಹೊಂದಿದ್ದಾರೆಂದು ಈ ಮೂಲಕ ತಿಳಿದುಕೊಳ್ಳಬಹುದು.

೩. ಹದಿನೆಂಟು ಕುಲ ದೈವ ಕೇಳರಿ

ಹದಿನೆಂಟು ಕುಲ ದೈವ ಕೇಳರಿ
ಯಾರ ಇದಿರಿ ನಿಮ್ಮ ನೀವು ಚೂರ
ಕಲಿಯುಗದಾಗುಟ್ಟಿ ಕರ್ಮ ಕಳೆಯುತಿರಿ
ಎಲ್ಲೈತೊ ನಿಮ್ಮ ಆಚಾರ ॥೧॥

ಊರುವಳಗ ನೂರೆಂಟು ಯವಾರ
ವಿಚಾರ ಮಾಡುತಿರಿ ದಿವ್ಯಾಣ
ಹೊಲಗೇರೊಳಗ ಹೋಗುಬಾರದೆಂದು
ಶೀಲ ಮಾಡುತೀರಿ ಬಹು ಧ್ಯಾನ ॥೨॥

ಶೀಲ ಮಾಡುತಿರಿ ಮೂಲ ತಿಳಿಯದೆ
ಕಾಲ ಕಳೆಯುತಿರಿ ನೀವ್ ಹ್ಯಾಂಗೆ
ಶೀಲವಂತರ ಲಾಲೀಸಿ ಕೇಳರಿ
ಮೇಲ ಬಳಕಿ ಹುಟ್ಟಿತು ಹ್ಯಾಗ ॥೩॥

ಕೆಟ್ಟ ಹೊಲಸು ತನ್ನ ಹೊಟ್ಟೆಯೊಳಗಿಟ್ಟುಕೊಂಡು
ಮುಟ್ಟಿ ಮಾಡುತಿರಿ ಶಿವನಧ್ಯಾನ
ಮುಟ್ಟಿನೊಳಗನಿ ಹುಟ್ಟಬಂದಿಯೋ
ಇಷ್ಟಾರ ತಿಳಿಯೋ ಶಿವಧ್ಯಾನ ಸುಜ್ಞಾನಿ ॥೪॥

ಲಿಂಗು ಕಟ್ಟಿ ನೀನು ಶಾಸ್ತ್ರ ಹೇಳುತಿದಿ
ತೊಗಲಿನ ಮಿಣಿಯೋ ಹೆಗಲ್ ಮೇಲೆ

ಗಂಗಿಯ ಯಮುನೆರ ಅಂಗಾವ ತಿಳಿಯದ
ಲಿಂಗ ಹುಟ್ಟಿತು ಮತ್ತದು ಹ್ಯಾಗ ॥೫॥

ನಾರಿ ಬಿಟ್ಟಿದ ಸೀರಿ ಕುಪ್ಪಸ
ತೋರಿ ಒಗೆಯುತಳ ನೀರಾಗ
ಅದೇ ನೀರು ನೀವು ಜಳಕ ಮಾಡುತಿರಿ
ಮೀಸಲೆಂಬುದೊಂದ್ ಅದು ಹ್ಯಾಗ ॥೬॥

ಮಡಿಯ ಉಡುಗೊರೆಯುಟ್ಟು ಮೈಯ ತೊಳೆಯುತೀರಿ
ಲಿಂಗಪೂಜೆ ಎಡಗೈಯಾಗ
ಎಡಗೈಯೆಂಬುದು ಮಡಿ ಹೆಂಗಾಯಿತು
ಒಡದು ಹೇಳು ನಮಗ ॥೭॥

ಕೊಡವಿ ಹಾಕುತಾನ ಪಿಂಜಾರಣ್ಣ
ತೊಗಲಿನ ಬಿಸಿ (ಮತ್ತದರಾಗ) ಮಚ್ಚಿ ಅದರಾಗ
ದಾರಿ ಮಾರ್ಗದಲ್ಲಿ ಹರಿಗೋಲಾಡುವದು
ಬಾರ ಹನ್ನೆರಡು ತಿಂಗಳು ಹೊಳಿಯಾಗ ॥೮॥

ರೊಟ್ಟಿ ಬುತ್ತಿ ನೀನು ಕಟ್ಟಿಕೊಂಡು ಹೋಗುತಿದಿ
ಮತ್ತೆ ಇಡುವುತಿದಿ ತೊಗಲಾಗ
ಸೋಸಿ ನೋಡಿರ ಮೀಸಲೆಂಬುದು
ಹೇಸ್ಗಿರುತ್ತೆ ತನ್ನ ಮೈಯೊಳಗ
ವಾಸ ವಡ್ಡಟ್ಟಿ ಸೋಮನಾಥನು
ಈಶ್ವರನಿದ್ದನು ಗುಡಿಯೊಳಗ ॥೯॥

ಪೀರ ಸಾಹಿಬನು ಸಾರಿ ಹೇಳುತಾನೆ
ನೂರು ವರುಷದ ಹಿರಿಯರಿಗೆ
ಮುರಹರನ ಮಹಿಮೆಯು ಬೇಗ
ತಿಳಿದುಕೊಳ್ಳರಿ ನೀವು ಮನದೊಳಗ ॥೧೦॥

ಈ ತತ್ವಪದವನ್ನು ಫೀರ್‌ಸಾಹೇಬರು ರಚಿಸಿದ್ದಾರೆ. ಇದನ್ನು ಮಾರೆಪ್ಪ ಚೆನ್ನದಾಸರು ಬಹಳ ಸೊಗಸಾಗಿ ಹಾಡುತ್ತಾರೆ. ವೈಚಾರಿಕ ಹಿನ್ನೆಲೆಯಲ್ಲಿ ಶೀಲ ಸಚ್ಛಾರಿತ್ರ್ಯ, ಸ್ಪೃಷ್ಯ, ಅಸ್ಪೃಶ್ಯ ಮಡಿ–ಮೈಲಿಗೆ ಕುರಿತು ನೈತಿಕವಾದ ವಿಚಾರಧಾರೆಗಳನ್ನು ತಿಳಿಯಪಡಿಸಿದ್ದಾರೆ.

ಭೂಮಂಡಲದಲ್ಲಿರುವ ಎಲ್ಲಾ ಜಾತಿ-ಜನಾಂಗದವರಿಗೆ ನೀತಿಯುತವಾಗಿ ಬದುಕುವ ಸಂದೇಶವನ್ನು ಮನುಕುಲಕ್ಕೆ ತಿಳಿಸಿದ್ದಾರೆ. ಇಲ್ಲಿ ಮುಖ್ಯವಾಗಿ ತತ್ವಪದಕಾರರು ಅತಿಯಾದಂತಹ ಮಡಿವಂತಿಕೆ ಮಾಡುವವರನ್ನು ಕುರಿತು ಹೇಳಿದ್ದಾರೆ.

ಸಮಾಜದಲ್ಲಿನ ಜನರು ಹೇಳುವದೊಂದು ರೀತಿಯಾದರೆ ಮಾಡುವುದು ಇನ್ನೊಂದು ರೀತಿ. ಅಂದರೆ ಇಲ್ಲಿ ಮನುಷ್ಯ ಜಾತಿಯಲ್ಲಿ ಹುಟ್ಟಿದ ಬಳಿಕ ಮಾನವರು ಸುಸಂಸ್ಕೃತರಾಗಿ, ಸಂಸ್ಕಾರಭರಿತರಾಗಿ ಆಚಾರ-ವಿಚಾರ, ರೀತಿ-ನೀತಿ ಇವುಗಳನ್ನು ಗಮನದಲ್ಲಿಟ್ಟುಕೊಂಡು ಜೀವನವನ್ನು ಸಾಗಿಸಿಕೊಂಡು ಹೋಗಬೇಕಾಗುತ್ತದೆ. ಎಲ್ಲರೂ ಸರಿಸಮಾನರು ಎಂದು ತಿಳಿದು ಬದುಕಿ ಬಾಳಬೇಕಾಗುತ್ತದೆ. ಅಂದಾಗ ಮಾತ್ರ ಈ ಮಾನವ ಜನ್ಮ ಸಾರ್ಥಕವಾಗುತ್ತದೆ. ನಿಶ್ಕಲ್ಮಶವಾದ ಮನೋಭಾವನೆಯಿಂದ ನಾವು ಶಿವನನ್ನು ಧ್ಯಾನಿಸಬೇಕು. ಎಲ್ಲಾ ಮನುಷ್ಯರೂ ಹೊಲಸಿನಲ್ಲಿ ಹುಟ್ಟಿಬಂದು ಅದರ ಪರಿವೆಯೇ ಇಲ್ಲದೇ ಇಂದು ನಾವು ಅತಿಯಾದ ಮಡಿವಂತಿಕೆಯ ಮಾತುಗಳನ್ನಾಡುತ್ತಿದ್ದೇವೆ. ಒಳ್ಳೆಯ ಭಾವನೆಯಿಂದ ಶಿವನಲ್ಲಿ ಪ್ರಾರ್ಥಿಸಿ ಅಜ್ಞಾನದಿಂದ ಸುಜ್ಞಾನಿಯಾಗುವ ಕಡೆಗೆ ಚಲಿಸು ಎಂದು ಈ ಮೂಲಕ ತಿಳಿಯಪಡಿಸಿದ್ದಾರೆ.

'ಗಂಗಾಸ್ನಾನ ತುಂಗಾಪಾನ' ಎನ್ನುವ ಅರ್ಥವನ್ನು ನೋಡಿದಾಗ ಗಂಗಾನದಿಯ ನೀರು ಪವಿತ್ರ, ಹಾಗೇನೆ ತುಂಗಭದ್ರೆಯ ನೀರು ಕುಡಿಯಲು ಯೋಗ್ಯ. ಆದರೆ ಇಲ್ಲಿ ಹೆಣ್ಣುಮಕ್ಕಳು ತೊಟ್ಟುಬಿಟ್ಟ ಕುಪ್ಪಸ, ಸೀರೆಯನ್ನು ಅದ್ದಿ ಅದೇ ನೀರಿನಲ್ಲಿ ಮೈಲಿಗೆಯನ್ನು ತೊಳೆಯುತ್ತಾರೆ. ನಾವು ಕೂಡಾ ಆ ನದಿಯಲ್ಲಿ ಸ್ನಾನ ಮಾಡುತ್ತೇವೆ. ಹಾಗಾದರೆ ಮಡಿವಂತಿಕೆಯ ಮಾತುಗಳನ್ನಾಡುವವರ ಕುರಿತು ಏನೆನ್ನಬೇಕು. ಮಡಿಯಿಂದ ಬಟ್ಟೆಯನ್ನು ಧರಿಸಿ ಲಿಂಗಪೂಜೆಯನ್ನು (ಲಿಂಗವನ್ನು) ಎಡಗೈಯಲ್ಲಿಟ್ಟುಕೊಂಡೇ ಪೂಜೆ ಮಾಡುತ್ತೇವೆ. ಹಾಗಾದರೆ ಎಡಗೈಯ ಕಾರ್ಯವೇನು? ಗೊತ್ತಲ್ಲವೇ? ಅದು ಬೆಳಗಿನಜಾವ ಕಶ್ಮಲ (ಹೇಸಿಗೆ) ತೊಳೆಯುವ ಕಾರ್ಯ ಮಾಡುತ್ತದೆ. ಅದೇ ಕೈಯಲ್ಲಿ ನಾವು ಲಿಂಗವನ್ನಿಟ್ಟುಕೊಂಡು ಪೂಜೆ ಮಾಡುತ್ತೇವೆ. ಅಂದರೆ ಇಲ್ಲಿ ಎಡಗೈ ಮತ್ತು ಬಲಗೈ ಎರಡೂ ಶ್ರೇಷ್ಠ ಎಂಬ ವಿಚಾರವನ್ನು ತತ್ವಪದಕಾರರು ಬಹಳ ವಿಡಂಬನಾತ್ಮಕವಾಗಿ ತಿಳಿಯಪಡಿಸಿದ್ದಾರೆ.

ಒಟ್ಟಿನಲ್ಲಿ ಫೀರ್‌ಸಾಹೇಬರು ಇಲ್ಲಿ ಮುಖ್ಯವಾಗಿ ತಿಳಿಸುವ ವಿಚಾರವೇನೆಂದರೆ ಸರ್ವರೂ ಸರಿಸಮಾನರು. ಹಿಂದೂ, ಮುಸ್ಲಿಂ, ಕ್ರೈಸ್ತ ಬೌದ್ಧರೆಲ್ಲರೂ ಕೂಡಿ ಸಾಮರಸ್ಯದಿಂದ ಬದುಕಬೇಕು. "ಮನುಷ್ಯ ಜಾತಿ ತಾನೊಂದೇ ವಲಂ" ಎಂಬ ರೀತಿಯಲ್ಲಿ ಜೀವನವನ್ನು ಸಾಗಿಸಬೇಕು ಎಂದು ಬಹಳ ಸೂಕ್ಷ್ಮವಾಗಿ ಹದಿನೆಂಟು ಕುಲ ಜಾತಿಗಳಿಗೆ ಅಂದರೆ ಭೂಮಿಯ ಮೇಲಿರುವ ಎಲ್ಲ ಜಾತಿಯ ಜನಾಂಗದವರಿಗೂ ಎಚ್ಚರಿಕೆಯ ಘಂಟೆ ನೀಡಿದ್ದಾರೆ. ಸಮಾಜದಲ್ಲಿರುವ ಜನತೆಯ

ಮನವನ್ನು ಕಲಕಿ ಮನಃ ಪರಿವರ್ತನೆಗೆ ನಾಂದಿ ಹಾಡಿದ್ದಾರೆ. ಅಂದರೆ ಮೇಲ್ಜಾತಿ, ಕೆಳಜಾತಿ, ಆಸ್ತಿ–ಅಂತಸ್ತು, ವೈಡುರ್ಯಗಳಿಂದ ಬೀಗದೆ, ಇಡೀ ಮಾನವ ಜಾತಿ ಒಂದೇ ಎಂಬ ಅರ್ಥದಲ್ಲಿ ತಿಳಿಸಿ ಅತಿಯಾದ ಮಡಿವಂತಿಕೆ ಸಲ್ಲದು ಎಂಬುದನ್ನು ಕುರಿತು ಸೂಕ್ಷ್ಮವಾಗಿ ತಿಳಿಸಿದ್ದಾರೆ.

೪. ಬಂಜೆಂಬ ಶಬ್ದವು

ಬಂಜೆಂಬ ಶಬ್ದವು ಬರೆಮಾತು ಕೇಳಮ್ಮ
ಬಂಜಿ ಶಬ್ದಕ್ಕೆ ಅರ್ಥ ಬೇರಿಹುದಮ್ಮ ||ಪ||

ನನಗೆ ಮಕ್ಕಳು ಉಂಟು ನಾ ತಾಯಿ ಅಂದರೇನು
ಕುನ್ನಿಗಳು ಎಷ್ಟೊ ಇರಲಿ ನಾಯಿಗೆ ಗತಿಯುಂಟೆ
ತನ್ನ ಮಕ್ಕಳಂತೆ ಪರಮಕ್ಕಳ ನೋಡದವಳು
ಇನ್ನೆಂತು ತಾಯಿ ಅವಳು ಬಂಜೆ ನೋಡಮ್ಮ ||೧||

ಎತ್ತಿ ಮುದ್ದಿಸಿ ಮಲ್ಲಿ ಮಕ್ಕಳಾಡಿಸುವಂಥ
ಉತ್ತಮ ಗುಣದವಳೆ ನಿಜ ತಾಯಿ ನೋಡಮ್ಮ
ಹೊಟ್ಟೆಯಲ್ಲಿ ಹುಟ್ಟದಿರಲು ಬಂಜೆಂದು ಬಳಲುವರೆ
ಕೆಟ್ಟ ಮತ್ಸರ ತುಂಬಿದವಳೆ ಬಂಜೆ ನೋಡಮ್ಮ ||೨||

ಬಡವರ ಮನೆಯಲ್ಲಿ ಹೊಟ್ಟೆ ಬಟ್ಟೆಗಿಲ್ಲದೆ
ಎಡಬಿಡದೆ ಮಕ್ಕಳು ಬೇಡಿ ಅಳುತಿರುವಾಗ
(ನೆರೆಮನೆಯ ಮಕ್ಕಳು ಬೇಡಿ ಅಳುತಿರುವಾಗ)
ಹಿಡಿ ಅನ್ನ ಗೇಣು ಬಟ್ಟೆ ಕೊಡದಿರುವ ಆ ತಾಯಿ
ಕಡೆವರೆಗು ಜಗದಲ್ಲಿ ಕಟ್ಟುಬಂಜೆ ನೋಡಮ್ಮ ||೩||

ಪರದೇಶಿ ಮಕ್ಕಳು ಕರವೊಡ್ಡಿ ಬೇಡುವಾಗ
ಕರುಣೆಯ ಕೈಯಿಂದ ಕೊಡುವಳೇ ಮಹಾತಾಯಿ
ಸಿರಿಸಂಪತ್ತಿರಲೇನು ದಯಧರ್ಮವಿಲ್ಲದವಳೆ
ಬರಿಬಾಳ ಕನಸಿನ ಹಿರೆಬಂಜೆ ನೋಡಮ್ಮ ||೪||

ಮಕ್ಕಳು ಬೇಕೆಂದು! ನೂರಾರು ದೇವರಿಗೆ
ಸೊಕ್ಕಿಲೆ ಬೇಡಿದರೆ ಮಕ್ಕಳಾಗುವವೆ
ಅಕ್ಕರೆಯಿಂದಲ್ಲಿ ಪರಮಕ್ಕಳ್ಹಾಡಿಸಲು
ಮುಕ್ಕಣ್ಣ ಮಗನಾಗಿ ಜನಿಸುವವನು ನೋಡಮ್ಮ ||೫||

ಜಗದ ಮಕ್ಕಳೆಲ್ಲ ನನ್ನವೆಂದು ನಗುತ
ಪಾಲನಗೈವ ತಿಳದು ಭಾಗ್ಯದ ತಾಯಿಗೆ
ಜಗದಂಬ ಪಾರ್ವತಿ ಲಕ್ಷ್ಮೀ ಸರಸ್ವತಿಯವರು
ಜಗವೆಲ್ಲ ಮನ್ನಿಸಿ ಪೂಜ್ಯಗೈಯುವರು ||೬||

ಈ ತತ್ವಪದವನ್ನು ರಚಿಸಿದವರು ಬಸವರಾಜ ತಾಳಕೇರಿ.

ಈ ತತ್ವಪದದ ಒಳಾರ್ಥ ನಿಗೂಢವಾಗಿದೆ. ಬಂಜೆ ಎಂಬ ಶಬ್ದಕ್ಕೆ ಇಲ್ಲಿ ತತ್ವಪದಕಾರರು ಬೇರೆ ರೀತಿಯ ಅರ್ಥವನ್ನೇ ತಿಳಿಸಿದ್ದಾರೆ. ಆದರೆ ಈ ಸಮಾಜದಲ್ಲಿ ಯಾವುದೇ ಒಬ್ಬ ಮಹಿಳೆಗೆ ಸಂತಾನ ಭಾಗ್ಯ ಇಲ್ಲದೆ ಇದ್ದಾಗ ಸಾಮಾನ್ಯವಾಗಿ ಜನರು ಅವಳನ್ನು ಬಂಜೆ ಎಂದು ಕರೆಯಲು ಪ್ರಾರಂಭಿಸುತ್ತಾರೆ. ಮಕ್ಕಳನ್ನೆತ್ತ ತಾಯಂದಿರೆಲ್ಲರೂ ನಿಜವಾದ ತಾಯಂದಿರಲ್ಲ. ಅವರಲ್ಲಿ ತ್ಯಾಗ ಮನೋಭಾವನೆ ಇರಬೇಕು. ತನ್ನ ಮಕ್ಕಳಂತೆ ಇನ್ನೊಬ್ಬರ ಮಕ್ಕಳನ್ನು ಪ್ರೀತಿಸಬೇಕು. ಎತ್ತಿ ಮುದ್ದಿಸಿ, ಮಕ್ಕಳನ್ನಾಡಿಸುವಂತಹ ಉತ್ತಮ ಗುಣದವಳೇ ನಿಜವಾದ ತಾಯಿ. ಹೊಟ್ಟೆಯಲ್ಲಿ ಹುಟ್ಟಿಲ್ಲವೆಂದ ಮಾತ್ರಕ್ಕೆ ಅವಳನ್ನು ಬಂಜೆ ಎಂದು ಕರೆಯುವುದು ಸೂಕ್ತವಲ್ಲ. ನಿಜವಾದ ಬಂಜೆ ಎಂದರೆ ಕೆಟ್ಟ ಮತ್ಸರವನ್ನು ತುಂಬಿಕೊಂಡವಳೇ ಎಂದು ಈ ತತ್ವಪದಕಾರರು ಹೇಳಿದ್ದನ್ನು ಗಮನಿಸಬಹುದು. ನೆರೆಮನೆಯ ಬಡಮಕ್ಕಳು ಬೇಡಿ ಅಳುತ್ತಿರುವಾಗ ಹಿಡಿ ಅನ್ನ, ಗೇಣು ಬಟ್ಟೆ ಕೊಡದಿರುವ ಆ ತಾಯಿಯೇ ಕೊನೆಯವರೆಗೂ ಈ ಜಗದಲ್ಲಿ ಹುಟ್ಟು ಬಂಜೆ ಎನ್ನುತ್ತಾರೆ.

ಅನಾಥ ಮಕ್ಕಳು ಕೈಯೊಡ್ಡಿ ಬೇಡುವಾಗ ಕರುಣೆಯ ಕೈಯಿಂದ ಕೊಡುವವಳೇ ಮಹಾತಾಯಿ. ಎಷ್ಟೇ ಶ್ರೀಮಂತಿಕೆ ಇದ್ದರೂ ದಯೆ, ದಾಕ್ಷಿಣ್ಯವಿಲ್ಲದವಳ ಬಾಳು ಬರೀ ಕನಸಿನ ದೊಡ್ಡ ಬಂಜೆ ನೋಡಮ್ಮ. ಮಕ್ಕಳು ಬೇಕೆಂದು ನೂರಾರು ದೇವರಿಗೆ ಸೊಕ್ಕಿನಿಂದಲೇ ಬೇಡಿದರೆ ಮಕ್ಕಳಾಗುವವೇ? ಅಕ್ಕರೆಯಿಂದ ಪರರ ಮಕ್ಕಳನ್ನು ಪೋಷಿಸಿದರೆ ಶಿವನೇ ಮಗನಾಗಿ ಜನಿಸುವನು ನೋಡಮ್ಮಾ ಎಂದು ತತ್ವಪದಕಾರರು ಇಲ್ಲಿ ಸಮಾಜದಲ್ಲಿ ಶ್ರೀಮಂತಿಕೆಯ ಅಮಲಿನಿಂದ ಬೀಗುತ್ತಿರುವ ಹಾಗೂ ಇನ್ನೊಬ್ಬರಿಗೆ ಮಕ್ಕಳೇ ಆಗಿಲ್ಲವೆಂದು ನಿಂದಿಸುವವರನ್ನು ಕುರಿತು ಬಹಳ ಅರ್ಥಪೂರ್ಣವಾಗಿ ಜನರ ಮನ ಪರಿವರ್ತನೆ ಮಾಡಲು ಬಸವರಾಜ ತಾಳಿಕೇರಿಯವರು ರಚಿಸಿರುವ ಹಾಡನ್ನು ಮಾರೆಪ್ಪ ಚೆನ್ನದಾಸರು ಜನಸಮುದಾಯಕ್ಕೆ ಮನಮುಟ್ಟುವಂತೆ ಹಾಡಿದ್ದಾರೆ.

೫. ಹಾವು ತುಳುದೆನೆ

ಹಾವು ತುಳುದೆನೆ ಮಾನಿನಿ
ಹಾವು ತುಳುದೆನೆ ||ಪ||

ಹಾವು ತುಳಿದು ಹಾರಿನಿಂತೆ
ಜೀವ ತಳಮಳಗೊಂಡಿತು ಗೆಳತಿ
ದೇಹತ್ರಯಗಳ ಶೃತಿಯು ತಪ್ಪಿ
ದೇವ ನೀನೆ ಗತಿಯು ಎಂದು ॥೧॥

ಹರಿಯ ಹಾಸಿಗೆಯಾದ ಹಾವು
ಹರನ ಕೊರಳೋಳಿರುವ ಹಾವು
ಧರೆಯ ಹೊತ್ತು ಮೆರೆವ ಹಾವಿನ
ಶಿರವ ಮೆಟ್ಟಿ ಶಿವನ ದಯದಿ ॥೨॥

ಬೋದಾನಂದವಾಗಿ ಬರಲು
ಹಾದಿಯೊಳಗೆ ಮಲಗಿರಲು
ಪಾದದಿಂದ ಪೊಡವಿಗೊಪ್ಪಿ
ನಾದಗೊಳಿಸಿತು ನಿಜದಿ ನೋಡಿ ॥೩॥

ಕಾರಡಗಿ ಊರ ಹೊರಗ
ದಾರಿಕಟ್ಟಿ ತರಬಿದಂಥ
ಘೋರತನದಿ ಹುಡುಗ ಅದರ
ಕ್ವಾರಿಹಲ್ಲು ಮುರಿದು ತೊರೆದು ॥೪॥

ಸತ್ಯವಾದ ಶಿಶುವಿನಾಳ
ಉತ್ತಮವಾದ ಸೇವಕನಿಗೆ
ಕತ್ತಲೋಳು ಬಂದು ಕಾಲಿಗೆ
ಸುತ್ತಿಕೊಂಡಿತು ಸಣ್ಣ ನಾಗರ ॥೫॥

ಇದು ಶಿಶುನಾಳ ಶರೀಫರ ತತ್ವಪದವಾಗಿದೆ.

ಈ ತತ್ವಪದದಲ್ಲಿ ಶರೀಫರು ತಮ್ಮ ಸಾಧನಾನುಭವದ ವಿಚಾರವನ್ನು ಈ ರೀತಿ ಅಭಿವ್ಯಕ್ತಿಸಿದ್ದಾರೆ. ಇಲ್ಲಿ 'ಹಾವು' ಎಂಬ ರೂಪಕ ಸಾಧಕರ ಯೋಗ ಸಾಧನೆಯಲ್ಲಿ ಕುಂಡಲಿನಿ ಸರ್ಪವನ್ನು ಸೂಚಿಸುತ್ತದೆ. ಆಧ್ಯಾತ್ಮದಲ್ಲಿ ತೊಡಗಿದಂತಹ ಸಾಧಕ ತನ್ನ ಯೋಗ ಸಾಧನೆಯಲ್ಲಿ ಕ್ರಮವಾಗಿ ಮೇಲಕ್ಕೇರಿ ಹೋಗುವ ಕ್ರಿಯೆಯನ್ನು ಶರೀಫರು ಹೀಗೆ ಹೇಳುತ್ತಾರೆ. ತಮ್ಮ ಮಾನಿನಿಗೆ ಅಂದರೆ ಸತಿಗೆ ಅತೀ ಗುಪ್ತವಾಗಿ ರಹಸ್ಯ ವಿಷಯವನ್ನು ವಿವರಿಸುವಂತೆ ಕಂಡುಬರುತ್ತದೆ. ಕುಂಡಲಿನಿ

ಸರ್ಪವನ್ನು ತುಳಿದೆ, ತುಳಿದು ಹಾರಿನಿಂತು ಆಗ ಜೀವ ತಳಮಳಗೊಂಡಿದೆ ಗೆಳತಿ ಎಂದು ಹೇಳುತ್ತಾರೆ. ಆ ಸಂದರ್ಭದಲ್ಲಿ ಶರೀರ ತ್ರಯಗಳು ಶೃತಿಯು ತಪ್ಪಿ ದೇವರ ಧ್ಯಾನದಲ್ಲಿ ನೀನೇ ಗತಿ ಎಂದು ಏಕಚಿತ್ತನಾದೆ ಎಂದು ಹೇಳುತ್ತಾರೆ.

ಕುಂಡಲಿನಿ ಸರ್ಪಕ್ಕೆ ರೂಪಕವಾದ ಹಾವು ವಿಷ್ಣುವಿಗೆ ಶಯನಾಸನವಾಗಿ ಶಿವನ ಕೊರಳಿಗೆ ಆಭರಣವಾಗಿ, ಭೂಮಿಯನ್ನೇ ಹೊತ್ತ ಆದಿಶೇಷನಾಗಿತ್ತು. ಅಂತಹ ಹಾವನ್ನು ಮೆಚ್ಚಿ ಸಾಧನೆಯ ಗುರಿಯನ್ನು ತುಲಿಪಿದೆ. ಸಿದ್ಧಿಯನ್ನು ಪಡೆದ ಬೋಧಾನಂದವನ್ನು ಪಡೆದು ನಾದವನ್ನು ಕೇಳಿ ನಿಜಜ್ಞಾನವನ್ನು ತಿಳಿದೇನು ಎನ್ನುತ್ತಾರೆ. ಸ್ಥಿರವಾದ ಆಸನದಲ್ಲಿ ಕುಳಿತ ಯೋಗರೂಢನಾದ ಸಾಧಕ ಒಂದೊಂದೇ ಮೆಟ್ಟಿಲನ್ನು ಅನುಕ್ರಮವಾಗಿ ಏರಿ ಕುಂಡಲಿನಿ ಶಕ್ತಿಯನ್ನು ಜಾಗೃತಿ ಮೂಡಿಸಿಕೊಂಡು ಪಡೆದ ಅನುಭವವನ್ನು ತಮ್ಮ ಮಾನಿನಿಯ ಜೊತೆ ಹಂಚಿಕೊಂಡ ರೀತಿ ಈ ತತ್ವಪದವಾಗಿದೆ.

೬. ಸಿದ್ಧಲಿಂಗಸ್ವಾಮಿ ಧ್ಯಾನ

ಸಿದ್ಧಲಿಂಗಸ್ವಾಮಿ ಧ್ಯಾನ ಮಾಡಬೇಕವ್ವ
ಶುದ್ಧವಾಗಿ ಸಂಸಾರವು ಸಾಗುವದವ್ವಾ ||ಪ||

ಮನೆ ಕೆಲಸ ಮಾಡುವಾಗ ಬೇಸರ ಬಂದು ಕೂಡುವಾಗ
ಮನಸ್ಸಿನಲ್ಲಿ ಅವನ ಹೆಸರು ನೆನಿಯಬೇಕು ನೋಡವ್ವ
ತಿನ್ನುವಾಗ ಉಣ್ಣುವಾಗ ಮಲಗುವಾಗ ಏಳುವಾಗ
ಕಣ್ಣ ಮುಂದೆ ಅವನ ಮೂರ್ತಿ ನಿಲ್ಲಬೇಕು ನೋಡವ್ವ
ಎಷ್ಟೇ ಕಷ್ಟ ನಷ್ಟ ಬರಲಿ ಕಾಯುವನವ್ವಾ
ಕನಸಿನಲ್ಲಿ ಮನಸಿನಲ್ಲಿ ನಿಲ್ಲುವನವ್ವಾ ||೧||

ಕುಟ್ಟುವಾಗ ಬೀಸುವಾಗ ತೊಟ್ಟಿಲನ್ನು ತೂಗುವಾಗ
ನಿಷ್ಠೆಯಿಂದ ಅವನ ಹೆಸರು ನೆನೆಯಬೇಕು ನೋಡವ್ವ
ಪುಟ್ಟಮಕ್ಕಳಾಡುವಾಗ ಬಿಟ್ಟು ಹಾಲು ಕುಡಿಯುವಾಗ
ಶ್ರೇಷ್ಠಸ್ವಾಮಿ ನೀನೆ ಕಾಯೊ ಎಂದು ಕೈಯ ಮುಗಿಯವ್ವ
ಎಷ್ಟೆ ಕಷ್ಟ ನಷ್ಟ ಬರಲಿ ಕಾಯುವನವ್ವಾ
ಕನಸಿನಲ್ಲಿ ಮನಸಿನಲ್ಲಿ ನಿಲ್ಲುವನವ್ವಾ ||೨||

[illegible]

[illegible]

[illegible]

> [illegible]

ಬಡವರಾಗಿ ಬಾಳುತಿರಲು ಭಕ್ತಿಯನ್ನು ಮಾಡುತಿರಲು
ಒಡೆಯನಾಗಿ ಅವರ ಪೂಜೆ ಬೇಡಿ ಬರುವ ನೋಡವ್ವ
ಬಲ್ಲಿದರೆಷ್ಟು ಕೊಟ್ಟರಲ್ಲಿ ಭಕ್ತಿ ಇಲ್ಲದಿರಲು ಅಲ್ಲಿ
ನಿಲ್ಲಲಾರ ನಿಂತು ಏನೂ ಕೇಳಲಾರ ನೋಡವ್ವ
ಭಕ್ತಿಪ್ರಿಯನಾಗಿ ತಾನು ಮೆರೆಯುವನವ್ವಾ
ಭಕ್ತರಿಗೆ ಶಕ್ತಿ ಮುಕ್ತಿ ನೀಡುವನವ್ವಾ ॥೩॥

ಈ ತತ್ವಪದವನ್ನು ರಚಿಸಿದವರಾರು ಎಂಬುದು ತಿಳಿದುಬಂದಿಲ್ಲ.

ಈ ತತ್ವಪದದಲ್ಲಿ ಶ್ರೀ ಸಿದ್ಧಲಿಂಗ ಸ್ವಾಮಿಯನ್ನು ಧ್ಯಾನಿಸಿದರೆ ಮುಕ್ತಿ ದೊರೆಯುತ್ತದೆ ಎಂದು ತಿಳಿಸಿದ್ದಾರೆ. ನಾವು ಪ್ರತಿನಿತ್ಯ ಮಲುಗುವಾಗ, ಏಳುವಾಗ, ಉಣ್ಣುವಾಗ, ಸಿದ್ಧಲಿಂಗಸ್ವಾಮಿಯನ್ನು ಧ್ಯಾನಿಸಬೇಕು. ಕಣ್ಣ ಮುಂದೆ ಅವರ ಮೂರ್ತಿ ನಿಲ್ಲಬೇಕು. ಮನೆಕೆಲಸ ಮಾಡುವಾಗ ಬೇಸರ ತಂದುಕೊಂಡಾಗ ಎಷ್ಟೇ ಕಷ್ಟ-ನಷ್ಟಗಳೂ ಬಂದಾಗ ಸ್ವಾಮಿಯು ಕಾಯುತ್ತಾನೆಂದೂ ತಿಳಿಸುತ್ತಾರೆ. ಹೆಣ್ಣುಮಕ್ಕಳು ಮನೆಯಲ್ಲಿ ಕುಟ್ಟುವಾಗ, ಬೀಸುವಾಗ, ತೊಟ್ಟಿಲನ್ನು ತೂಗುವಾಗ ನಿಷ್ಠೆಯಿಂದ ಅವನ ಹೆಸರನ್ನು ನೆನೆಯಬೇಕು. ಪುಟ್ಟಮಕ್ಕಳು ಆಡುವಾಗ ಬಿಟ್ಟು ಹಾಲು ಕುಡಿಯುವಾಗ ಶ್ರೇಷ್ಠ ಸ್ವಾಮಿ ನೀನೇ ಎಂದು ಕೈಮುಗಿದರೆ ಎಷ್ಟೇ ಕಷ್ಟ ತಾಪತ್ರಯಗಳು ಬಂದರೂ ಸಿದ್ಧಲಿಂಗಸ್ವಾಮಿ ಕಾಪಾಡುತ್ತಾನೆ ಎಂದು ತಿಳಿಸಿದ್ದಾರೆ.

ಬಡವರಾಗಿ ಜೀವನ ಸಾಗಿಸುತ್ತಿದ್ದರೂ ಸಹ ಭಕ್ತಿಯಿಂದ ನಮಿಸುತ್ತಿದ್ದರೆ ದೇವರು ಪ್ರತ್ಯಕ್ಷನಾಗುತ್ತಾನೆ. ಶ್ರೀಮಂತರಲ್ಲಿ ಎಷ್ಟು ಹಣವಿದ್ದರೂ ಕೂಡಾ ಅವರಲ್ಲಿ ಭಯ ಭಕ್ತಿ ಇಲ್ಲದಿದ್ದರೆ ಅವರ ಬಳಿ ದೇವರು ಸುಳಿಯಲಾರ. ಭಕ್ತಿಪ್ರಿಯನಾಗಿ ನಡೆದರೆ ಭಕ್ತರಿಗೆ ಶಕ್ತಿ ಮತ್ತು ಮುಕ್ತಿಯನ್ನು ಕರುಣಿಸುವನು. ಈ ತತ್ವಪದವನ್ನು ಮಾರೆಪ್ಪ ಚೆನ್ನದಾಸರು ತುಂಬಾ ಭಯಭಕ್ತಿಯಿಂದ ಮಧುರವಾದ ಕಂಠದಿಂದ ಹಾಡುತ್ತಾರೆ. ಭಕ್ತರು ಮೂಕವಿಸ್ಮಿತರಾಗಿ ಆಲಿಸುತ್ತಾರೆ.

೭. ಗುಣವಂತಿ ಆಗಮ್ಮ

ಗುಣವಂತಿ ಆಗಮ್ಮ ಘನವಂತಿ ನೀನೆ ॥ಪ॥

ಕ್ಷಣಕಾಲವು ಹರಟೆಯಲಿ ಕಳಿಯಬೇಡ ಜಾಣೆ ॥ಅ.ಪ॥

ತವರಮನೆಯ ಕೀರ್ತಿಯನು ತರುವ ಭಾರ ನಿನ್ನದು
ಸವಿ ನುಡಿಯಲಿ ಜನಮನವನು ಗೆಲುವ ಭಾಗ್ಯ ನಿನ್ನದು

ಅವಿರತ ಕಡು ದುಃಖವಿರಲಿ ಶಾಂತಿಯನು ತಾಳುವದು
ಯುವತಿಯರಿಗೆ ಸುಧೆಯವಿದು ಸತ್ಯ
ಸಾಕ್ಷಿಯಾಗುವುದು ॥೧॥

ಗಂಡನೆ ಗುರುವೆಂದು ಸೇವೆಗೈಯುವದೆ ಮುಕ್ತಿಯದು
ಗಂಡನು ದೇವರು ಎಂದು ಪೂಜಿಸುವುದೆ ಪುಣ್ಯವದು
ಗಂಡನ ಮನೆ ವೈಕುಂಠ ಕೈಲಾಸವು ಸ್ವರ್ಗವದು
ಗಂಡನೆ ಗತಿ ಮತಿ ಮೋಕ್ಷಕ ಸ್ತ್ರೀಧರ್ಮವು
ಸಾರುವದು ॥೨॥

ಅತ್ತೆಮಾವ ಮೈದುನರು ನೆಗೆಯಣ್ಣೆಯರಾರಿರಲಿ
ಮತ್ತೆಲ್ಲ ಮನೆಯವರು ಕಾಟವನು ಕೊಡುತಿರಲಿ
ಅತ್ತು ಅತ್ತು ನೆರೆಯವರಿಗೆ ಗೊತ್ತುಗುರಿ ತಿಳಿಸದಿರು
ಮುತ್ತಿನಂಥ ಮನವಿರಲಿ ಮೆಚ್ಚುವ ಮಹಾದೇವರು ॥೩॥

ಮಕ್ಕಳಲ್ಲಿ ಮತ್ಸರವಳಿ ಮಮತೆಯಿರಲಿ ಎಲ್ಲರಲ್ಲಿ
ನಕ್ಕು ನಲಿದು ತಿರುಗುವ ಸತಿ ಬೀಳುವಳು ನರಕದಲಿ
ಅಕ್ಕರತೆಯ ಜೀವನವೆ ಸತ್ಕೀರ್ತಿಗಳಿಸುವದು
ಸಕ್ಕರೆ ಹಾಲು ಸವಿಯಂತೆ ಸಂಸಾರವು ಸಾಗುವುದು ॥೪॥

ಸೀತ ದಮಯಂತಿ ಅನುಸೂಯ ದ್ರೌಪತಿಯರು
ಖ್ಯಾತಿವಂತಿ ಮಂಡೋಧರಿ ತಾರಾ ಸಾವಿತ್ರಿಯರು
ಮಾತಾ ಮಹಾದೇವಿಯಕ್ಕ ನೀಲ ಮಲ್ಲಮ್ಮರು
ನೀತಿ ನಡೆ ನುಡಿಯು ನೋಡಿ ನಡೆದರೆ ಜಗ ಪಾವನ ॥೫॥

ಈ ತತ್ವಪದಗಳನ್ನು ತಾಳಕೇರಿ ಬಸವರಾಜರು ರಚಿಸಿದ್ದರೂ ಕೂಡಾ ಅವರು ತಮ್ಮ ಹೆಸರನ್ನು ಎಲ್ಲಿಯೂ ಹೇಳಿಕೊಂಡಿಲ್ಲ. ಹಾಗಾಗಿ ಇದರ ರಚನೆಕಾರರು ಅಜ್ಞಾತ ಕವಿಗಳೆಂದು ಹೇಳಬಹುದು.

ಹೆಣ್ಣುಮಕ್ಕಳು ಒಳ್ಳೆಯ ಗುಣವಂತರಾಗಿದ್ದರೆ ಅವಳು ಘನವಂತಳಾಗಲಿಕ್ಕೆ ಸಾಧ್ಯವಿದೆ. ಕ್ಷಣಕಾಲವೂ ಹರಟೆಯಲ್ಲಿ ಕಳೆಯದೇ ಒಳ್ಳೆಯ ನೀತಿ ರೀತಿಗಳಿಂದ ಸಮಾಜದಲ್ಲಿ ಬಾಳಿ ಬದುಕಲು ಕರೆಕೊಡುತ್ತಾರೆ.

ವಿಶೇಷವಾಗಿ ಇಲ್ಲಿ ತತ್ವಪದಕಾರರು ಮದುವೆಯಾದ ಹೆಣ್ಣುಮಕ್ಕಳು ಗಂಡನ ಮನೆಯಲ್ಲಿ ಯಾವ ರೀತಿ ಜೀವನವನ್ನು ಸಾಗಿಸಿಕೊಂಡು ಹೋಗಬೇಕು ಎನ್ನುವ ಹಿನ್ನೆಲೆಯಲ್ಲಿ ಪ್ರಸ್ತುತದಲ್ಲಿ ತಿಳಿಯಪಡಿಸಿದ್ದಾರೆ. ಮನೆಯ ಮಗಳಿಗೆ ಇಲ್ಲಿ ಮನೆ ಬಿಟ್ಟು ಗಂಡನ ಮನೆಗೆ ಕಳುಹಿಸುವಾಗ ಹೇಳಿ ಕಳುಹಿಸುವ ಕಿವಿಮಾತುಗಳಿವೆ. ತವರುಮನೆಯ ಕೀರ್ತಿಯನ್ನು ತರುವ ಭಾರ ನಿನ್ನದು. ಸವಿನುಡಿಯನ್ನಾಡಿ ಜನಮನವನ್ನು ಗೆಲ್ಲುವ ಭಾಗ್ಯ ನಿನ್ನದು. ಎಷ್ಟೇ ಕಷ್ಟಗಳು ಬಂದರೂ ಸಹ ಶಾಂತಿ, ತಾಳ್ಮೆ, ಸಹನೆಯಿಂದ ವರ್ತಿಸಿ ಎಲ್ಲರ ಪ್ರೀತಿಗೆ ಪಾತ್ರರಾಗುವುದು ನಿನ್ನ ಕರ್ತವ್ಯವಾಗಿದೆ ಎಂದು ಹೇಳುತ್ತಾರೆ.

ಗಂಡನೇ ಗುರು, ಗಂಡನೇ ದೇವರು ಎಂದು ಸೇವೆಗೈದು ಪೂಜಿಸುವುದೇ ಪುಣ್ಯವೆಂದು ಹಾಗೂ ಗಂಡನಮನೆಯೇ ವೈಕುಂಠ, ಕೈಲಾಸ, ಗಂಡನೇ ಗತಿ, ಮೋಕ್ಷಕ್ಕೆ ಸ್ತ್ರೀಧರ್ಮವು ಸಾರುತ್ತವೆ. ಅತ್ತೆಮಾವ, ಮೈದುನರ, ನೆಗೆಯಣಿ ಯಾರೇ ಮನೆಯವರು ಉಪಟಳವನ್ನು ಕೊಡುತಿರಲಿ ಅತ್ತು ಅತ್ತು ನೆರೆಯವರಿಗೆ ಗೊತ್ತು ಗುರಿ ತಿಳಿಸದಿರು ಮುತ್ತಿನಂಥ ಮನಸ್ಸಿದ್ದರೆ ಮೆಚ್ಚುವನು ಮಹಾದೇವ. ಮಕ್ಕಳಲ್ಲಿ ಮತ್ಸರವನ್ನು ಅಳಿದು ಮಮತೆಯಿಂದ ಎಲ್ಲರೊಂದಿಗೆ ನಕ್ಕು ನಲಿದು ತಿರುಗುವ ಸತಿ ಸ್ವರ್ಗವನ್ನು ಸೇರುತ್ತಾಳೆ. ಅಕ್ಕರತೆಯ ಜೀವನ ಸತ್ಕೀರ್ತಿಯನ್ನು ಗಳಿಸುವುದು ಆಗ ಸಂಸಾರ ಸಸಾರವಾಗಿ ಸಾಗುವುದು. ಸೀತಾದೇವಿ, ದಮಯಂತಿ, ಅನುಸೂಯ ಖ್ಯಾತಿವೆತ್ತ ಮಂಡೋದರಿ, ಸತಿ ಸಾವಿತ್ರಿ, ಮಾತೆಮಹಾದೇವಿಯಕ್ಕ ಇಂಥವರ ನಡೆನುಡಿಯನ್ನು ನೋಡಿ ನಾವು ನಡೆದರೆ ಜಗ ಪಾವನವಾಗುತ್ತದೆ ಎಂದಿದ್ದಾರೆ.

೮. ಚನ್ನಪ್ಪ ಚನ್ನಗೌಡ

ಚನ್ನಪ್ಪ ಚನ್ನಗೌಡ ಕುಂಬಾರ ಮಾಡಿದ ಕೊಡನವ್ವ
ಚಂದಕೆ ತಂದೀನೆ ತಂಗಿ ನೀರಿಗೆ ಬಂದೀನೆ ॥ಪ॥

ಆರು ಮೂರು ಒಂಭತ್ತು ಒಂಭತ್ತು ದ್ವಾರದ ಕೊಡನವ್ವ
ಚಂದಕೆ ತಂದೀನೆ ತಂಗಿ ನೀರಿಗೆ ಬಂದೀನೆ ॥೧॥

ಬಾಳೀಯ ವನದಾಗ ನಾ ಹ್ಯಾಂಗೆ ಬಾಗಿ ಬರಲವ್ವ
ಚಂದಕೆ ತಂದೀನೆ ತಂಗಿ ನೀರಿಗೆ ಬಂದೀನೆ ॥೨॥

ನಿಂಬೀಯ ವನದಾಗ ನಾ ಹ್ಯಾಂಗೆ ನಂಬಿ ಬರಲವ್ವ
ಚಂದಕೆ ತಂದೀನೆ ತಂಗಿ ನೀರಿಗೆ ಬಂದೀನೆ ॥೩॥

ಅಡಿಕಿಯ ವನದಾಗ ನಾ ಹ್ಯಾಂಗೆ ಹುಡುಕ್ಯಾಡಿ ಬರಲವ್ವ

[illegible]

[illegible]

[illegible]

[illegible]

ಚಂದಕಿ ತಂದೀನೆ ತಂಗಿ ನೀರಿಗೆ ಬಂದೀನೆ ॥೪॥

ಅಣ್ಣಿಗೇರಿ ಕೆರಿಯಾಗ ಕೆರಿಹೊಕ್ಕು ನೀರು ತುಂಬುವಾಗ
ಕಲ್ಲಿಗೆ ತಾಕಿತ್ತಾ ತಂಗಿ ಬಿಂದಿಗಿ ಒಡದೀತಾ ॥೫॥

ದ್ಯಾಮಮ್ನ ಕಟ್ಟೆ ಮೇಲೆ ಯಾರು ಕುಂತಾರ ನೋಡವ್ವ
ಗಡ್ಡಾ ಬಿಟ್ಟಾನೆ ತಾತಾ ಗಾಂಜಾ ಸೇದ್ತಾನೆ ॥೬॥

ಅವ್ವಾ ಇವನ್ಯಾರೆ ಮಂಚದ ಮೇಲೆ ಮಲಿಗ್ಯಾನೆ
ಗೊತ್ತಿಲ್ಲೇನವ್ವಾ ಶಿಶುನಾಳ ಶರೀಫ ಸಾಹೇಬರು ॥೭॥

ಇದು ಕೂಡ ಶಿಶುನಾಳ ಶರೀಫರ ತತ್ವಪದವಾಗಿದೆ. ಇದು ಜನಪ್ರಿಯ ಜನಪದ ಗೀತೆಯಾಗಿಯೂ ಬಳಕೆಯಲ್ಲಿದೆ. ಇದನ್ನು ಮೇಲೆ ಗಮನಿಸಿದಾಗ ದೇಶೀಯತೆಯನ್ನು ಬಿಂಬಿಸುವ ದಿನಬಳಕೆಯ ಒಂದು ವಸ್ತುವನ್ನು ರೂಪಕವಾಗಿ ಬಳಸಿಕೊಂಡು ತಾತ್ವಿಕ ಚಿಂತನೆಯನ್ನು ಒಳಗೊಂಡ ತತ್ವಪದವಾಗಿದೆ. ಇಲ್ಲಿ ರೂಪಕವಾಗಿ ಬಳಕೆಯಾದ 'ಕೊಡ' ಯಾವುದೆಂದರೆ ಈ ಮಾನವ ಶರೀರ. ಈ ಶರೀರದಲ್ಲಿ "ಆರು ಮೂರು ಒಂಬತ್ತು, ಒಂಬತ್ತು ದ್ವಾರದ ಕೊಡನವ್ವ ನವದ್ವಾರಗಳು ಒಂಬತ್ತು ಇದನ್ನು ಕೊಡಕ್ಕೆ ಹೋಲಿಸಿ ಈ ಕೊಡವನ್ನು ಪ್ರಪಂಚವೆಂಬ ಭಾವಿ ಅಥವಾ ಹೊಳೆ ಅಥವಾ ನದಿಗೆ ನೀರು ತುಂಬಲು ತಂದಂತೆ ಸೂಚಿಸುತ್ತಾನೆ. ಜೀವನವೆಂಬುದು ಸಂಸಾರದ ನದಿಯನ್ನು ತಲುಪಿ ಕೊಡದಲ್ಲಿ ನೀರು ತುಂಬಿ ತರಲು ಹೋಗುವಾಗ ಬಾಳಿಯ ವನ, ಲಿಂಬಿಯವನ, ಅಡಿಕಿಯವನ ಎದುರಾಗುತ್ತವೆ. ಅವುಗಳನ್ನು ದಾಟಿ ಅಣ್ಣಿಗೇರಿ ಕೆರಿಯಾಗ ಕೆರಿಹೊಕ್ಕು ನೀರು ತುಂಬುವಾಗ ಕಲ್ಲ ತಾಕಿತ್ತಾ ತಂಗಿ ಬಿಂದಿಗಿ ಒಡಿದಿತ್ತಾ" ಎನ್ನುತ್ತಾನೆ. ಅಂದರೆ ಪ್ರಪಂಚವೆಂಬ ಸಾಗರದಲ್ಲಿ ಈಜಿ ದಾಟಿ ಪಾರಮಾರ್ಥದ ಲೋಕದಲ್ಲಿ ವಿಹರಿಸುವ ಅನುಭವವನ್ನು ಇಲ್ಲಿ ಚಿತ್ರಿಸುತ್ತಾನೆ.

ಈ ತತ್ವಪದದ ಕೊನೆಯಲ್ಲಿ ಶರೀಫ್ ಸಾಹೇಬರು ತಮ್ಮನ್ನು ಪರಿಚಯಿಸಿಕೊಡುತ್ತಾರೆ. ಅದು ಹೇಗೆಂದರೆ "ದ್ಯಾಮವ್ವನ ಕಟ್ಟೆ ಮೇಲೆ ಯಾರ ಕುಂತಾರ ನೋಡವ್ವ, ಗಡ್ಡ ಬಿಟ್ಟಾನೆ ತಾತ, ಗಾಂಜಾ ಸೇದ್ತಾನೆ, ಅವ್ವ ಇವನ್ಯಾರೆ ಮಂಚದ ಮೇಲೆ ಮಲಗ್ಯಾನೆ ಗೊತ್ತಿಲೇನವ್ವ ಶಿಶುನಾಳ ಶರೀಫ್ ಸಾಹೇಬರು" ಎನ್ನುತ್ತಾರೆ.

ಒಟ್ಟಾರೆ ಓರ್ವ ಮಹಿಳೆ ನೀರಿಗೆ ಹೋಗುವಾಗಿನ ದೃಶ್ಯವನ್ನು ನೋಡಿ, ಅವಳು ಹೊತ್ತ ಕೊಡವನ್ನೇ ರೂಪಕವಾಗಿ ಬಳಸಿಕೊಂಡು ಶರೀರ ಅಶಾಶ್ವತವಾದುದ್ದು; ಸ್ಥಿರವಾದುದಲ್ಲ. ಇದನ್ನು ಮೀರಿ ಅಲೌಕಿಕ ಅನುಭವವನ್ನು ಪಡೆದು ಮುಕ್ತರಾಗಬೇಕು ಎನ್ನುವ ಆಶಯ ಈ ತತ್ವಪದದಲ್ಲಿ ಪ್ರತಿಬಿಂಬಿತವಾಗಿದೆ.

[illegible]

೯. ಈಶಶಕ್ತಿ

ಈಶಶಕ್ತಿ ತಾ ತಾಯಿ ಖರೆ
ಮೊದಲಿಗೆ ಮಹಾದೇವ ಮಗನು ಖರೆ
ತಾಯಿ ಮಗನು ಕೂಡಿ ಮದುವೆ ಮಾಡಿಕೊಂಡು
ಮರ್ತ್ಯಲೋಕ ಸಲವಿದ್ದು ಖರೆ ॥ಪ॥

ಶಕ್ತಿ ಹೊಟ್ಟಿಲಿ ಶಿವ ಹುಟ್ಟಿದ್ದು ಖರೆ
ವಿಷ್ಣುವಿನ ಮಗ ತಾ ಬ್ರಹ್ಮ ಖರೆ
ಮೂರು ಮೂರ್ತಿಗಳು ತತ್ತಿಯೊಳಗುಟ್ಟಿ
ಉತ್ಪನ್ನಾಗಿ ಬೆಳದಿದ್ದು ಖರೆ ॥೧॥

ದಕ್ಷಬ್ರಹ್ಮ ನೋಡು ಮಾವ ಖರೆ
ತುಸು ಮಾತಿಗಾಗಿ ಮನಸು ಕೊಟ್ಟು ತಾ
ದಕ್ಷಬ್ರಹ್ಮನು ಹೋಮ ಇಟ್ಟಿದ್ದು ಖರೆ ॥೨॥

ಸುದ್ದಿ ಕೇಳಿ ಪಾರ್ವತಿ ಬಂದಿದ್ದು ಖರೆ
ಬ್ಯಾಡಂತ ತಂದೆಯು ಹೇಳಿದ್ದು ಖರೆ
ಗಂಡ ಸತ್ತಮ್ಯಾಲೆ ರಂಡಿಯಾಗುವೆನೆಂದು
ಕೆಂಡದೊಳಗೆ ಹಾರಿದ್ದು ಖರೆ ॥೩॥

ಸಿಟ್ಟಿಗೆದ್ದು ಶಿವ ತಾ ಬಂದಿದ್ದು ಖರೆ
ನೇತ್ರದಲ್ಲಿ ವೀರಭದ್ರ ಹುಟ್ಟಿದ್ದು ಖರೆ
ವೀರಭದ್ರನವತಾರ ತಾಳಿ ತಾ
ದಕ್ಷಬ್ರಹ್ಮನ ಹೊಡದಿದ್ದು ಖರೆ ॥೪॥

ಚಂದ್ರಾಮ ಒಳ್ಳೇವ ಚಲುವ ಖರೆ
ಗುರುವಿನ ಹೆಂಡತಿನ ಕೇಳಿದ್ದು ಖರೆ
ಗುರುವಿನ ಶಾಪ ಚಂದ್ರಾಮಗ್ಹತ್ತಿ
ಕಪ್ಪುಹಿಡಿದು ಕುಳಿತಿದ್ದು ಖರೆ ॥೫॥

ಸರಸ್ವತಿ ಮೂಗು ಕೊಯ್ದಿದ್ದು ಖರೆ
ಸೂರ್ಯನ ಹಲ್ಲು ಮುರ್ದಿದ್ದು ಖರೆ

ನೋಡಿ ಗಣಪತಿ ಓಡಿಹೋಗುವಾಗ
ಬಿದ್ದು ಹೊಟ್ಟೆ ಒಡದಿದ್ದು ಖರೆ ॥೬॥
ಗದಗಿನ ಬೆಟಗೇರಿ ಊರು ಖರೆ
ಶೇಕಮಹಮದ ಹುಸೇನ್‌ಸಾಹೇಬ
ಪದಮಾಡಿ ಹಾಡಿದ್ದು ಖರೆ ॥೭॥

ಈ ತತ್ವಪದ ಬೆಟಗೇರಿಯ ಶೇಖ್‌ಮಹ್ಮದ್‌ಹುಸೇನ್ ಸಾಹೇಬರದ್ದಾಗಿದೆ.

ಈ ತತ್ವಪದವು ಶಿವ ಮತ್ತು ಶಕ್ತಿ ಈರ್ವರನ್ನು ಕುರಿತಾದ ವಿಷಯವನ್ನೊಳಗೊಂಡಿದೆ. ಇದಕ್ಕೆ ಈಶಶಕ್ತಿ ಎಂದು ಶೀರ್ಷಿಕೆ ನೀಡಿದ್ದಾರೆ. ಅಂದರೆ ಶಿವಶಕ್ತಿಯರ ಪುರಾಣದ ಕಥೆಯನ್ನು ಇದು ಸೂಚಿಸುತ್ತದೆ. ತತ್ವಪದಕಾರರೇ ಹೇಳುವಂತೆ ಶಕ್ತಿ ಮೊದಲಿಗೆ ತಾಯಿಯಾಗಿರುತ್ತಾಳೆ. ಅವಳ ಇಚ್ಚಾಶಕ್ತಿಯಂತೆ ತ್ರಿಮೂರ್ತಿಗಳ ಜನನವಾಗುತ್ತದೆ. ಮೊದಲಿಗೆ ಮಹಾದೇವನ ಮಗನಾಗಿರುವುದು ನಿಜವಾಗಿರುತ್ತದೆ. ತಾಯಿ ಮಗನು ಕೂಡಿ ಮದುವೆ ಮಾಡಿಕೊಂಡು ಮರ್ತ್ಯಲೋಕವನ್ನು ಸಲುಹಿದ್ದು ನಿಜವೆನ್ನುತ್ತಾರೆ.

ಆದಿಶಕ್ತಿ ಹೊಟ್ಟೆಯಲ್ಲಿ ಶಿವ ಹುಟ್ಟಿದ್ದು ನಿಜ. ವಿಷ್ಣುವಿನ ಹೊಟ್ಟೆಯಲ್ಲಿ ಬ್ರಹ್ಮ ಹುಟ್ಟಿದ್ದು ನಿಜ. ಈ ತ್ರಿಮೂರ್ತಿಗಳು ಆದಿಶಕ್ತಿ ಎಂಬ ತತ್ತಿಯೊಳಗೆ ಹುಟ್ಟಿ ಉತ್ಪನ್ನವಾಗಿ ಬೆಳೆದಿದ್ದು ಖರೆ ಎಂದು ಹೇಳುತ್ತಾರೆ. ಶಿವನಿಗೆ ದಕ್ಷಬ್ರಹ್ಮನು ಮಾವನಾಗಿರುತ್ತಾನೆ. ತುಸು ಮಾತಿಗಾಗಿ ಮನಸ್ಸು ಕೊಟ್ಟು ದಕ್ಷ ಬ್ರಹ್ಮನು ಹೋಮವನ್ನು ಇಟ್ಟಿರುತ್ತಾನೆ. ಸುದ್ದಿ ಕೇಳಿದ ಪಾರ್ವತಿ ಯಜ್ಞಕ್ಕೆ ಹೋಗಲು ಶಿವನಲ್ಲಿ ಪ್ರಾರ್ಥಿಸುತ್ತಾಳೆ. ಆದರೆ ದಕ್ಷಬ್ರಹ್ಮನು ಆಹ್ವಾನಿಸಿರುವುದಿಲ್ಲ. ಆದರೂ ಶಿವಪಾರ್ವತಿಯರು ಯಜ್ಞಕ್ಕೆ ಹೋಗಿ ಅವಮಾನಿತರಾಗುತ್ತಾರೆ. ಆ ಯಜ್ಞದಲ್ಲಿ ಗಂಡ ಸಾಯುತ್ತಾನೆ. ಗಂಡ ಸತ್ತ ಮೇಲೆ ರಂಡೆಯಾಗುವೆನೆಂದು ಕೆಂಡದೊಳಗೆ ಹಾರಿ ಆಹುತಿಯಾಗುತ್ತಾಳೆ ದಾಕ್ಷಾಯಿಣಿ. (ದಕ್ಷಬ್ರಹ್ಮನ ಮಗಳು ದ್ರಾಕ್ಷಾಯಿಣಿ) ಸಿಟ್ಟಿಗೆದ್ದ ಶಿವನು ತಾ ಬಂದು ಉಗ್ರರೂಪ ತಾಳಿ ವೀರಭದ್ರನಾಗಿ ಅವತರಿಸಿ ದಕ್ಷಬ್ರಹ್ಮನನ್ನು ಸಂಹಾರ ಮಾಡುತ್ತಾನೆ.

ಚಂದ್ರಾಮ ಒಳ್ಳೆಯ ಚೆಲುವನಾಗಿರುತ್ತಾನೆ. ಷೋಡಶ ಕಳೆಯಿಂದ ಸೌಂದರ್ಯ ಯುತನಾಗಿರುತ್ತಾನೆ. ಮೋಹಪಾಶನಾಗಿ ಗುರುವಿನ ಹೆಂಡತಿಯನ್ನೇ ಕೇಳುತ್ತಾನೆ. ಕಾರಣ ಗುರುವಿನ ಶಾಪಕ್ಕೆ ಒಳಗಾಗಿ ಕಪ್ಪು ಕಲೆಯನ್ನು ಪಡೆಯುತ್ತಾನೆ. ಸರಸ್ವತಿಯ ಮೂಗು ಕೊಯ್ಯುತ್ತಾರೆ. ಸೂರ್ಯನ ಹಲ್ಲು ಮುರಿಯುತ್ತದೆ. ಇದನ್ನು ಕಂಡ ಗಣಪತಿ ಓಡಿಹೋಗುವಾಗ ಬಿದ್ದು ಹೊಟ್ಟೆ ಒಡೆಯುತ್ತದೆ ಎಂದು ಪುರಾಣಕಥೆ ಹೇಳುತ್ತದೆ. ಇಂತಹ ಕಥೆಯನ್ನು ಶೇಖ್ ಮಹ್ಮದ್ ಹುಸೇನ್‌ಸಾಹೇಬರು ಪದ ಮಾಡಿ ಹಾಡಿರುತ್ತಾರೆ.

೧೦. ತೂಗುತಾದ ನೋಡು ಜೋಕಾಲಿ

ತೂಗುತಾದ ನೋಡು ಜೋಕಾಲಿ
ಸದ್ಗುರುವಿನ ದಯದಿಂದ ॥ಪ॥

ತೂಗುತಾದ ನೋಡು ಜೋಕಾಲಿ
ನಾದಾಬ್ರಹ್ಮಾನಂದದಲ್ಲಿ
ರಂಗಮಂಟಪ ಮಧ್ಯದಲ್ಲಿ
ಕಂಗಳಮಹಾಲಿಂಗನಲ್ಲಿ ॥೧॥

ಆರು ಚಕ್ರಕ್ಕೆ ಕಟ್ಟಿ ಜೋಕಾಲಿ
ಏರಿ ನೀನು ತೆಗಿಯೋ ಕೀಲಿ
ಮೀರಿದ ಹುಲ್ಮನಿ ಕಾಣುವಲ್ಲಿ ॥೨॥

ಜೋಕಾಲಿ ಎಂಬುವ ಜೋಲಿಯನಿಡಿದು
ನವದ್ವಾರ ಎಂಬ ಸೂತ್ರವ ಬಿಗಿದು
ಚಿತ್ತ ಎಂಬುವ ಕೀಲಿಯವ ಬಿಗಿದು
ಭಕ್ತಿ ಎಂಬುವ ಮಿಣಿಯ ವ ಹಿಡಿದು ॥೩॥

ಎಲ್ಲ ಜೋಕಾಲಿ ತನ್ನೊಳಗಲ್ಲಿ
ಕಾಷ ಲಕ್ಷ ಈಶನಲ್ಲಿ
ಹಸನು ಮಾಡಿಕೊ ಮನಸೀನಲ್ಲಿ
ಗುರುಸಿದ್ಧ ಮಹಾಲಿಂಗಾನಲ್ಲಿ ॥೪॥

ಇದು ಸರ್ಪಭೂಷಣ ಶಿವಯೋಗಿಯವರ ತತ್ವಪದವಾಗಿದೆ. ಈ ಹಾಡಿನಲ್ಲಿ ಜೋಕಾಲಿಯನ್ನು ಸಂಕೇತಿಸಿಕೊಂಡು ಅಲೌಕಿಕ ಅನುಭೂತಿಯನ್ನು ಸರ್ಪಭೂಷಣ ಶಿವಯೋಗಿಗಳು ಸೂಚಿಸುತ್ತಾರೆ. ಆಧ್ಯಾತ್ಮಿಕ ಅನುಭವದ ಆನಂದವು ಸದ್ಗುರುವಿನ ದಯೆಯಿಂದ ತೂಗುತಾದ ನೋಡು ಜೋಕಾಲಿ ಎನ್ನುತ್ತಾರೆ. ನಾದ ಬ್ರಹ್ಮಾನಂದದಲ್ಲಿ ರಂಗಮಂಟಪ ಮಧ್ಯದಲ್ಲಿ ಕಂಗಳ ಮಹಾಲಿಂಗನಲ್ಲಿ ಸಚ್ಚಿದಾನಂದ ಸ್ವರೂಪವನ್ನು ಕಂಡು ಶಿವಯೋಗಿಗಳು ತೂಗುತಾದ ನೋಡು ಜೋಕಾಲಿ ಎಂದು ಹಾಡುತ್ತಾರೆ.

ಆರು ಚಕ್ರಕ್ಕೆ ಕಟ್ಟಿ ಜೋಕಾಲಿ ಏರಿ ನೀನು ತೆಗೆಯೋ ಕೀಲಿ ಇಲ್ಲಿ ಸರ್ಪಭೂಷಣರು ಆರು ಚಕ್ರಕ್ಕೆ ಕಟ್ಟಿ ಎಂದರೆ ಅರಿಷಡ್ ವರ್ಗಗಳನ್ನು ತೊರೆದು ಅಥವಾ ಅವನ್ನು ಕಟ್ಟಿ

ಮೂಲೆಗೆಸೆದು ಏರಿ ನೀನು ತೆಗೆಯೋ ಕೀಲಿ ಭಗವಂತನಲ್ಲಿ ಜ್ಞಾನದ ದಿಗಂತಕ್ಕೆ ಏರಿ ಅಲ್ಲಿ ಸುಜ್ಞಾನದ ಬಾಳನ್ನು ಕಂಡಕೋ ಎಂಬುದಾಗಿ ತಿಳಿಸಿದ್ದಾರೆ.

ಈ ಅಸ್ಥಿರವಾದ ಜೀವನದಲ್ಲಿ ನವದ್ವಾರ ಎಂಬ ಸೂತ್ರವ ಬಿಗಿದು ಅಂದರೆ ಮಾನವನಿಗೆ ಇರುವ ಒಂಬತ್ತು ದ್ವಾರಗಳನ್ನು ತನ್ನ ಅಧೀನದಲ್ಲಿಟ್ಟುಕೊಂಡು ಮನಸ್ಸೆಂಬ ಮರ್ಕಟವನ್ನು ಅತ್ತಿತ್ತ ಸಂಚರಿಸಲು ಬಿಡದೇ ಅಥವಾ ಚಂಚಲವಾಗದಂತೆ ಏಕಾಗ್ರತೆಯ ಸ್ಥಿತಿಗೆ ತಂದುಕೊಂಡು ಭಕ್ತಿಯೆಂಬ ಪಾಶವ (ಹಗ್ಗವ) ಬಿಗಿದು ಭಗವಂತನಲ್ಲಿಗೆ ನಾವು ಧಾವಿಸಬೇಕು ಅಂದಾಗ ಮಾತ್ರ ಮೋಕ್ಷ ದೊರೆಯುತ್ತದೆ.

ಇಂತಹ ಭಕ್ತಿಯ ಜೋಕಾಲಿ ಜ್ಞಾನದ ತಕ್ಕಡಿ ನಮ್ಮಲ್ಲಿ ತೂಗಲಿ. ಅದು ನಿನ್ನನ್ನು ಈಶನನ್ನಾಗಿ ಮಾಡಿ ಒಬ್ಬ ಸಾಧಕನನ್ನಾಗಿ ಅಂದರೆ ಈಶನಲ್ಲಿ ಸುಗಮ (ಒಳಿತು) ಮಾಡಿಕೋ ಮನಸ್ಸಿನಲ್ಲಿ ಗುರುಸಿದ್ಧ ಮಹಾಲಿಂಗನಲ್ಲಿ ಅಂತಿಮವಾಗಿ ನಿನ್ನನ್ನು ನೀನು ಲೀನ ಮಾಡಿಕೋ ಎಂಬುದಾಗಿ ಪ್ರಸ್ತುತ ಪದದಲ್ಲಿ ತಿಳಿಸಿದ್ದಾರೆ.

೧೧. ಎಷ್ಟು ತೊಳೆಯಲಮ್ಮ

ಎಷ್ಟು ತೊಳಿಯಲಮ್ಮ ಈ ದೇಹದ
ಮೈಲಿಗೋಗಾದಮ್ಮ ತಂಗಿ ॥ಪ॥

ಹೀನ ಮನುಜರ ಸಂಗ ಮಾಡಿದರೆ
ಜ್ಞಾನ ಬಾರದಮ್ಮ ತಂಗಿ ॥೧॥

ಶೀಲವಂತರಮ್ಮ ಪಾತಾಳ
ಸೆರಗು ಪಿಡಿದಳಮ್ಮ ತಂಗಿ
ಕೆಮ್ಮಿ ಕ್ಯಾಕರಿಸಿ ದೇಹವು ತೊಳೆದರೆ
ಹಸನು ಆಗದಮ್ಮ ದೇಹ ॥೨॥

ಹ್ಯಾಗೆ ಮಾಡಲಮ್ಮ ಕೊಂಚ
ಭೂತ ದೇಹವಮ್ಮ ತಂಗಿ
ಅನ್ನವು ಉದಕವು ಬಹಳ ಆದರೆ
ಹಾಳಾಗಿ ಹೋಗ್ವಾದಮ್ಮ ದೇಹ ॥೩॥

ಪೊಡಿವಿಯೊಳಧಿಕಮ್ಮ ಕಡಕೊಳು
ಸಿದ್ಧನ ಮಗಳಮ್ಮ ತಂಗಿ

ಪರಿಪರಿ ಬೋಧಿಸಿ ಗುರು ಮಡಿವಾಳನ
ಪಾದದಲ್ಲಿ ಮನಸಿರಬೇಕಮ್ಮ ನೀ ॥೪॥

ಇದು ಕಡಕೋಳ ಮಡಿವಾಳೇಶ್ವರವರ ಸ್ವರವಚನವಾಗಿದೆ. ಮನುಷ್ಯನ ದೇಹವೆಂಬುದನ್ನು ಎಷ್ಟು ತಿಕ್ಕಿ ತೊಳೆದರೂ ಮೈಲಿಗೆ ಹೋಗಲಾರದು. ಪರಿಶುದ್ಧವಾದ ಮನಸ್ಸಿನಿಂದ ಶುದ್ಧವಾಗಿಟ್ಟುಕೊಳ್ಳಬೇಕು. ವಿಶೇಷವಾಗಿ ಮಹಿಳೆಯರನ್ನು ಕುರಿತು ಪ್ರಸ್ತುತ ತತ್ವಪದವು ವಿವರಿಸುತ್ತದೆ. ಕೀಳು ಮನೋಭಾವದ ಮನುಷ್ಯರ ಸಂಗವನ್ನು ಮಾಡಿದರೆ ಜ್ಞಾನ ಬಾರದಮ್ಮ ಒಂದು ವೇಳೆ ಅವರ ಜೊತೆ ಬೆರೆತರೆ ಅಜ್ಞಾನ ಮತ್ತು ಅಂದಕಾರದಲ್ಲಿ ಮುಳಗಬೇಕಾಗುತ್ತದೆ. ಸಚ್ಚಾರಿತ್ರ್ಯದಿಂದ ಜೀವನ ಸಾಗಿಸಿದರೆ ಏಳು ಲೋಕದಲ್ಲಿ ಒಂದಾದ ಅಧೋಲೋಕ ಕೂಡಾ ಕೈಹಿಡಿದು ಮುನ್ನಡೆಸುತ್ತದೆ. ಕೇವಲ ನಾವು ಬಾಹ್ಯ ಸೌಂದರ್ಯಕ್ಕೆ ಹೆಚ್ಚು ಒತ್ತು ಕೊಡದೇ ಆಂತರಿಕ ಸೌಂದರ್ಯಕ್ಕೆ ಮಹತ್ವವನ್ನು ಕೊಡಬೇಕಾಗುತ್ತದೆ. ಕೆಮ್ಮಿ, ಕ್ಯಾಕರಿಸಿ ದೇಹ ತೊಳೆದರೆ ದೇಹ ಹಸನಾಗದು. ಒಳ್ಳೆಯ ಪರಿಶುದ್ಧವಾದ ಮುಕ್ತ ಮನಸ್ಸಿನಿಂದ ಚಿಂತನ ಮಂಥನ ಮಾಡಬೇಕು ಅಂದಾಗ ಮಾತ್ರ ಮನುಷ್ಯನ ಜೀವನ ಸಾರ್ಥಕವಾಗುತ್ತದೆ. ಪಂಚಭೂತಗಳಿಂದ ಕೂಡಿದ ಈ ದೇಹ- ಭೂಮಿ, ಆಕಾಶ, ಅಗ್ನಿ, ಜಲ, ವಾಯು ಎಂಬ ಐದು ಮೂಲ ವಸ್ತುಗಳಿಂದಾದ ಈ ದೇಹಕ್ಕೆ ಅನ್ನ, ನೀರು ಅತಿಯಾದರೆ ಹಾಳಾಗಿ ಹೋಗುತ್ತದೆ. ಅಂದರೆ ಇಲ್ಲಿ ಯಾವುದೂ ಅತಿಯಾಗಬಾರದು ಎನ್ನುವ ಮಾತಿನ ಹಿನ್ನೆಲೆಯಲ್ಲಿ ತಿಳಿಸಿದ್ದಾರೆ.

ಕಡಕೋಳ ಸಿದ್ಧನ ಮಗಳಾಗಿ ಜನಸಿದ ಬಳಿಕ ಗುರು ಮಡಿವಾಳನ ಪಾದದಲ್ಲಿ ಮನಸಿಟ್ಟು ಪೂಜಿಸಬೇಕು ಅಂದಾಗ ಮಾತ್ರ ನಮ್ಮ ಮನದ ಮೈಲಿಗೆ ಮಾಯವಾಗುತ್ತದೆ. ನಿಶ್ಕಲ್ಮಶವಾದ ಸಮಚಿತ್ತದಿಂದ ಕೂಡಿದ ಮನಸ್ಸು ಮನುಷ್ಯನಲ್ಲಿ ಪ್ರೇರೇಪಿತಗೊಳ್ಳುತ್ತದೆ.

೧೨. ನಾನು ಇಲ್ಲ ನೀನು ಇಲ್ಲ

ನಾನು ಇಲ್ಲ ನೀನು ಇಲ್ಲ
ಕಾಣುವ ಜಗವು ಮೊದಲೇ ಇಲ್ಲ ॥ಪಲ್ಲವಿ॥

ನೀನೇ ಯೋಗಿ ನಾನೇ ಸಾಧು
ಇಬ್ಬರ ಒಳಗ ನಾನು ಮೊದಲು ॥೧॥

ನೀನೇ ಹೊಲ ನಾನೇ ಬೇಲಿ
ಹೊಲದ ಒಳಗ ಪೀಕು ಇಲ್ಲ ॥೨॥

ನೀನೇ ಗಂಡು ನಾನೇ ಹೆಣ್ಣು
ಗಂಡು ಹೆಣ್ಣು ಭೇದವಿಲ್ಲ ॥೩॥

ತಂದೆಯು ಇಲ್ಲ ತಾಯಿಯು ಇಲ್ಲ
ಬಂಧು ಬಳಗ ಮೊದಲೇ ಇಲ್ಲ ॥೪॥
ವರದ ಶ್ರೀಪುರಂದರ ವಿಠ್ಠಲರಾಯನ
ಭಜಿಸುವರಿಲ್ಲ ಬಾಳುವರಿಲ್ಲ ॥೫॥

ಇದು ದಾಸ ಶ್ರೇಷ್ಠ ಪುರಂದರದಾಸರ ತತ್ವಪದವಾಗಿದೆ.

ಈ ತತ್ವಪದದಲ್ಲಿ ದ್ವೈತ ಅದ್ವೈತಗಳ ಪದವನ್ನು ಬಿಂಬಿಸುತ್ತಾರೆ. ಇಲ್ಲಿ ನಾನೂ ಇಲ್ಲ. ನೀನೂ ಇಲ್ಲ ಎಂದರೆ ಕಾಣುವ ಜಗವು ಮೊದಲೇ ಇಲ್ಲ ಎನ್ನುತ್ತಾರೆ. ಹಾಗಾದರೆ ಇಲ್ಲಿ ನಾನು, ನೀನು ಇದ್ದೇವೆಂಬುದು ಒಂದು ಅರ್ಥ. ಇದೂ ದ್ವೈತವಾದರೆ ಇಲ್ಲಿ ನಾನೂ ಇಲ್ಲ ನೀನೂ ಇಲ್ಲ ಎಂದರೆ ಏನೂ ಇಲ್ಲ ಶೂನ್ಯ ಒಂದೇ ಎನ್ನುವಾಗ ಅದ್ವೈತವನ್ನು ಸೂಚಿಸುವಂತಿದೆ.

ನೀನೇ ಯೋಗಿ ನಾನೇ ಸಾಧು ಇಬ್ಬರ ಒಳಗೆ ನಾನೇ ಮೊದಲು ಅನ್ನುವಾಗ ಅಹಂ ಬ್ರಹ್ಮಾಸ್ಮಿ ತತ್ವ ಕಂಡುಬರುತ್ತದೆ. ನೀನೇ ಗಂಡು ನಾನೇ ಹೆಣ್ಣು ಭೇದವಿಲ್ಲ ಎಂಬಲ್ಲಿ ಅಭೇದ್ಯ ಜ್ಞಾನ ತಿಳಿದುಬರುತ್ತದೆ. ಒಟ್ಟಾರೆ ಪುರಂದರದಾಸರು ದ್ವೈತ ಅದ್ವೈತದ ಕಡೆಗೆ ಧಾವಿಸಿದಂತಿದೆ.

೧೩. ಏನ್ ಕೊಡ ಏನ್ ಕೊಡಾವ್ವ

ಏನ್ ಕೊಡ ಏನ್ ಕೊಡಾವ್ವ ಹುಬ್ಬಳ್ಳಿ ಮಾಟ
ಏನ್ ಚಂದುಳ್ಳ ಕೊಡಾವ್ವ ॥ಪ॥

ತಿಕ್ಕಿಲ್ಲ ಬೆಳಗಿಲ್ಲ ತಳತಳ ಹೊಳಿತಾದ
ಕಂಚಿಂದಲ್ಲ ತಾಮ್ರದಲ್ಲ ಮಿರಿಮಿರಿ ಮಿಂಚುತಾದ ॥೧॥

ಆರು ಮಂದಿ ಅಕ್ಕತಂಗೇರು ಜತ್ತೀಲೆ ನೀರಿಗೆ ಹೋಗಿ
ಜರರಾರ ಜಾರಿಕೊಂಡು ಸಿಗದಹೋಯ್ತವ್ವ ಕೊಡ ॥೨॥

ಆರು ಮಂದಿ ಅಕ್ಕಗಳಿಗೆ ಮೀರಿದ ಕೊಡನವ್ವ
ಮೂರುಮಂದಿ ಮುತ್ತೈದೆರು ಲೋಲಾಡುವಂತ ಕೊಡ ॥೩॥

ಶಿವರಾತ್ರಿ ಯಾತ್ರಿಗೋಗಿ ಸಿದ್ಧಲಿಂಗನ ದರುಶನವಾಗಿ
ಮುಳ್ಳು ಬಜಾರದೊಳಗ ಬಾಳಿ ಹೋತವ್ವ ಕೊಡ ॥೪॥

ಶಿಶುನಾಳಧೀಶನು ತಿದ್ದಿ ಮಾಡಿದ ಕೊಡ
ಬುದ್ಧಿವಂತರು ನೀವೆಲ್ಲ ಸೋಸಿನೋಡಿರಿ ಕೊಡ ॥೫॥

ಇದು ಸಂತ ಶಿಶುನಾಳ ಶರೀಫರು ರಚಿಸಿದ ತತ್ವಪದವಾಗಿದೆ.

ಇಲ್ಲಿ ದೇಹವನ್ನು ಹುಬ್ಬಳ್ಳಿ ಮಾಟದ ಕೊಡಕ್ಕೆ ಹೋಲಿಸಿದ್ದಾರೆ. ಈ ದೇಹ ಕಂಚಿಂದಲ್ಲ, ತಾಮ್ರದ್ದಲ್ಲ ಅಂದರೆ ತೊಗಲಿನ ದೇಹ. ತಿಕ್ಕಿಲ್ಲ ಮತ್ತು ಬೆಳಗಿಲ್ಲ ಆದರೂ ಕೂಡಾ ಮಿರ ಮಿರ ಮಿಂಚುತಾದ ಎನ್ನುವರು.

ಆರುಮಂದಿ ಅಕ್ಕ ತಂಗಿಯರು, ಮಿರಿಮಿರಿ ಮಿಂಚುವ ಕೊಡ ಅಂದರೆ ಅರಿಷಡ್ ವರ್ಗಗಳನ್ನು ಮೀರಿದವರು ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರವೆಂಬುದನ್ನು ಅಳಿದು ಕಾಯ, ವಾಚಾ, ಮನಸಾ ಎಂಬ ತ್ರಿಕರ್ಣಗಳು ಅಂದರೆ ಕೆಲಸ, ಮಾತು, ಮನಸ್ಸು ಎಂಬ ಗುಣಗಳಿಂದ ಆನಂದವನ್ನನುಭವಿಸುವುದೇ ಈ ದೇಹವೆನ್ನುತ್ತಾರೆ.

ಶಿವರಾತ್ರಿ ಜಾತ್ರೆಗೆ ಹೋಗಿ ಸಿದ್ಧರಾಮನ ದರ್ಶನ ಪಡೆದುಕೊಂಡು ಬಜಾರದಲ್ಲಿ (ಮಣ್ಣಿನಲ್ಲಿ) ಬಾಳಿಹೋತವ್ವ ಈ ದೇಹವೆಂಬ ಕೊಡ ಅರಿಷಡ್ ವರ್ಗಗಳೆಂಬ ಗುಣಗಳನ್ನೂ ಹೊತ್ತು ಮೈಯನ್ನು ತುಂಬಿಕೊಂಡು ಜೊತೆಲೆ ನೀರಿಗೆ ಹೋದರೆ ಇಹಲೋಕವನ್ನೇ ಬಿಟ್ಟು ಹೋಗುತ್ತದೆ ಈ ದೇಹ ಎನ್ನುತ್ತಾರೆ. ಶಿಶುನಾಳ ದೀಶನು ತಿಳಿಸಿದ ಈ ದೇಹವೆಂಬ ಕೊಡವನ್ನು ಬುದ್ಧಿವಂತರಾದವರು ತಿಳಿದು ನೋಡಬೇಕೆನ್ನುತ್ತಾರೆ.

೧೪. ನ್ಯಾಯಗಳಿಸಿರಯ್ಯ

ನ್ಯಾಯಗಳಿಸಿರಯ್ಯ ನೀವು ನ್ಯಾಯಗಳಿಸಿರಯ್ಯ॥ಪ॥

ನ್ಯಾಯವು ಬಿಟ್ಟರೆ ದೇವರು ಇಲ್ಲ
ಕಾಯವು ಬೆಳಸಿ ಸಾರ್ಥಕವಲ್ಲ
ರಾಯನೆನಿಸಿಕೊಂಡು ರೂಢಿಯೊಳಗೆ
ಕಾಯವು ಯಮನ ಬಾಧೆಗೆ ಸಿಲುಕದೆ ॥೧॥

ನ್ಯಾಯಕೆ ಜಯವುಂಟು ಅನ್ಯಾಯಕೆ ಲಯವುಂಟು
ಮಾನ್ಯರಲ್ಲಿ ಮರ‍್ಯಾದೆ ಉಂಟು
ಮಾನಗೇಡಿ ಮಂದಿಯೊಳಗೆ ಅವಮಾನವುಂಟು
ತಪ್ಪದು ಇವರಿಗೆ ನರಕದ ಗಂಟು
ಒಪ್ಪುಳ್ಳ ಮನುಷ್ಯರಿಗೆ ಶಿವನು ಉಂಟು. ॥೨॥

ನ್ಯಾಯದ ನೆಲಿ ಬೇರೆ ಅನ್ಯಾಯದ ನೆಲಿ ಬೇರೆ
ನ್ಯಾಯಕೆ ಬೆಲೆಯು ಸದಾಕಾಲವು

ಅನ್ಯಾಯಕೆ ಬೆಲೆಯು ಮರಣದಂಡವು
ಅರವು ಇಟ್ಟು ನೀವು ತಿಳಿದು ನೋಡ್ರಿ
ಗುರುವಿನ ಪಾದ ಮರಿಬ್ಯಾಡ್ರಿ ನೀವು ॥೩॥

ಧರೆಯೊಳು ಮೆರೆಯುವ ತುಮ್ಮರಗುದ್ದಿ ಊರ
ನನ್ನ ಗುರುವು ರಾಮನ ಅವತಾರ
ಅವರಿಂದ ನಾನು ಆಗೇನಿ ಉದ್ದಾರ
ನನಗೆ ತಿಳಿದಷ್ಟು ಹೇಳ್ತಿನ್ರೀ ಜನರ ॥೪॥

ಇದು ಸ್ವತಃ ಮಾರೆಪ್ಪ ಚೆನ್ನದಾಸರು ರಚಿಸಿರುವ ತತ್ವಪದವಾಗಿದೆ.

ಭೂಮಿಯ ಮೇಲೆ ಹುಟ್ಟಿದ ಬಳಿಕ ನ್ಯಾಯ ನೀತಿ ಧರ್ಮದಿಂದ ಪ್ರತಿಯೊಬ್ಬರು ಜೀವನ ಸಾಗಿಸಬೇಕು. ಅಂದಾಗ ಮಾತ್ರ ಅವರ ಜೀವನ ಪಾವನವಾಗುತ್ತದೆ. ನ್ಯಾಯದಿಂದ ಕಾಯಕವನ್ನು ಮಾಡಬೇಕು. ಯಾವುದೇ ರೀತಿಯ ಮೋಸ, ವಂಚನೆ ಸಲ್ಲದು. ಮಾನವೀಯ ಮೌಲ್ಯಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಬದುಕಬೇಕು. ದುಷ್ಟ ಮನುಜರ ಸಹವಾಸವನ್ನು ಬಿಡಬೇಕು.

ನ್ಯಾಯದ ದಾರಿಯೇ ಬೇರೆ. ಅನ್ಯಾಯದ ದಾರಿಯೇ ಬೇರೆ. ನ್ಯಾಯಕ್ಕೆ ಬೆಲೆಯು ಸದಾಕಾಲವೂ ಇರುತ್ತದೆ. ಅನ್ಯಾಯಕ್ಕೆ ಬೆಲೆಯೆಂದರೆ ಮರಣದಂಡವು, ತಿಳುವಳಿಕೆಯಿಂದ ನಾವು ಭಕ್ತಿಭಾವದಿಂದ ಸ್ವಯಂ ಪ್ರಜ್ಞೆಯಿಂದ ಗುರುವಿನ ಪಾದಕ್ಕೆ ನಮಸ್ಕರಿಸಬೇಕು.

ಈ ಜಗದಲ್ಲಿ ಮೆರೆಯುವ ತುಮ್ಮರಗುದ್ದಿಯ ಊರನ್ನು ನೆನೆಯುತ್ತಾ ಹಾಗೂ ತನ್ನ ಗುರುಗಳಾದ ರಾಮಣ್ಣ ಮಾಸ್ತರರಿಂದ ಉದ್ದಾರ ಆಗಿರುವುದನ್ನು ಮಾರೆಪ್ಪ ಚೆನ್ನದಾಸರು ಇಲ್ಲಿ ನೆನೆದಿದ್ದಾರೆ.

೧೫. ತಾಯವ್ವಿರಬೇಕು.

ತಾಯವ್ವಿರಬೇಕು ಜಲ್ಮಕ ॥ಪ॥
ಹಡೆದವ್ವಿರಬೇಕು ತಾಯಿ
ತಾಯಿಯು ಇದ್ದರೆ...... ಮೋಹವು ಹೆಚ್ಚುವಳು
ಪ್ರಾಯದ ರತಿನೋಡಿ ನಗವುಳಮ್ಮ ॥೧॥

ಪಟ್ಟನೆ ಬಡಿಯುವಳು ಲಟ್ಟನೆ
ಮುದ್ದನು ಕೊಡುವುವಳೆ ತಾಯಿ ॥೨॥

ಕೀಟಕತನಮಾಡಿ ಸಿಗದಡಿ ಹೋದರೆ
ಊಟಕೆ ಬಾರೆಂದು ಪ್ಯಾಟಿಯ ನುಡಕುವಳು ॥೩॥

ಹಸಿವು ನೋಡುವಳೆ ಮಗನಿಗೆ
ಶಿಶುವು ಬಾರೆನ್ನುವಳು ತಾಯಿ
ಮೊಸರು ಅನ್ನವು ಹಸನಾಗಿ ಕಲಸಿ
ತುಸನ್ನ ಉಣ್ಣೆಂದು ರಾಶಿಯ ಸುರಿಸುವಳು ॥೪॥

ಊರಿಗೆ ಹೋಗುವೆ ಎನ್ನಲು ದಾರ್‍ಯೋಳು
ಅಡ್ಡಕಟ್ಟುವಳೆ ತಾಯಿ
ಮಾರಿಯ ತೋರೆಂದಳು ಮೋಹದ
ದೃಷ್ಟಿಯ ತೆಗೆಯುವಳೆ ತಾಯಿ
ಅಕ್ಕರದಿಂದಲೇ ಹಾಲ್ಗುರು ಬಸವನ
ಜೋಗುಳ ಪಾಡುವಳೆ ತಾಯಿ ॥೫॥

ಇದು ಹಾಲ್ಗುರು ಬಸವನ ತತ್ವಪದವಾಗಿದೆ.

ಇಲ್ಲಿ ತಾಯಿಗಿಂತ ಬಂಧುವಿಲ್ಲ. ಉಪ್ಪಿಗಿಂತ ರುಚಿಯಿಲ್ಲ ಎಂಬ ಗಾದೆಯಂತೆ ತತ್ವಪದಕಾರರು ತಾಯಿಯ ಮಹತ್ವವನ್ನು ಎತ್ತಿ ತೋರಿಸಿದ್ದಾರೆ. ನಮ್ಮನ್ನು ಹೆತ್ತ ತಾಯಿ ಬಹಳ ವರ್ಷ ಬದುಕಬೇಕ. ಅವಳು ಮಾತ್ರ ನಮ್ಮ ಶ್ರೇಯಸ್ಸನ್ನೇ ಬಯಸುವ ಏಕಮಾತ್ರಳು.

ತಾಯಿಯಿದ್ದರೆ ನಮ್ಮನ್ನು ಸಾಕಿ, ಸಲುಹಿ, ಉಣಿಸಿ, ಬೆಳೆಸಿ, ಮದುವೆ ಮಾಡಿ ಮೊಮ್ಮಕ್ಕಳನ್ನು ಕಾಣುವಂತಹ ಆಸೆ ಕಾಣುತ್ತಾಳೆ. ಸೊಸೆಗೆ ಮಾದರಿಯಾಗುತ್ತಾಳೆ. ತಾಯಿಯು ಪಟ್ಟನೆ ಬಡಿಯುವಳು, ಮುದ್ದಿಸುವಳು ಕಿಟಕಿತನ ಮಾಡಿ ಮಕ್ಕಳು ಊಟಮಾಡದೇ ಹೋದಾಗ ಪೇಟೆಯನ್ನೆಲ್ಲಾ ಹುಡುಕುವಳು. ತಾಯಿ ಪ್ರೀತಿಯಿಂದ ಮೊಸರು ಅನ್ನವನ್ನು ಕಲಿಸಿ ಅನ್ನದ ರಾಶಿಯನ್ನೇ ಸುರಿಸುವಳು.

ಊರಿಗೆ ಹೋಗುವಾಗ ತಾಯಿಯು ಅಡ್ಡಗಟ್ಟಿ ನಿಲ್ಲಿಸಿ ದೃಷ್ಟಿ ತಾಗೀತು ಎಂದು ದೃಷ್ಟಿ ತೆಗೆಯುವಳು. ಚಿಕ್ಕಮಕ್ಕಳು ಹಠಮಾಡಿದಾಗ ಜೋಗುಳ ಹಾಡಿ ಮಲಗಿಸುತ್ತಾಳೆ. ಒಂಬತ್ತು ತಿಂಗಳ ಹೊತ್ತು ಹೆತ್ತು ಸಾಕಿ, ಸಲುಹಿ ಮಕ್ಕಳು ಹಠ ಮಾಡಿದಾಗ ಎಷ್ಟೇ ಕಷ್ಟಬಂದರೂ ತ್ಯಾಗಶೀಲಳಾಗಿರುತ್ತಾಳೆ.

೧೬. ಹನುಮಪ್ಪ ಸ್ವಾಮಿ

ನೋಡಲು ಬಂದೇವು ಬಾ ನಿನ್ನ

ಹನುಮಪ್ಪಸ್ವಾಮಿ
ಕಾಣಲು ಬಂದೇವು ಬಾ ನಿನ್ನ ||ಪ||

ನೋಡಲು ಬಂದೇವು ನಿನ್ನ ಕರುಣುಳ್ಳ ಪಾದುವ
ಇಂಥ ಸ್ಥಾನವ ಕಾಯೋ ನಮ್ಮ ಲೆಂಕಿ ಹನುಮ ||೧||

ಹನುಮಪ್ಪೆಂಬುವ ಪ್ರಳೆಯ ಕಾಲಾಗೆ ಬಂಗಾರದುಳಿಯ
ತಾಯಿ ಬಳಿಯಲ್ಲಿ ಕುಳಿತು ತಿರುವ್ಯಾನು ಹಂಪಿ
 ಹೊಳೆಯ ||೨||

ಹನುಮಪ್ಪೆಂಬುವ ನೇಮ ಮೂಗಿನ ಮೇಲಿರುವ ನಾಮ
ಸೀತನ ಕಂಡನು ರಾಮ ಕೀಚಕನ ಕೊಂದನು ಭೀಮ||೩||

ಹನುಮಪ್ಪೆಂಬುವ ಕರಗ ಕಾಲಾಗ ಕ್ಯಾನೋಬಿರದ
ಭಕ್ತನ್ನ ಕೈಮಾಡಿ ಕರಿದ ಅಮೃತಾದ ಮಳಿಯ ಸುರಿದ ||೪||

ರಾಮಾನು ಉದ್ದಕೆ ನಿಂತ ಹನುಮಂತನು ಪಾದಕೆ ಬಿದ್ದ
ಏಳು ಅಂದಾರೆ ಎದ್ದ ಏಳು ಲೋಕವನೇ ಗೆದ್ದ ||೫||

ಹನುಮಪ್ಪೆಂಬುವ ಬೃಂಗಿ ತೊಟ್ಟಾನು ಚಿಲಕಾದಂಗಿ
ಎಡಗಡೆ ರಾಮಸಿಂಗಿ ಬಲಗಡೆ ಗೋವಾಳಪುಟ್ಟಿ ||೬||

ಹನುಮಪ್ಪೆಂಬುವ ದಿಟ್ಟ ನೆತ್ತಿಮ್ಯಾಲಿರುವ ಜುಟ್ಟ
ಭಕ್ತರಿಗೆ ವರವಕೊಟ್ಟ ರಾವಣನ ಲಂಕ ಸುಟ್ಟ ||೭||

ಹನುಮಪ್ಪೆಂಬುವ ಜಟ್ಟಿ ವಜ್ರ ಶರೀರ ಗಟ್ಟಿ
ನಡುವಿಗೆ ಗೆಜ್ಜೆ ಪಟ್ಟಿ ಚಿದಾನಂದನಿಗಾದನು ಬೆಟ್ಟಿ ||೮||

ನೋಡಲು ಬಂದೆವೂ ನಿನ್ನ ಕರುಣುಳ್ಳ ಪಾದವ
ಇಂಥಾ ಪ್ರಾಣವ ಕಾರಯೋ ನಮ್ಮ ಲೆಂಕಿ ಹನುಮ

ಈ ತತ್ವಪದ ಚಿದಾನಂದರದ್ದಾಗಿದೆ.

ಇಲ್ಲಿ ಭಕ್ತರ ಹನುಮಪ್ಪ ಸ್ವಾಮಿಯ ಸನ್ನಿಧಾನಕ್ಕೆ ಬಂದು ಅವನು ಕಾಣುವ ಪರಿಯನ್ನು ಚಿದಾನಂದರು ಪ್ರಸ್ತುತ ಗೀತೆಯಲ್ಲಿ ತಿಳಿಸಿದ್ದಾರೆ. ಹನುಮಪ್ಪ ಸ್ವಾಮಿಯನ್ನು ಕಾಣಲು ಬಂದ ಭಕ್ತರು ಆತುರದಿಂದ ದರುಶನ ಪಡೆಯಲು ಇಚ್ಛಿಸುತ್ತಾರೆ.

ಚಿರಂಜೀವಿ ಹನುಮ ಶ್ರೀರಾಮನ ಪ್ರಾಣದೇವ. ಸೀತಾ ಸಂರಕ್ಷಕ, ಲಂಕಾ ವಿನಾಶಕನಾಗಿ, ಶ್ರೀರಾಮ ಸೀತೆಯರನ್ನು ಒಂದು ಮಾಡಿದ ಶ್ರೇಯಸ್ಸಿಗೆ ಪಾತ್ರನಾದವನು ಎಂದು ಹನುಮಂತನನ್ನು ಭಕ್ತರು ಈ ತತ್ವಪದದಲ್ಲಿ ಸ್ಮರಿಸುತ್ತಾ ದರುಶನವನ್ನೀಯವರು.

ಇಲ್ಲಿ ಹನುಮಪ್ಪ ಎಂಬುವನು ಭಕ್ತರ ಕರೆಗೆ ಓಗೊಟ್ಟು ಅಮೃತದ ಮಳೆಯನ್ನೇ ಸುರಿಸಿದ ರಾಮನು ಉದ್ದಕ್ಕೆ ನಿಂತ ಹನುಮಂತನು ಪಾದಕೆ ಬಿದ್ದ ಏಳು ಅಂದಾರೆ ಎದ್ದು ಏಳುಲೋಕವನ್ನೇ ಗೆದ್ದ. ಹನುಮಪ್ಪನಲ್ಲಿ ಬಹಳ ಶಕ್ತಿಯಿದೆ. ಭಕ್ತರಿಗೆ ವರವನ್ನು ದಯಪಾಲಿಸುವವನಾಗಿದ್ದಾನೆ. ವಜ್ರದಂತಹ ಶರೀರವನ್ನು ಹೊಂದಿರುವ ಹನುಮಪ್ಪ, ಚಿದಾನಂದನ ಭಕ್ತಿಗೆ ಮೆಚ್ಚಿ ಅವನಿಗೆ ದರ್ಶನವಾಗುತ್ತಾನೆ. ನೋಡಲು ಬಂದಿದ್ದೇವೆ, ನಿನ್ನ ಕರುಣೆ ತುಂಬಿದ ಮನಸ್ಸಿನಿಂದ ನಮ್ಮೆಲ್ಲರನ್ನು ರಕ್ಷಿಸು ಎಂದು ಭಕ್ತರು ಅವನಲ್ಲಿ ಬೇಡಿಕೊಳ್ಳುತ್ತಾರೆ.

ಈ ತತ್ವಪದದ ಪಲ್ಲವಿಯನ್ನು ಹಾಡುವಾಗ ಮಾರೆಪ್ಪನವರು 'ಹನುಮಪ್ಪ ಸ್ವಾಮಿ' ಎಂಬುದನ್ನು 'ಮಾರುತಿ ಸ್ವಾಮಿ' ಎಂದು ಒಮ್ಮೊಮ್ಮೆ ಬದಲಾಯಿಸಿಕೊಂಡು ಹಾಡುತ್ತಾರೆ.

೧೭. ನಾಗಲಿಂಗಸ್ವಾಮಿ

ನಾಗಲಿಂಗಸ್ವಾಮಿ (ಯೋಗಿ) ಹುಟ್ಟಿ ಬರತೀನಂದಾವ
ಇನ್ನು ಯಾಕ ಬರಲಿಲ್ಲ ಸ್ವಾಮಿ ನೆನಸೋದು ಜೀವ ॥ಪ॥

ಸ್ನಾನ ಸಂಜನ ಜಪತಪ ಮಾಡಲಿಲ್ಲಾವ
ಸುಡುಗಡದಾನ ಸಿದಿಗಿ ಹೊತ್ತು ಊರಾಗೆ ಮೆರೆದಾವ ॥೧॥

ಕ್ವಾಟ್ಯಾಗೊಕ್ಕು ಕೂಟಿಲಂಗಡಿ ಲೂಟಿ ಮಾಡ್ದಾವ
ಗಲ್ಲದಾನ ರೊಕ್ಕ ತಂದು ಸೂರಿಮಾಡಿದಾವ ॥೨॥

ದ್ಯಾಮವ್ವ ದುರುಗವ್ವ ಡಾಗಿನಮಾರಿ ಸೆರಿಯ ಕುಡಿದಾವ
ಸಮಗಾರ ಭೀಮವ್ವ ತಾಯಿಯೆಂದು ಮೊಲೆಯ ಕುಡಿದಾವ ॥೩॥

ನಾರುಣ್ಣು ಆದಕಾಲು ಕುಲಮ್ಯಾಗಿಟ್ಟಾವ
ಕಂಬಾರವನ ತಿದಿಯ ಮಾಡಿ ಜಗ್ಗಾಕಚ್ಯಾವ ॥೪॥

ನೆಲ ಊದಿ ಉರಿ ಹಚ್ಚಿ ಮಾಯವಾದಾವ
ನೆನಸಿದವರ ಕನಸಿ (ಮನಸಿ)ನೊಳಗ ಇದ್ದ ಇರಾವ ॥೫॥

ಈ ತತ್ವಪದ ರಚನಾಕಾರರು ಯಾರು ಎಂಬುದು ತಿಳಿದುಬಂದಿಲ್ಲ. ಇಲ್ಲಿ ನಾಗಲಿಂಗ ಶಿವನನ್ನು ಕುರಿತಾದ ಪವಾಡಗಳನ್ನು ನೋಡಬಹುದು.

ನಾಗಲಿಂಗಸ್ವಾಮಿಯು ಅನೇಕ ಪವಾಡಗಳನ್ನು ಮಾಡಿ ಪುನಃ ಬರುತ್ತೇನೆಂದು ಹೋದಾಗ ಜನರು ಆಡುವ ಮಾತುಗಳಿವು. ಸ್ನಾನ, ಸಂಜನ, ಜಪ-ತಪ ಮಾಡದೇ ಸುಡುಗಾಡಿನಲ್ಲಿ ಸಿದಿಗೆಯನ್ನು ತಂದು ಊರಿನಲ್ಲಿ ಮೆರೆದಾವ. ಕೋಟೆಯೊಳಗೊಕ್ಕು ಅಂಗಡಿಯಲ್ಲಿನ ಹಣವನ್ನು ಕಳುವು ಮಾಡಿದಾವ.

ದ್ಯಾಮವ್ವ ಮತ್ತು ದುರುಗವ್ವನ ಒಡವೆ ಮಾರಿ ಸರಾಯಿ ಕುಡಿದಾವ. ಒಂದು ದಿನ ನಾಗಲಿಂಗ ಸ್ವಾಮಿಯು ಸರಾಯಿ ಕುಡಿಯಲು ಹಣವಿಲ್ಲದಿದ್ದಾಗ ಅವನು ದ್ಯಾಮವ್ವನ ಮೂಗುತಿ ಕೊಂಡೊಯ್ದು ಮಾರಿದ್ದರು. ಜನರು ಆತನನ್ನು ವಿಚಾರಿಸಿದಾಗ ಮೂಗುತಿಯನ್ನು ನನಗೆ ದ್ಯಾಮವ್ವಳೇ ಕೊಟ್ಟಿದ್ದಾಳೆ ಎಂದು ಹೇಳುತ್ತಾನೆ. ಪುನಃ ಊರಿನ ಜನರು ದೇವಸ್ಥಾನಕ್ಕೆ ಹೋಗಿ ಪರೀಕ್ಷಿಸಿದರೆ ದ್ಯಾಮವ್ವನ ಮೂಗುತಿ ಅಲ್ಲಿಯೇ ಇರುತ್ತದೆ. ಈ ರೀತಿ ಈ ಪವಾಡ ಪುರುಷನ ಕಥೆಯಿದೆ.

ಕಾಲಿಗೆ ಹುಣ್ಣಾದ ಸಂದರ್ಭದಲ್ಲಿ ಕಾಲನ್ನು ಕುಲುಮ್ಯಾಗ ಇಟ್ಟು ಕಂಬಾರನ ಕೈಯಿಂದ ಜಗ್ಗಾ ಕಚ್ಚಿದಾವ, ನೆಲ ಊದಿ ಉರಿಹಚ್ಚಿ ಮಾಯವಾದವ. ನೆನೆಸಿದವರ ಕನಸು ಮನಸ್ಸಿನಲ್ಲಿ ಇದ್ದುಬಿಡಾವ

ಹೀಗೆ ನಾಗಲಿಂಗಸ್ವಾಮಿಯು ಅನೇಕ ಪವಾಡಗಳನ್ನು ಮಾಡಿ ಜನರಲ್ಲಿ ಅಚ್ಚರಿಯನ್ನುಂಟು ಮಾಡಿದ್ದಾನೆ. ವಿಚಿತ್ರ ಆದರೂ ಸತ್ಯ ಎನ್ನುವಂತೆ ಪವಾಡಗಳನ್ನು ಮಾಡಿ ತೋರಿಸಿದ್ದಾನೆ.

೧೮. ಮೌನಯ್ಯ ತಾನೆ ಬಂದ

ಮೌನಯ್ಯ ತಾನೆ ಬಂದ ಬಂದ್ರೆ ಕಡಿಮೇನಂದ ॥ಪ॥

ಹೊಲಿಗೇರಿ ಸ್ಥಳದಲ್ಲಿ ಎಲುಬಿನಂಧ್ವರ ಹಾಕಿ
ಕುಲದವರ ಕೂನ ಹೇಳಂದ ಕೂಡುಂಡೇನಂದ ॥೧॥

ದಾಸರ ದಂಡೆದ್ದು ದ್ವೇಷವ ನುಂಗಿಕೊಂಡು
ಹಾಸ್ಯ ಮಾಡವರ ಗಂಡಂದ ಸೋಸಿ ನೋಡಂದ ॥೨॥

ದಿನಕೇರಿ ಸ್ಥಳದಲ್ಲಿ ಕೋಲು ಮೆರವಣಿಗೆ ತಗಿದು
ಅಣಕಲಾಡವರ ಗಂಡಂದ ಕೆಣಕಿ ನೋಡೆಂದ ॥೩॥

ಹಂಪಿಯ ಸ್ಥಳದಲ್ಲಿ ಇಂಪಾದ ಗಿಡಗಳು ಹಾಕಿ
ಇಂಪಾದ ಗಿಡಗಳಿರಲಂದ ತಂಪಿರಲೇನಂದ ॥೪॥

ಧರೆಯೊಳು ತೀಂತಳ್ಳಿ ಮೆರೆವುದು ಲಿಂಗಲಬಂಡಿ
ಗಂಗೆಯ ಬಲದಲ್ಲಿ ಇರುವಾನೋ ಮೌನಯ್ಯ ತಾನು ॥೫॥

ಈ ತತ್ವಪದವು ರಚನೆಕಾರರು ಯಾರೆಂದು ತಿಳಿದಿಲ್ಲ.

ಇದು ತಿಂತಿಣಿ ಮೌನೇಶ್ವರರನನ್ನು ಕುರಿತದ್ದಾಗಿದೆ. ಮೌನೇಶ್ವರನು ತಾನೇ ಭಕ್ತರಿದ್ದಲ್ಲಿ ಬಂದು ಹೊಲಗೇರಿ ಎಂಬ ಸ್ಥಳದಲ್ಲಿ ಎಲುಬಿನ ಹಂದರ ಹಾಕಿ ಕುಲಕುಲವೆಂದು ಬಡಿದಾಡಿದವರಿಗೆ ಆ ಕುಲದವರ ಗುರುತು ಯಾವುದೆಂದು ಕೇಳಿದವನು. ಅವರ ಜೊತೆಯಲ್ಲಿಯೇ ಊಟ ಮಾಡುವೆನು ಎಂದು ಹೇಳಿದವನು. ಅಂದರೆ ಇಲ್ಲಿ ಸಮಾಜದಲ್ಲಿ ಜಾತಿ ಸಂಘರ್ಷ, ವರ್ಗ ಸಂಘರ್ಷ, ಬಡವ ಬಲ್ಲಿದರ ಮಧ್ಯ ನಡೆಯುವ ಸಂಘರ್ಷವನ್ನು ಸೂಕ್ಷ್ಮವಾಗಿ ಗಮನಿಸಿ ಮೌನಯ್ಯ ತಾತನು ಅವರಲ್ಲಿ ಬಂದು ತಿಳುವಳಿಕೆಯನ್ನು ಮೂಡಿಸಿದ್ದಾನೆ.

ಹಂಪಿಯ ಸ್ಥಳದಲ್ಲಿ ಇಂಪಾದ ಗಿಡಗಳಿರುವಾಗ ತಂಪಿರದೇ ಇದ್ದರೆ ಹೇಗೆ? ಹಾಗೇನೆ ಭೂಮಿಯ ಮೇಲೆ ತಿಂತಳ್ಳೀ ಎಂಬಲ್ಲಿ ಮೆರೆಯುವ ಲಿಂಗಲಬಂಡಿಯ ನದಿಯ ದಡದಲ್ಲಿ ಇರುವವನೇ ಮೌನಯ್ಯ. ಒಟ್ಟಿನಲ್ಲಿ ಇಲ್ಲಿ ತತ್ವಪದಕಾರರು ಮೌನೇಶ್ವರನನ್ನು ಪರಿಚಯಿಸಿದ್ದಾರೆ.

೧೯. ಜ್ಞಾನದಿಂದ ನೋಡೋ

ಜ್ಞಾನದಿಂದ ನೋಡೊ ಇಹದೊಳು ಯಾವುದು ಬಹುಪಾಡೂ
ಮನುಜ ಜ್ಞಾನದಿಂದ ನೋಡೋ ॥ಪ॥

ಹುಟ್ಟುತ ತಾಯಿ ತಂದಿ ಯಾವ ಋಣ ಹಿಡಿದು ಬಂದಿ
ನಾಳೆ ಬಿಟ್ಟು ಹೋದೇನಂದಿ
ಮಡಿದಿ ಮಕ್ಕಳ ಮೋಹವು ಬಾಳ
ದುಡಿದು ದುಡಿದು ಸತ್ತೋದಲ್ಲೊ ಮೂಳ ॥೧॥

ಸರ್ವರ ಉಪಶಾಂತಿ ಸುಳ್ಳೆ ಹಚಿಕೊಂಡೆಲ್ಲೊ ಬ್ರಾಂತಿ
ಮಾಡೊ ಗುರುಪಾದದ ಚಿಂತಿ
ಹುಟ್ಟು ಮಾಡಲಿ ಬೇಡ ಭ್ರಸ್ಟರ ಸಂಘ
ದುಡಿದು ದುಡಿದು ಸತ್ತೋದಲ್ಲೋ ಮಂಗ ॥೨॥

ಮೂರು ಲೋಕದಲ್ಲಿ ನೀನು ಹೋಗ್ವದು ಯಾವಲ್ಲಿ
ಅದರ ಹಾದಿಯ ತಿಳಿವಲ್ಲಿ

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

ಏರಿ ನೋಡಿದೆ ಕೈಲಾಸದ್ವಾರ
ಹಾಡಿ ಹರಸಿದ ಗುರುಸಿದ್ದೇಶ್ವರ ॥೩॥

ಇದು ಗುರುಸಿದ್ದೇಶ್ವರನು ರಚಿಸಿದ ತತ್ವಪದವಾಗಿದೆ.

ಸಮಾಜಕ್ಕೆ ನೈತಿಕತೆ ಮತ್ತು ವೈಚಾರಿಕತೆಯನ್ನು ಹೇಳುತ್ತಾ, ಸನ್ಮಾರ್ಗಕ್ಕೆ ಹೋಗುವ ಮಾರ್ಗವನ್ನು ಕುರಿತು ಈ ತತ್ವಪದದಲ್ಲಿ ಭಿನ್ನವಿಸುತ್ತಾರೆ.

ಜ್ಞಾನದಿಂದ ನೋಡೋ ಇಹದೊಳು ಯಾವುದು ಒಳ್ಳೆಯದು ಮನುಜ ಜ್ಞಾನದಿಂದ ನೋಡೋ ಮನುಜ, ಹುಟ್ಟುತ್ತ ತಾಯಿ–ತಂದೆ ಇವರ ಆಶ್ರಯದಲ್ಲಿ ಬೆಳೆದು ಮದುವೆಯಾದ ಬಳಿಕ ಅತಿಯಾದ ಮಡದಿ ಮಕ್ಕಳು ಎಂಬ ವ್ಯಾಮೋಹದಿಂದಾಗಿ ಹೆತ್ತವರನ್ನು ಬಿಟ್ಟು ಹೋಗುವ ಪರಿಪಾಠವನ್ನು ಇಲ್ಲಿ ಬಹಳ ಮಾರ್ಮಿಕವಾಗಿ ತಿಳಿಸಿದ್ದಾರೆ.

ಎಲ್ಲರನ್ನು ಕುರಿತು ಚಿಂತಿಸಿ ದುಡಿದು ದುಡಿದು ಸತ್ತು ಹೋಗುವ ಮೂಳ (ದೇಹ) ಇರುವ ತನಕ ಗುರುವಿಗೆ ನಮಿಸಿ ನೀತಿವಂತರಾಗಿ ಬಾಳುವಂತೆ ಮನುಕುಲಕ್ಕೆ ಸಂದೇಶವನ್ನು ರವಾನಿಸಿದ್ದಾನೆ.

ಮೂರು ಲೋಕದಲ್ಲಿ ನೀನು ಯಾವ ಲೋಕದಲ್ಲಿ ಹೋಗುತ್ತಿ ಅದರ ಆಳವನ್ನು ತಿಳಿಯದೇ ಕೈಲಾಸ ದ್ವಾರದ ಮುಕ್ತಿಯ ಮಾರ್ಗದಲ್ಲಿ ಚಲಿಸುವ ಗುರುಸಿದ್ದೇಶ್ವರ ಎಂಬ ಅಂಕಿತವನ್ನಿಟ್ಟುಕೊಂಡು ಪದವನ್ನು ರಚಿಸಿದ್ದು ತಿಳಿದುಬರುತ್ತದೆ.

೨೦. ಬ್ರಹ್ಮಾಂಡ ತುಂಬಿ ತುಳುಕಿ

ಬ್ರಹ್ಮಾಂಡ ತುಂಬಿ ತುಳುಕಿ ಕುಣಿಯುವದ್ಯಾಕೊ
ಇದು ಕುಣಿಯಾದಿದ್ದರೆ ಮುಳುಗುತಾದೆ
ಮೂರುಲೋಕೊ ॥ಪ॥

ಇದು ಯಾರು ಎಂಬುದು ಪೂರ ನೀವು ತಿಳಿಯಬೇಕೂ
ಇದರ ಹಿಂಗಿತಲರಿಯದ ಮಂಗ ಮನುಜರ
ಸಂಗವ್ಯಾಕೊ ॥೧॥

ಅನ್ನ ನೀರು ಮೊದಲುಣದೆ ನೀವು ದಣಿಯುವದ್ಯಾಕೊ
ಹಗಲು ಇರಳು ಹಾಡುತಲಿರುವದು ಇದು ಒಂದು
ಸಾಕೊ ॥೨॥

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

ಮಂಗ ಮನುಜರ ನಿಂದೆಯನಾಡಿದರೆ ಇದಕಿಲ್ಲ ಕೋಪ
ಶರಣು ಜನರನು ವರ್ಣಿಸಿ ಕೇಳಿದರೆ ನಿಜ ಒಂದು
ಸಾಕೊ ॥೩॥

ಗಡಿಯೊಳ್ ನೀರಲ್‌ಕೇರಿ ಗುರುವಿನ ಕರುಣಬೇಕು
ಸಾಂಬನ ಪಾದ ನಂಬಿದವರಿಗೆ ಅಂಜಿಕೆ ಯಾಕೊ ॥೪॥

ಇದು ನೀರಲಕೇರಿ ಬಸವಲಿಂಗ ಶರಣರ ತತ್ವಪದವಾಗಿದೆ.

ಬ್ರಹ್ಮಾಂಡ ತುಂಬಿ ತುಳುಕಿ ಕುಣಿಯುವದ್ಯಾಕೋ ಅಂದರೆ ಇಡೀ ವಿಶ್ವವೇ ಎಂದು ಅರ್ಥವಾಗುತ್ತದೆ. ಇದು ತುಂಬಿ ತುಳುಕಿದರೆ ಇದರಲ್ಲಿಯ ಭೂಲೋಕ, ಮರ್ತ್ಯಲೋಕ, ದೇವಲೋಕಗಳು ಮುಳುಗಿ ಹೋಗುತ್ತವೆ ಎಂದಿದ್ದಾರೆ. ಬ್ರಹ್ಮಾಂಡ ತುಂಬಿ ತುಳುಕುವುದಕ್ಕೆ ಕಾರಣ ಯಾರು ಎಂಬುದನ್ನು ತಿಳಿಯಬೇಕು. ಹಾಗೇನೇ ದುಷ್ಟ ಮನುಜರ ಸಹವಾಸ ಬಿಡಬೇಕು. ನಿನ್ನನ್ನು ನೀನು ಮೊದಲು ಅರಿತುಕೋ ಇಡೀ ದಿನ ಹಗಲೂ-ರಾತ್ರಿ ಎನ್ನದೇ ಹಾಡುವುದು ಬಿಟ್ಟು ಪಾರಮಾರ್ಥಿಕ ಲೋಕಕ್ಕೆ ಬನ್ನಿ ಎಂದು ಬಸವಲಿಂಗ ಶರಣರು ಹೇಳುತ್ತಾರೆ. ಮಂಗ ಮನುಜರ ಸಂಗವನ್ನು ಬಿಡಬೇಕು. ಇನ್ನೊಬ್ಬರನ್ನು ನಿಂದಿಸುವ ಕಾಯಕವನ್ನು ಬಿಡಬೇಕು. ನೀರಲಕೇರಿ ಗುರುವಿನ ಕರುಣೆ ಇರುವವರೆಗೆ ಮತ್ತು ಅವನಲ್ಲಿ ನಮಗೆ ನಂಬಿಕೆ ಇರುವವರೆಗೂ ಅಂಜಿಕೆ ಯಾತಕ್ಕೆ ಎಂದು ಬಹಳ ಸ್ಥೂಲವಾಗಿ ಬ್ರಹ್ಮಾಂಡದ ಪರಿಕಲ್ಪನೆಯನ್ನು ಪ್ರಸ್ತುತ ಪದ್ಯದಲ್ಲಿ ಕಾಣಬಹುದು. ಈ ಪದವನ್ನು ಮಾರೆಪ್ಪ ಚೆನ್ನದಾಸರು ತುಂಬಾ ಚೆನ್ನಾಗಿ ಹಾಡುತ್ತಾರೆ.

೨೧. ಗಂಡನ ಜೋಪಾನ ಮಾಡಮ್ಮ

ಗಂಡನ ಜೋಪಾನ ಮಾಡಮ್ಮ
ಗಂಡನಂದರೆ ನಿನ್ನ ಮನಿದೇವರಮ್ಮ ॥ಪ॥

ಕರೆಮಣಿ ಎಂಬುವದಿದು ಹೊನ್ನಿನ ರಾಶೆಮ್ಮ
ಆ ರಾಶಿ ಹೋದಮೇಲೆ ನೀ ಪರದೇಶಮ್ಮ ॥೧॥

ಅತ್ತೆಮಾವ ಕೊಟ್ಟಿದ್ದೊಂದು ಮುತ್ತಿನ ತಾಳೆಮ್ಮ
ಆ ತಾಳಿ ಹೋದ ಮೇಲೆ ನೀ ಪತ್ತರೊಳೆಮ್ಮ ॥೨॥

ಸತ್ಯವಾನ ಸಾವಿತ್ರಿಯು ಸತ್ಯದಿಂದ ನಡೆದಿಹಳಮ್ಮ
ಸತ್ತ ಗಂಡಾನ ಪ್ರಾಣ ಪಡೆದಿಹಳಮ್ಮ ॥೩॥

ಧರೆಯೊಳು ಮೆರೆಯುವ ಶಿಶುನಾಳಧೀಶನ
ಸತ್ಯ ಶಿವ ಶರಣರ ಪಾದ ನಿತ್ಯಸೇವೆ ಮಾಡಮ್ಮ ॥೪॥

ಇದು ಶಿಶುನಾಳ ಶರೀಫ ಸಾಹೇಬರ ತತ್ವಪದವಾಗಿದೆ. ಶರೀಫರು ಹೆಣ್ಣುಮಕ್ಕಳಿಗೆ ತಿಳುವಳಿಕೆಯ ದೃಷ್ಟಿಕೋನವನ್ನು ನೀಡಿದ್ದಾರೆ.

ಹೆಂಡತಿಯಾದವಳು ಗಂಡನನ್ನು ಜೋಪಾನ ಮಾಡಬೇಕು. ಗಂಡನೇ ಮನೆದೇವರು ಎಂದು ತಿಳಿಯಬೇಕು. ಕರಿಮಣಿ ಎಂಬುವದಿದು ಹೊನ್ನಿನ ರಾಶಿಯಮ್ಮ. ಆ ರಾಶಿ ಹೋದ ಮೇಲೆ ನೀನು ಆಗುತಿ ಪರದೇಶಿ ಅಂದರೆ ಅನಾಥಳು. ಅತ್ತೆ ಮಾವ ಕೊಡಮಾಡಿದ ಮುತ್ತಿನ ತಾಳಿ. ಆ ತಾಳಿ ಹೋದ ಮೇಲೆ ನೀ ಆಗುತಿದೀ ಪತ್ತರೊಳಮ್ಮ ಅಂದರೆ ಊಟಮಾಡಿ ಎಲೆ ಬೀಸಿ ಹಾಕುವಂತೆ ಗಂಡನ ಮನೆಯಲ್ಲಿ ನಿನಗೆ ಪ್ರಾಶಸ್ತ್ಯ ದೊರೆಯದಂತಾಗುತ್ತದೆ.

ಸತ್ಯವಾನ ಸಾವಿತ್ರಿಯು ಸತ್ಯದಿಂದ ನಡೆದು ಸತ್ತ ಗಂಡನ ಪ್ರಾಣವನ್ನು ಪಡೆದಂತವಳು. ಗಂಡ ಹೆಂಡತಿಯರು ಸುಖ ದಾಂಪತ್ಯ ಜೀವನವನ್ನು ಸಾಗಿಸಿ ಇಹಲೋಕದಲ್ಲಿ ನೀತಿವಂತರಾಗಿ ಬಾಳಿ ಪಿತೃಋಣ ತೀರಿಸಿ ಮೋಕ್ಷ ಪಡೆಯಲು ಸಾಧ್ಯವಾಗುತ್ತದೆ. ಅಂದರೆ ಇಲ್ಲಿ ಹೆಣ್ಣಾದವಳು ಗಂಡನೇ ಸರ್ವಸ್ವವೆಂದು ತಿಳಿದು ಅವನ ಕಷ್ಟ ಸುಖಗಳಲ್ಲಿ ಸಮಭಾಗಿಯಾಗಬೇಕು. ಹಾಗೇನೆ ಈ ಭೂಮಿಯ ಮೇಲೆ ಹಿಡಿಯುವ ಶಿಶುನಾಳದೀಶನ ಸೇವೆಯನ್ನು ನಿತ್ಯ ಮಾಡಬೇಕು ಎಂದು ಹೇಳಿ ಮಕ್ಕಳ ಪರಿವರ್ತನೆ ಮಾಡಲು ಬಯಸಿದ್ದಾರೆ.

೨೨. ಚಿಗರಿ ಪದ

ಜನರು ಕೇಳಿರಿ ಕೈಮುಗಿದು ಹೇಳುವೆನು
ಮಾತು ಐತ್ರಿ ಸೊಗಸ
ಸಭಾನುಡಿ ಆಡೆನು ಸಂತೋಷ
ಏಕ ನೀತಿಯಿಟ್ಟು ನಡೆದಂತವರಿಗೆ ದೊರಿವುದು ಕೈಲಾಸ

ಮೊದಲ ಶಹರದೊಳಗಿದ್ದ ಬ್ಯಾಟೆಗಾರ
ಮಾಂಸ ಉಣುವದು ಕ್ಯಾಲ
ಅದರ ಮ್ಯಾಲೆ ಮಾಡಿದ ಹಂಬಾಲ
ಬಲಿಯ ಹೊತ್ತಗೊಂಡು ನಡಿದ ಬ್ಯಾಟೆಗಾರ
ಆದ ಅಡವಿ ಪಾಲ

ಅಲ್ಲಿ ಚಿಗರಿ ಮೇವ್ಹಾದು ಕಂಡು
ಮನಸಿನೊಳಗೆ ಆದನು ಕುಶಿಯಾಲ

ಸುತ್ತ ಬಿಟ್ಟಾನ್ರಿ ಬಲಿಯ ಜಾಲ
ತಿರುವಿ ತಂದು ಬಲಿ ಒಳಗ ಹೊಗಸಿದನು
ಚಿಗರಿಯನ್ನು ತಾದ

ಚಿಗರಿ ಅನ್ನುತದೆ ಏ ಮಹಾದೇವ
ಮಕ್ಕಳ ಮೇಲೆ ಖ್ಯಾಲ
ಉಣಸಿ ಬರಲಿಲ್ರಿ ಮೊಲೆಯ ಹಾಲ
ಬ್ಯಾಟಿಗಾರನ ಕೈಯೊಳು ಸಿಕ್ಕಿನಿ
ಪ್ರಾಣ ಉಳಿಯೊದಿಲ್ಲ.

ಬಿದ್ದಂತ ಚಿಗರಿ ಬಲಿ ಹೊರಗ ತೆಗೆದ ಬ್ಯಾಟಿಗಾರ
ಹಗ್ಗ ಹಚ್ಚಿ ಕಟ್ಯಾನು ಐದಾರ
ಉಪವಾಸಲಿದ್ದಿತ್ರಿ ನಿರಾಹಾರ
ಬ್ಯಾಟಿಗಾರನ ಮನಿಯೊಳಗಿದ್ದಂತ ಹೆಂಗಸರು
ಅವ್ಸರಲಿ ಕುಟ್ಟುತರ ಕಾರ

ಆ ಚಿಗರಿನ ಹೊತಗೊಂಡು ಹೊಂಟನಲ್ಲ ಬ್ಯಾಟಿಗಾರ
ಹವ ತಗೊಳಲಿಕ್ಕೆ ಹೊಂಟ ನಭಿಸಾಯ್ಬ ಮುಜರಿ ಹೊತ್ತಿನಾಗ
ಆತನ ಮನೆ ಇತ್ರಿ ಬಜಾರದಾಗ
ತನ್ನ ಮನೆ ಇತ್ರಿ ಬಜಾರದಾಗ
ಚಿಗರಿ ನೋಡಿ ಸಲಾಮು ಹಾಕಿತರಿ ಆ ನಭಿಸಾಹೇಬಗ
ಸಲಾಮು ಹಾಕಿದ ಶಬ್ದ ಬಿತ್ರಿ ನಭಿಸಾಹೇಬರ ಕಿವಿಯಾಗ
ಹೊರಳಿ ನಿಂತಾನ್ರಿ ಬಜಾರದಾಗ
ತಿರುಗಿ ನಿಂತಾನ್ರಿ ಬಜರಾದಾಗ
ಶರಣರಂತ ನಿಮ ಶೃತಿ ಸಾರುತದೆ ಸೆರಿಬಿಡಸಿರಿ ನಮಗ

ಹಾಲ್ಕುಡಿಸಿ ಬರುವತೇನಿ ಹೋಗಿ ನನ್ನ ಮಕ್ಕಳಿಗೆ ಮರಿಗಳಿಗೆ
ಮುದ್ದತ್ತು ಕೊಡರಿ ಮೂರುಗಳಿಗೆ
ನಾ ಬಾರದಿದ್ದರೆ ಗುರುವಿನ ಕೊಯ್ಕೊಂಡು ತಿಂದಂಗ
ನನಮಾತು ಕೇಳ್ರಿ ನಿಜವಾಗಿ ಸತ್ಯವಾಗಿ
ಬ್ಯಾಟಿಗಾರಗನ್ನುತಾನ ನಭಿಸಾಹೇಬನು

ಕಟಿಗೊಬೇಡ ದೋಷ
ಮನುಜ ಕಟಿಗೊಬೇಡ ದೋಷ
ಮಕ್ಕಳ ಮೇಲೆ ಇದರ ದ್ಯಾಸ
ಚಿಗರಿನ ಬಿಡು ನಾ ಜಾಮೀನಾಗುತೇನಿ
ಹೊತ್ತೆ ಮೂರು ತಾಸ

ಏಕ ನೀತಿಯಿಟ್ಟು ನಡೆದಂತವರಿಗೆ ದೊರಿವುದು ಕೈಲಾಸ
ಬ್ಯಾಟಿಗಾರ ಅನ್ನುತಾನ ನಭೀಸಾಹೇಬರೆ ಸತ್ಯವಂತ ಶರಣ
ಸುಳ್ಳು ಯಾಕ ಹೇಳತೀರಿ ಕಾರಣ
ಹೋದ ಚಿಗರಿ ತಿರುಗೆಂಗ ಬರುವತದ
ಸುಳ್ಳು ಹೇಳತೀರಿ ನೆವನ
ಅಡವಿಗೋಗಿ ತಿರುಗೆಂಗ ಬರುವತದ
ಸುಳ್ಳ ಹೇಳತೀರ ನೆವನ

ಬ್ಯಾಟಿಗಾರಗನ್ನುತಾನ ನಭಿಸಾಹೇಬನು
ಸುಳ್ಳಲ್ಲೊ ವಚನ
ಖರೇವಿದು ಶಾಸ್ತ್ರ ಶಿವನ ಧ್ಯಾನ
ಚಿಗರಿನ ಬಿಡು ನಾ ಜಾಮೀನಾಗುತೇನಿ
ಚಿಗರಿ ಬರುವತನಕ
ನಭೀಸಾಹೇಬರ ಜಾಮೀನು ತಗಂಡು ಚಿಗರಿನ ಬಿಟ್ಟಾನು

ಆ ಚಿಗರಿ ಹೋಯಿತ್ರಿ ತನಮಕ್ಕಳಿರುವ ತಾವಕ್ಕ
ನಿಂತು ನೋಡಿ ಮಾಡುತ್ತದೆ ದುಕ್ಕ
ಮಕ್ಕಳನ್ನುತಾವ ಏತಾಯವ್ವ ಯಾಕಳತಿದಿ ನೀನು
ಮರಿಗಳನ್ನು ತಾವ ಏತಾಯವ್ವ ಯಾಕಳತಿದಿ ನೀನು
ಹೇಳುತನ ಮೊಲೆ ಕುಡೆದಿಲ್ಲ ನಾವು
ಇದೊಂದು ಮಾತು ಹೇಳುವತನಕ
ಹಾಲು ಕುಡಿಯೋದಿಲ್ಲ ನಾವು

ಮಕ್ಕಳಿರ ಕೇಳಿರಿ ಈ ದಿನದಾ ಕೌತುಕ
ಬ್ಯಾಟಿಗಾರ ಒಯ್ದಿದ್ದ ಕೊಲ್ವದಕ

ನಭೀಸಾಹೇಬರ ಜಾಮೀನು ಕೊಟ್ಟು
ಬಂದಿನಿ ಇಲ್ಲಿ ತನಕ

ಹೋಗೋಣ ನಡೆಯೇ ಏ ತಾಯವ್ವ
ಮಾಡಿದವ್ವ ಗಾಥ
ಲೋಕದೊಳಗಿಲ್ಲದ ವಿಪರೀತ
ಜಗದೊಳಗೆಚ್ಚೀನ ವಿಪರೀತ
ನಭೀಸಾಹೇಬರ ಜಾಮೀನು ಬಿಡಿಸಿ
ಹಾಲು ಕುಡಿಯೋಣು ತಾಸ
ನಭೀಸಾಹೇಬರ ಜಾಮೀನು ಬಿಡಿಸಿ
ಮತ್ತೆ ಕುಂದ್ರನು ತಾಸ

ಏಕ ನೀತಿಯಿಟ್ಟು ನಡೆದಂತವರಿಗೆ ದೊರಿವುದು ಕೈಲಾಸ

ಬ್ಯಾಟಿಗಾರ ಅನ್ನುತಾನ ನಭೀಸಾಹೇಬರೆ
ಬಂತರಿ ನಿಮಸುತ್ತ
ಶರಣ ಬಂತರಿ ನಿಮಸುತ್ತ
ಹೋತರಿ ಕಟ್ಟೀದ ಮುದ್ದತ್ತ
ಚಿಗರಿಯು ಬರಲಿಲ್ಲ ಈವತ್ತ
ಇವತ್ತು ಚಿಗರಿಯು ಬಾರದಿದ್ದರೆ
ಗುದ್ದಿ ಕೊಲ್ಲುತೇನಿ ವ್ಯರ್ಥ

ಇವತ್ತು ಚಿಗರಿಯು ಬಾರದಿದ್ದರೆ
ಹೋಗಲಿ ಎನ್ನ ಪ್ರಾಣ
ಮನುಜ ಹೋಗಲಿ ಎನ್ನ ಪ್ರಾಣ
ನಿನ್ನ ಕೈಯಾಗ ನನ್ನ ಮರಣ

ಏಕನೀತಿಯಿಟ್ಟು ನಡೆದಂತವರಿಗೆ ದೊರಿವುದು ಕೈಲಾಸ
ಇಷ್ಟನ್ನದರೊಳಗ ಆ ಚಿಗರಿ ಬಂತ್ರಿ ಅವ್ಸರಾಲಿ
ಮಕ್ಕಳನ್ನು ಕರಕೊಂಡು ಸಂಗದಲಿ
ಮರಿಗಳನ್ನು ಕರಕೊಂಡು ಸಂಗದಲಿ

ನಭೀಸಾಹೇಬರ ಪಾದದ ಮೇಲೆ ಬಿದ್ದು ಹೊರಳ್ಯಾಡಿ
ಬೋರ್ಯಾಡಿ ದುಕ್ಕ ಮಾಡುತಲೋರೆ
ಬ್ಯಾಟಿಗಾರ ಆದ ಹುಚ್ಚು ಪ್ಯಾಲೋರೆ

ಇಂಥ ವಚನದ ಚಿಗರಿ ನಾನು ಹೆಂಗೆ ಕೊಲ್ಲಾಲಿ
ಬಿಟ್ಟುಗೊಟ್ಟಾನ್ರಿ ಬಾಜಿನಲೋರೆ
ಬಿಟ್ಟುಗೊಟ್ಟಾನ್ರಿ ಚಿಗರಿಯನೋರೆ

ಹಿಂಗಳಿಗೆ ಊರ ಗದ್ದಿಯ ಬಾಳ
ಹಾಡಿತ್ಯೆತ್ರಿ ಖಾಸ ಮಲ್ಲ ಹಸನಕವಿ ಸೊಗಸ
ಏಕನೀತಿಯಿಟ್ಟು ನಡೆದಂತವರಿಗೆ ದೊರಿವುದು ಕೈಲಾಸ

ಈ ಪದದ ರಚನಾಕಾರರು ಇಂಗಳಗಿ ಮಲಹಸನ್

ಇಲ್ಲಿ ತತ್ವಪದಕಾರರು ಮನುಕುಲಕ್ಕೆ ಚಿಗರಿ ಕಥೆಯ ಮೂಲಕ ನೀತಿಕಥೆಯನ್ನು ಹೇಳಿದ್ದಾರೆ. ಕಥೆ ಈ ರೀತಿ ಆರಂಭಗೊಳ್ಳುತ್ತದೆ. ಇಂಗಳಗಿ ಮಲಹಸನ್‌ರವರು ನೆರೆದಂತ ಜನಸಮುದಾಯದಲ್ಲಿ ಕೈಮುಗಿದು ಕೇಳಿರಿ ಮಹಾಜನರೇ ಒಂದು ಸೊಗಸಾದ ಮಾತನ್ನು ಹೇಳುತ್ತೇನೆ. ಅದು ಏಕ ನೀತಿ ಇಟ್ಟು ನಡೆದವರಿಗೆ ಮಾತ್ರ ಅನ್ವಯಿಸುತ್ತದೆ.

ಒಂದು ದಿನ ಪಟ್ಟಣದೊಳಗಿದ್ದ ಬೇಟೆಗಾರನಿಗೆ ಮಾಂಸದ ಮೇಲೆ ಆಸೆ ಆಗಿತ್ತು. ಆ ಕಾರಣಕ್ಕಾಗಿ ಅವನು ಬಲಿಯ ಹೊತ್ತುಕೊಂಡು ಅಡವಿಯ ಕಡೆಗೆ ನಡೆದನು. ಅಡವಿಯಲ್ಲಿ ಹೆಣ್ಣು ಜಿಂಕೆ (ಚಿಗರಿ) ಮೇಯುವುದನ್ನು ಕಂಡು ಮನಸ್ಸಿನೊಳಗೆ ನಿಟ್ಟಿಸಿರು ಬಿಟ್ಟು ಚಿಗರಿಯನ್ನು ಬಲಿಯೊಳಗೆ ಹಾಕಿದನು. ಆಗ ಚಿಗರಿ ಅನ್ನುತ್ತದೆ, ಹೇ ಮಹಾದೇವ ಮಕ್ಕಳ ಮೇಲೆ ಜೀವ ನೆನೆಸ್ತಾಯಿದೆ. ಮೊಲೆಹಾಲನ್ನು ಉಣಿಸಿಬರುತ್ತೇನೆ. ಈಗ ಏನು ಮಾಡುವುದು ಅನ್ನುವ ವಿಚಾರವನ್ನು ಜಿಂಕೆ ದೇವರಲ್ಲಿ ವಿಜ್ಞಾಪಿಸಿಕೊಳ್ಳುತ್ತದೆ.

ಬಿದ್ದಂತಹ ಚಿಗರಿಯನ್ನು ಹೊರತೆಗೆದ ಬೇಟೆಗಾರ ಹಗ್ಗ ಕಟ್ಟಿದನು. ಇತ್ತಕಡೆ ಮನೆಯಲ್ಲಿ ಸಂಭ್ರಮದಿಂದ ಹೆಂಗಸರು ಅವಸರದಲ್ಲಿ ಒಳ್ಳೆಯ ಬೇಟೆ ಸಿಕ್ಕಿದೆ, ಅದನ್ನು ಭಕ್ಷಿಸಬೇಕು ಎನ್ನುವ ವಿಚಾರದಿಂದ ಮಸಾಲೆ ಕುಟ್ಟುತ್ತಾರೆ. ಚಿಗರಿಯನ್ನು ಹೊತ್ತು ಹೊರಟ ಬೇಟೆಗಾರ ಮನೆಯ ಕಡೆ ನಡೆದ. ಸಾಯಂಕಾಲದ ಸಮಯ ವಾಯು ವಿಹಾರಕ್ಕೆಂದು ಹೊರಟ ನಭೀಸಾಹೇಬರ ಕಣ್ಣಿಗೆ ಬಿದ್ದ. ನಭೀಸಾಹೇಬರ ಮನೆ ಇತ್ತು ಬಜಾರದೊಳಗ. ಅದೇ ಓಣಿಯಲ್ಲಿ ಚಿಗರಿಯ ಮನೆಯೂ ಇತ್ತು ನಭೀಸಾಹೇಬರ ನೋಡಿ ಚಿಗರಿ ಸಲಾಮು ಹಾಕಿತು.

ಆ ನಭೀಸಾಹೇಬರಿಗೆ ಸಲಾಮು ಹಾಕಿದ ಶಬ್ದ ಕೇಳಿಸಿತು. ಆಗ ಹೊರಳಿ ನಿಂತರು. ಶರಣರಂತಹ ನಿಮ್ಮ ಶೃತಿ ಸಾರುತ್ತದೆ.

ಮುದ್ದತ್ತು ಕೊಡರಿ ಮಾರು ಗಳಿಗೆ ನಾ ಬಾರದಿದ್ದರೆ ಗುರುವಿನ ಕೊಯ್ಕೊಂಡು ತಿಂದಂತೆ. ಆಗ ನಭೀಸಾಹೇಬರು ಬೇಟೆಗಾರನಿಗೆ ಮೂರು ಗಂಟೆಯ ಅವಧಿ ಕೊಟ್ಟು ಚಿಗರಿಯನ್ನು ಬಿಡಲು ಕೇಳಿಕೊಳ್ಳುತ್ತಾರೆ. ಒಪ್ಪದಿದ್ದಾಗ ನಭೀಸಾಹೇಬರು ಹೀಗೆ ಹೇಳುತ್ತಾರೆ. ಚಿಗರಿ ಮರಳಿ ಬರುವರೆಗೂ ನಾನು ಇಲ್ಲಿಯೇ ಇರುತ್ತೇನೆ ಅಂದಾಗ ಬೇಟೆಗಾರ ಹೀಗೆ ಪ್ರತಿಕ್ರಿಯೆಸುತ್ತಾನೆ. ನಭೀಸಾಹೇಬರೆ ಸತ್ಯವಂತ ಶರಣರಾದ ನೀವು ಏಕೆ ಹೇಳುತ್ತೀರಿ. ಹೋದ ಚಿಗರಿ ಮರಳಿ ಬರುವುದೇ? ಅಂದಾಗ ಚಿಗರಿ ಮೇಲೆ ನನಗೆ ವಿಶ್ವಾಸವಿದೆ. ಏಕನೀತಿ ಇಟ್ಟು ನಡೆದಂತವರಿಗೆ ದೊರೆಯುತ್ತದೆ ಕೈಲಾಸ ಎಂದು ಹೇಳುತ್ತಾರೆ. ಆದಾಗ್ಯೂ ಬೇಟೆಗಾರ ನಭೀಸಾಹೇಬರ ಜಾಮೀನು ತೆಗೆದುಕೊಂಡು ಚಿಗರಿಯನ್ನು ಬಿಟ್ಟನು.

ಆಗ ಚಿಗರಿ ಹೋಯಿತು ಮನೆಗೆ. ಹೋಗಿ ದುಃಖಿಸಲು ಪ್ರಾರಂಭಿಸಿತು. ಇದನ್ನು ಕಂಡ ಮಕ್ಕಳು, ಏ ತಾಯವ್ವ ಯಾಕೆ ಅಳುತ್ತಿ, ಕಾರಣ ಹೇಳುವ ತನಕ ಹಾಲು ಕುಡಿಯುವುದಿಲ್ಲ ನಾವು, ಅಂದಾಗ ಮಕ್ಕಳಿರಾ ಕೇಳಿರಿ ಈ ದಿನದ ಕೌತುಕ ನನ್ನನ್ನು ಬೇಟೆಗಾರ ಕೊಲ್ಲಲಿಕ್ಕೆ ತೆಗೆದುಕೊಂಡು ಹೋಗಿದ್ದ ನಭೀಸಾಹೇಬರ ಜಾಮೀನಿನಿಂದ ಬಂದೆ. ನಿಮಗೆ ಹಾಲು ಕುಡಿಸಿ ಹೋಗಲೆಂದು. ಹೋಗೋಣ ನಡೆಯೆ ಏ ತಾಯವ್ವ ಮಾಡಿದೆವ್ವ ಘಾತ. ಲೋಕದಲ್ಲಿನ ವಿಪರೀತ ನೋಡು ನಭೀಸಾಹೇಬರ ಜಾಮೀನು ಬಿಡಿಸಿ ಹಾಲು ಕುಡಿಯೋಣ ಎಂದು ನಂತರ ಚಿಗರಿಯ ಮರಿಗಳು ನಭೀಸಾಹೇಬರಿಂದ ಜಾಮೀನು ಬಿಡಿಸಿ ಸ್ವಲ್ಪ ಹೊತ್ತು ಕುಳಿತುಕೊಳ್ಳೋಣ ಎಂದವು.

ಕೊಟ್ಟ ಮಾತಿಗೆ ತಪ್ಪದಂತೆ ನಡೆದರೆ ಯಾವಾಗಲೂ ದೊರೆಯುವುದು ಕೈಲಾಸ. ಇತ್ತಕಡೆ ಬೇಟೆಗಾರ ನಭೀಸಾಹೇಬರೇ ಚಿಗರಿ ಬರದೆ ಹೊಯಿತು. ನಾನು ಕೊಟ್ಟಿದ್ದ ಮುದ್ದತ್ತು ಮುಗೀತಾ ಬಂತು. ಈ ಹೊತ್ತಿಗಾದರೂ ಚಿಗರಿ ಬರಲಿಲ್ಲ. ಚಿಗರಿ ಬಾರದಿದ್ದರೆ ನಿಮ್ಮನ್ನು ನಾನು ಬಿಡುವುದಿಲ್ಲ ಎಂದು ಹೇಳಿದನು. ಇಂದು ಚಿಗರಿಯು ಬರೆದಿದ್ದರೆ ಇಲ್ಲೇ ಹೋಗಲಿ ನನ್ನ ಪ್ರಾಣ. ನಿನ್ನ ಕೈಯಲ್ಲೇ ನನ್ನ ಮರಣವಾಗಲಿ ಎಂದು ನಭೀಸಾಹೇಬರು ಬೇಟೆಗಾರನಿಗೆ ಹೇಳುತ್ತಾರೆ.

ನಿಯತ್ತಿನಿಂದ ಜೀವಿಸಿಸದವರಿಗೆ ಯಾವಾಗಲೂ ಒಳ್ಳೆಯದೇ ಆಗುತ್ತದೆ ಎನ್ನುವಷ್ಟರಲ್ಲಿ ಚಿಗರಿ ತನ್ನ ಮರಿಗಳೊಂದಿಗೆ ಅವಸರವಸರದಿಂದ ಬಂದಿತು. ಬೇಟೆಗಾರನ ಹತ್ತಿರ ಅಲ್ಲಿಯೇ ಇದ್ದ ನಭಿಸಾಹೇಬರ ಪಾದದ ಮೇಲೆ ಬಿದ್ದು ಹೊರಳಾಡಿ ದುಃಖಿಸುವುದನ್ನು ಕಂಡು ಬೇಟೆಗಾರ ಮೂಕ ವಿಸ್ಮಿತನಾದನು.

ಇಂತಹ ನಿಷ್ಠೆಯಿಂದ ನಡೆದುಕೊಂಡ ಚಿಗರಿಯನ್ನು ನಾನು ಹೇಗೆ ಕೊಲ್ಲಲಿ ಎಂದು ಬೇಟೆಗಾರ ಕೊಲ್ಲಲು ಒಪ್ಪದೇ ಇದನ್ನು ಬಿಟ್ಟುಬಿಡುತ್ತೇನೆಂದು ನಭೀಸಾಹೇಬರಿಗೆ ತಿಳಿಸಿದನು. ಸತ್ಯಕ್ಕೆ ಸಾವಿಲ್ಲವೆಂಬ ನೀತಿ ಮಾತನ್ನು ಇದರಿಂದ ತಿಳಿದುಕೊಳ್ಳಬಹುದು.

೨೨. ಸೋಮರಾಯ–ಭೀಮರಾಯ

ಸತ್ಯವಂತ ಶರಣರ ಕಥಿಯ ಚಿತ್ತವಿಟ್ಟು ಕೇಳಿರಿ ದೈವ
ಹತ್ತು ಸಭದಲ್ಲಿ ನಾನು ಹೇಳುವೆನು
ನಾ ವಿರಳವಾಗಿ ಶೃತಿ ನಾ ಸಾರುವೆನು
ಸೋಮ್ರಾಯ ಭೀಮ್ರಾಯ ಜೋಡಿಯಿದ್ದ ಗೆಳೆಯರು
ಭಕ್ತೀಲಿಂದ ಕಂಡರು ಮುಕ್ತಿ ಮಾರ್ಗವನು ಕೇಳರಿ ಇದನು

ಸೋಮ್ರಾಯ್ನ ಮನೆಯಿತ್ತು ಆಚೆ ಓಣಿಯಲಿ
ಭೀಮ್ರಾಯ್ನ ಮನೆಯಿತ್ತು ಈಚೆ ಓಣಿಯಲಿ
ಗರಡಿಯಾಲ ಇತ್ತು ನಡು ಮಧ್ಯದಲಿ
ಅವರು ಕೂಡುವರು ಹೊತ್ತ ಮುಳುಗಿದ ಮ್ಯಾಲ

ಸೋಮ್ರಾಯ್ನ ಮನಿತನ ಭೀಮ್ರಾಯ್ನ ನೋಡಿದ್ದಿಲ್ಲ
ಭೀಮ್ರಾಯ್ನ ಮನಿತನ ಸೋಮ್ರಾಯ್ನ ನೋಡಿದ್ದಿಲ್ಲ
ಹೀಗೆ ಬಿದ್ದಿತ್ರಿಗೊಬ್ರಿಗೆಳಿತಾನ

ಗೋತು ಇಲ್ಲದ ಗರಡಿಯಲ್ಲಿ ನೋಡುತ್ತಿರುವ ಹುಬ್ಬಿನಿಂದ
ಸಾಂ ಶಕ್ತಿ ಮಾಡುತಲಿ ನಿತ್ಯನ್ ಕಾಲದಲಿ ಅನುಕೂಲದಲಿ

ಒಂದಾನೊಂದು ದಿವ್ಸದಲಿ ಬಂದಾಳು ಸೋಮ್ರಾಯ್ನ ಹೆಂಡ್ತಿ
ತಾಂಬಲ ತಾರಕೋಸ್ಕರದಲಿ

ಆಕಿ ಅಂಗಡಿಗೆ ಹೋಗ್ತಿದ್ದಳು ನಡು ಬಾಜಿನಲಿ
ನಾರಿ ಸುಂದರಿ ಇದ್ದಳು ಮಹಾರೂಪದಲಿ
ನಾರಿ ಹೋಗೋದ ಕಂಡು ಶೂರನಂಥ ಭೀಮರಾಯ
ಪೂರ ಮನಸಿಟ್ಟನು ಆಕಿಮೇಲೆ ಗೆಳೆಯನ ಕೇಳುತಲಿ

ಇಕಿ ಯಾರು ಹೇಳು ಅಂದನು

ಇಕಿಮ್ಯಾಲೆ ಮನಸ್ಸು ನಂದು ಪೂರ
ನಟ್ಟತಿ ಬಲ್ಬರ ಹೆಚ್ಚಾಯಿತೊ ವೀರ
ಒಂದು ರಾತ್ರಿ ಕಾಲ ಕಳೆಯುವೆನು

ಸೋಮ್ರಾಯಗತ್ತಿತೊ ಚಿಂತಿ ಮಾಡಲೇನ್‌ಗತಿ ಸಾಂಬಮೂರುತಿ
ಕೊಡಸದಿಲ್ಲ ಅಂದರೆ ನಾನು ಕೆಟ್ಟು ಹೋಗುತ್ತೈತಿ ಗೆಳೆತಾನ
ಗೆಳತಾನ ಕಳಕೊಂಡು ಮಾಡುವದೇನ ನಾಳೆ
ಕಂಡೇನಪ್ಪ ಇಂಥ ಹೆಂಡತೀನ

ಹೆಂಡ್ತಿ ಅಂತ ಹೇಳಿದಾರ ಗೆಳಿತಾನ ಕೆಟ್ಟು ಹೋಗುತದ
ಹೆಂಡ್ತಿ ಅಂತ ಹೇಳು ಬಾರದಂದಾನು
ಸೋಮ ಸೂಳಿಯಂಥ ಸುಳ್ಳು ಮಾತು ಹೇಳಿದನು
ಇಷ್ಟೇ ಒಂದೇ ಮಾತು ಕೇಳಿ ಸ್ಪಷ್ಟವಾಗಿ ಸೋಮ ಮನೆಗೆ ಬಂದು
ಪಟ್ಟದರಸಿ ನಿಂದಾಗ ಕೇಳುತಲಿ ಏ ಕಾಂತೆ ಕೇಳು

ನನ ಗೆಳೆಯ ಭೀಮ ಮನಸಿಟ್ಟ ನಿನ್ನೋಳು
ನೀ ಒಲ್ಲೆನನ್ನು ಬ್ಯಾಡ ನಾರಿ ನನ್ನ ಮಾತು ಕೇಳು
ನನ್ನಕಿಂತ ಹೆಚ್ಚು ಮಾಡಿ ಭಿನ್ನಬೇದವಿಲ್ಲದಂಗೆ
ಒಂದೇ ರಾತ್ರಿ ಸಲುವೆ ನಾರಿ ನಿನ್ನೋಳು ಎನ್ನ ಗೆಳೆಯನದೋಳು
ಕರುಣ ತಪ್ಪಿತೇನು ಕಾಂತ ನಿಂದು ನನ್ನೋಳು

ನೀ ಒಲ್ಲೆನನ್ನು ಬ್ಯಾಡ ನಾರಿ ನನ್ನ ಮಾತು ಕೇಳು

ನ ಇನ್ನಂಥ ಪುರುಷರಬಿಟ್ಟು ಅನ್ಯ ಪುರುಷರತ್ತ ಹೋಗಿ
ಭೋಗದಾಗ ಕೊಡೆಲೆಂಗಂದಾಳು

ಪತಿಯಾಜ್ಞೆ ಹಾನಿಯಾಗುತ್ತೈತಂದಳು
ಪತಿಯಾಜ್ಞೆ ಮೀರಿದರೆ ಅತಿದೋಷ ಬರುವದೆಂದು
ಗತಿಮೋಕ್ಷವಾಗಲಿಕ್ಕೆಲ್ಲೆಂದಾಳು ವಚನ ಕೊಟ್ಟಳು

ಗಂಡ ಹೆಂಡತಿ ಆಡ್ಯಾರು ಪ್ರೀತಿ ಮಾತ
ಇಬ್ರುಕೂಡಿ ತಾವು ನಕ್ಕೊಂತ

ಎಲೆ ಅಡಿಕೆಯೆಲ್ಲ ಸಹಿತ
ಅದರಾಗ ಗಂಧದಾವಿರಮಡಿ
ತಬಕ ತುಂಬಿ ಇಟ್ಟರ ಸಜ್ಜುಮಾಡಿ
ಹಾಸ್ಯಾರೊ ಮೆತ್ತನ ಲೇಪತಡಿ
ಸಮೆ ತುಂಬಿ ಇಟ್ಟರೊ ನಾಲ್ಕು ಕಡೆ
ಸಜ್ಜುಮಾಡಿ ಇಟ್ಟಾನ ಓರಿಯಕೆ ಗೆಳೆಯನ ಕರಿಲಿಕೆ
ಗರಿಡಿಯಾಲಯಕೆ

ಭೀಮರಾಯ ಬಂದ ನಕ್ಕೊಂತ।
ಇಬ್ಬರು ಕೂಡಿ ಮಾತನಾಡುತ।
ಸೂಳಿಮನಿ ಅದೇ ನೋಡಂತ
ತೋರಿಶ್ಯಾನೋ ಸೋಮ್ರಾಯ ದೂರನಿಂತ

ಭ್ರಾಂತಿ ಕೆಟ್ಟ ಭೀಮರಾಯ।
ಕಾಂತೆಮನಿ ಹೊಕ್ಕುನಿಂತು ನೋಡಿದನು ನಾಲ್ಕು ಸಮಗಳನ್ನು
ಮಂಚದ ಮೇಲೆ ಹಾಸಿದ ಲೇಪ ತಡಿಗಳನು
ಕಿಂಚಿತಾದ್ರೂ ಸಂಶಯವಿಲ್ಲದೆ
ಮಂಚದ ಮೇಲೆ ಹೋಗಿ ಕುಳಿತು
ಅಂಚೆ ಗಮನಿಬಾ ಯಂದು ಕರೆದಾನು।
ದೀಪಹೋಗುತದಬತ್ತಿಚಾಚಂದನು।

ಬೆರಳಿನಿಂದ ಬತ್ತಿಚಾಚಿ ಹುಟ್ಟಬಟ್ಟೆಗೊನ್ಯಾಳನಾರಿ
ದಿಟ್ಟವಿಡಿದ ಭೀಮರಾಯ ಖೂನವನು ಸೂಳಿ ಅಲ್ಲವೆಂದನು

ದಾರವುಳ್ಳ ಪತ್ನಿ ದಾವ ನೀನು ಪುರುಷನ ಸತಿ ಹೇಳು
ಚೂರು ಉಳಿಯದಂಗ ನಿನ್ನ ಖೂನವನು
ತಾಯಿ ಚೂರು ಉಳಿಯದಂಗ ಖೂನವನು

ನಾ ಮಾಡಿದ್ದೇನು ಎಂಥಾ ಕೆಟ್ಟ ಕೆಲಸವನು
ಮುಂಜಾಲೆದ್ದು ಮಾರಿಯೆಂಗ ತೋರಲೆಂದನು
ಗೆಳೆಯನ ಮುಂದೆ ಇನ್ನೇನು ಹೇಳಲಂದನು

ಅತ್ತಗಿತ್ತಾಗ ನೋಡುದೊರಳಗ ಗೂಟದ
ಮೇಲೆ ಇತ್ತು ಖಡ್ಗ ಹಸ್ತದಿಂದ ಭೀಮರಾಯ ತಗೊಂಡನು
ಖೂನ ಹಿಡಿದಾನು ಸೋಮರಾಯನ
ಖಡ್ಗವಿದು ಸೋಮರಾಯನ ಮನೆತನವಿದು
ಸೋಮರಾಯನ ಮಡದಿ ಹೌದೆಂದನು
ನಾ ಮಾಡಿದ್ದೇನು ಎಂಥ ಕೆಟ್ಟ ಕೆಲಸವನು
ಇದರಕೂಟ ಸಾಯುವುದು ಲೇಸೈತಿ ತಗೊಂಡನು
ಅದೇ ಕತ್ತಿ ಮಾಡೇನು ಪ್ರಾಣ ಹತಿ
ಖೂನಿಯಾಗಿ ಬಿದ್ರೈತ್ರಿ ಒಂದು ಹೆಣ ಮಂಚದ
ಮೇಲೆ ಬಿದ್ದೈತ್ರಿ ಒಂದು ಹೆಣ
ಮಡದಿ ಮಾಡುತಾಳ ಬಹುಶೋಕ ನಾಳೆ ಉದಯಕ
ಅಂಜಿಕೆ ಏನಿದಕ।
ಗಂಡ ಬಂದು ಕೊಲ್ಲುವನು ಎನ್ನ ಪ್ರಾಣ
ನೀ ಕಾಯೋ ನನ್ನ ಮುಕ್ಕಣ್ಣ ಅವನಿಗೆ ಮುನಿದನೋ
ಭಗುವಾನ
ಇದ್ರುಕೂಟ ಸಾಯ್ವೋದು ಲೇಸೈತಿ ತಗೊಂಡಳದೆ ಕತ್ತಿ
ಮಾಡ್ಯಾಳು ಪ್ರಾಣ ಹತ್ತಿ
ಖೂನಿಯಾಗಿ ಬಿದ್ದವು ಎರಡು ಹೆಣ
ಮಂಚದ ಮೇಲೆ ಬಿದ್ದವು ಜೋಡ್ಹೆಣ
ಸೋಮರಾಯ ಬಂದ ಮರುದಿನ
ನಿಂತಕೊಂಡು ನೋಡ್ಯಾನು ಆದ ರೀತಿ
ಬಿಟ್ಟು ಹೋದ್ಯೊ ಭಿಮ ಎನ್ನ ಜತಿ
ನಾ ಯಾರಕೂಟ ಆಡಲಿ ಕುಸ್ತಿ
ಅನುಕೂಲಕ ಸರಿಯಾದ ಹೆಂಡತಿ
ಯಾವಲ್ಲಿ ಸಿಕ್ಕಳೊ ಇಂಥಾ ಸತಿ
ಇಂಥವು ಹೋದಮ್ಯಾಲ ನಾನು ಇದ್ದು ಏನು
ಸಾರ್ಥಕ ತಗೊಂಡನದೆ ಕತ್ತಿ

ಕತ್ತಿ ತಗೊಂಡು ಕುತ್ತಿಗೆ ಕೊಯ್ಕೊಂಬೋವ್ಯಾಳದಲ್ಲಿ
ಬಂದು ಹಿಡಿದಾನು ಪರಮೇಶ್ವರ ಕೈಯ ತಾನು
ಮೂವರಿಗೆ ಮುಕ್ತಿ ಫಲ ಕೊಟ್ಟಾನು
ಶಿವ ಬಂದು ಮಾಯವಾಗಿ ಹೋದಾನು
ಈ ಕಥೆ ಸಾರಾಂಶ ಹೇಳಿದ ಹಳ್ಳಿಗುಡಿ ಸಂಗಣ್ಣನು

ಈ ಪದದ ರಚನಾಕಾರರು ಹಳ್ಳಿಗುಡಿ ಸಂಗಣ್ಣ.

ಸೋಮರಾಯ ಮತ್ತು ಭೀಮರಾಯ ಎಂಬುವರು ಬಹಳ ಆತ್ಮೀಯ ಸ್ನೇಹಿತರು. ಸೋಮರಾಯ, ಭೀಮರಾಯನಿಗೆ ಏನು ಕೇಳಿದರೂ ಸಹ ಕೊಡಲು ಸಿದ್ದನಾಗಿರುವಂತವನು. ಹೀಗಿರುವಾಗ ಒಂದು ದಿನ ಸಂಧಿಗ್ಧ ಪರಿಸ್ಥಿತಿಯಲ್ಲಿ ಸಿಲುಕಿಕೊಳ್ಳುತ್ತಾನೆ. ಈ ಒಂದು ಹಾಡಿನಲ್ಲಿ ತತ್ವಪದಕಾರರು ಗೆಳೆತನದ ಮರ್ಮವನ್ನು ತಿಳಿಸುತ್ತಾರೆ.

ಇಬ್ಬರು ಸ್ನೇಹಿತರ ಕಥಾಪ್ರಸಂಗವನ್ನು ನಾನು ಈ ಸಭೆಯಲ್ಲಿ ಹೇಳುವೆನು ಬಿಡಿಸಿ. ದಯವಿಟ್ಟು ಆಲಿಸಿರಿ ಸಮಾಜಬಾಂಧವರೆ.

ಸೋಮರಾಯ–ಭೀಮರಾಯ ಎಂಬ ಈರ್ವರು ಆತ್ಮೀಯ ಗೆಳೆಯರು. ಬಹಳ ಭಕ್ತಿಯಿಂದ ಮುಕ್ತಿ ಮಾರ್ಗವನ್ನು ಕಂಡುಕೊಂಡಂತವರು. ಸೋಮರಾಯನ ಮನೆ ಒಂದು ಓಣಿಯಲ್ಲಿ. ಭೀಮರಾಯನ ಮನೆ ಮತ್ತೊಂದು ಓಣಿಯಲ್ಲಿತ್ತು. ಊರಿನ ನಡುಮಧ್ಯದಲ್ಲಿ ವ್ಯಾಯಾಮ ಶಾಲೆ ಇತ್ತು. ಹೀಗಿರುವಾಗ ಸಾಯಾಂಕಾಲದ ವೇಳೆಗೆ ಇಬ್ಬರು ಸ್ನೇಹಿತರು ಪ್ರತಿನಿತ್ಯ ಇಲ್ಲಿಗೆ ಬಂದು ಸೇರುತ್ತಿದ್ದರು.

ಸೋಮರಾಯನ ಮನೆತನವನ್ನು ಭೀಮರಾಯ ನೋಡಿದ್ದಿಲ್ಲ. ಮತ್ತು ಭೀಮರಾಯನ ಮನೆತನವನ್ನು ಸೋಮರಾಯ ನೋಡಿರಲಿಲ್ಲ. ಆದ್ರೂ ಇವರಿಬ್ಬರಿಗೂ ಗೆಳೆತನವಾಗಿತ್ತು.

ಅಪರೂಪಕ್ಕೆ ಎಂಬಂತೆ ಒಂದು ದಿನ ಸೋಮರಾಯನ ಹೆಂಡತಿ ತಾಂಬೂಲ ತರಲು ಅಂಗಡಿಗೆ ಹೊರಟಿದ್ದಳು. ಇವಳು ಬಹಳ ಸುಂದರವಾಗಿದ್ದಳು. ಈಕೆಯನ್ನು ನೋಡಿದ ಶೂರನಂತ ಭೀಮರಾಯ ಸೋಮರಾಯನ ಕೌತುಕದಿಂದ ನೋಡಿದನು. ಆದರೆ ಗೆಳೆಯ ಸೋಮರಾಯನ ಹೆಂಡತಿ ಎಂಬುದು ಇವನಿಗೆ ತಿಳಿದಿರಲಿಲ್ಲ. ಆಕೆಯ ಮೇಲೆ ಪೂರ್ಣ ಮನಸ್ಸಿಟ್ಟು ಗೆಳೆಯನನ್ನು ಹೀಗೆ ಕೇಳುತ್ತಾನೆ.

ಗೆಳೆಯ ಈಕೆ ಯಾರು ಹೇಳು. ಈಕೆಯ ಮ್ಯಾಲೆ ನನಗೆ ಮನಸು ಆಗೇದ. ಈಕೆಯೊಂದಿಗೆ ಒಂದು ರಾತ್ರಿ ಕಳೆಯುವ ಹಂಬಲ ಹೆಚ್ಚಿದೆ ಎಂದು ಸೋಮರಾಯನಲ್ಲಿ ತಿಳಿಸಿದನು.

ಆಗ ಸೋಮರಾಯ ಬಹಳ ಇಕ್ಕಟ್ಟಿನಲ್ಲಿ ಸಿಕ್ಕಿಕೊಂಡು ಚಿಂತಿ ಮಾಡಲಾರಂಭಿಸಿದನು. ಆದರೆ ಗೆಳೆಯನ ಮಾತಿಗೆ ನಿರಾಕರಿಸುವ ಮನಸ್ಸು ಈತನದಾಗಿರಲಿಲ್ಲ. ಕೊನೆಗೂ ಗೆಳೆತನವನ್ನು ಕಳೆದುಕೊಳ್ಳಲು ತನ್ನ ಹೆಂಡತಿ ಎಂದು ಹೇಳಿಕೊಳ್ಳದೇ ಆಕೆಯು ಸೂಳೆ ಅಂತ ಸುಳ್ಳು ಮಾತು ಹೇಳುತ್ತಾನೆ.

ಸೋಮರಾಯ ಮನೆಗೆ ಬಂದು ತನ್ನ ಹೆಂಡತಿಯ ಮುಂದೆ ನನ್ನ ಗೆಳೆಯ ನಿನ್ನನ್ನು ಮೆಚ್ಚಿದ್ದಾನೆ. ಹೀಗಾಗಿ ನನಗೆ ನನ್ನ ಗೆಳೆಯನನ್ನು ಕಳೆದುಕೊಳ್ಳಲು ಇಷ್ಟವಿಲ್ಲ. ಅದಕ್ಕಾಗಿ ದಯವಿಟ್ಟು ನೀನು ಯಾವುದೇ ಭೇದಭಾವವಿಲ್ಲದೆ ಅವನ ಜೊತೆಗೆ ಒಂದು ರಾತ್ರಿ ಕಳೆದು ಬಿಡು ಎಂದು ಹೇಳಿದನು.

ಆಗ ಸೋಮರಾಯನ ಹೆಂಡತಿ ಒಲ್ಲೆನೆಂದು, ನಿನ್ನನ್ನಲ್ಲದೇ ನಾನು ಯಾರನ್ನು ಪ್ರೀತಿಸುವುದಿಲ್ಲ. ನಿನ್ನಂತಹ ಪುರಷನನ್ನು ಬಿಟ್ಟು ಅನ್ಯ ಪುರುಷರ ಹತ್ತಿರ ಹೋಗಿ ಬೋಗದಾನ ಹೇಗೆ ಕೊಡಲಿ ಎಂದಳು. ಆದಾಗ್ಯೂ ಪತಿಯಾಜ್ಞೆ ಮೀರಿದರೆ, ಅತಿದೋಷ ಬರುವುದೆಂದು ಭಾವಿಸಿ ಗತಿಮೋಕ್ಷ ಸಿಗುವುದಿಲ್ಲವೆಂದು ತಿಳಿದು ವಚನಕೊಟ್ಟಳು.

ಗಂಡ ಆಜ್ಞೆಯಂತೆ ಆಕೆ ಒಲ್ಲದ ಮನಸ್ಸಿನಿಂದ ಒಪ್ಪಕೊಂಡು ರಾತ್ರಿ ಕಳೆಯಲು ಎಲ್ಲಾ ಸಿದ್ಧತೆ ಮಾಡಿದಳು. ಮಂಚದ ಮೇಲೆ ಲೇಪತಡಿ ಹಾಸಿ, ಸಿಂಗರಿಸಿ ಸಂಪೂರ್ಣ ರಾತ್ರಿಯನ್ನು ಕಳೆದರು. ಬೆಳಗ್ಗೆ ಎದ್ದಾಕ್ಷಣ ಭೀಮರಾಯನು, ಸೋಮರಾಯನ ಖಡ್ಗ ಕೋಣೆಯಲ್ಲಿರುವುದು ಕಂಡು ತಪ್ಪು ಮಾಡಿದೆ ನಾನು. ಗೆಳೆಯನಿಗೆ ಮೋಸ ಮಾಡಿದೆ ಎಂದು ತಿಳಿದ ಕೂಡಲೇ ಭೀಮರಾಯ ಆತ್ಮಹತ್ಯೆ ಮಾಡಿಕೊಂಡನು. ನಂತರದಲ್ಲಿ ಸೋಮರಾಯನ ಪತ್ನಿ ಕೂಡಾ ಗಂಡನಿಗೆ ಮುಖ ತೋರಿಸಲು ಸಾಧ್ಯವಾಗದೇ ಅವಳೂ ಆತ್ಮಹತ್ಯೆ ಮಾಡಿಕೊಳ್ಳುವಳು. ಇಬ್ಬರ ದೇಹಗಳೂ ಮಂಚದ ಮೇಲೆ ಬಿದ್ದವು. ಅಷ್ಟರಲ್ಲಿ ಸೋಮರಾಯ ಬಂದು ನೋಡಿದ ಕೂಡಲೇ ಆಶ್ಚರ್ಯಚಕಿತನಾಗಿ ತಾನೂ ಕೂಡಾ ಖತ್ತಿಯಿಂದ ಆತ್ಮಹತ್ಯೆ ಮಾಡಿಕೊಳ್ಳಲು ಪ್ರಯತ್ನಿಸುವನು. ಆಗ ಶಿವ ಪ್ರತ್ಯಕ್ಷನಾಗಿ ಸಾವನ್ನು ತಪ್ಪಿಸಿ ಮೂವರಿಗೂ ಮರುಜನ್ಮ ನೀಡುತ್ತಾನೆ.

ಒಟ್ಟಿನಲ್ಲಿ ಇಲ್ಲಿ ಸ್ನೇಹಿತರ ಪಾವಿತ್ರತೆ ಮತ್ತು ಅವರು ಇಟ್ಟಂತಹ ವಿಶ್ವಾಸದ ಬಗ್ಗೆ ಬಹಳ ಮಾರ್ಮಿಕವಾಗಿ ಹೃದಯಂಗಮವಾದ ಕರುಣಾಜನಕ ಸ್ಥಿತಿಯನ್ನು ಹಳ್ಳಿಗುಡಿ ಸಂಗಣ್ಣನು ಚಿತ್ರಿಸಿದ್ದಾನೆ.

೨೪. ವಡವಿ ಆಸಿಗೆ ಹುಡುಗನ ಕೊಂದರು

ಗದುಗಿನ ಒಳಗೆ ಗೋವಿಂದ ಅಂತರವರು ಇದ್ದಾರಣ್ಣ ತಮ್ಮರು
ಊರುಗೆ ದೊಡ್ಡ ಸಾಹುಕಾರರು

[illegible]

[illegible]

[illegible]

[illegible]

[illegible]

ಅಣ್ಣ ತಮ್ಮ ಅವ್ವಿಬ್ರಾಳ ಕೂಡಿ
ಮಾತನಾಡ್ಯಾರು ಮನಿಯಾಗ
ಗಂಡು ಮಕ್ಕಳಿಲ್ಲೋ ನಮ್ಮಗ
ಬದುಕು ಬಾಳ್ವಿಗೆ ಬೆಂಕಿ ಹಚ್ಚಲಿ
ಭೂಮಿಯ ಮೇಲೆ ದೇವರು
ನಮ್ಮನು ಏಕೆ ಹುಟ್ಟಿಸಿದೆಂಬರು
ಹೊನ್ನು ಹಣಕ್ಕೆ ಬೆಂಕಿ ಹಚ್ಚಲಿ
ಭೂಮಿ ಮೇಲೆ ದೇವರು
ನಮ್ಮನು ಏಕೆ ಹುಟ್ಟಿಸಿದೆಂಬರು
ಮಣ್ಣಿನಕಾಯ ಮಣ್ಣಿಗೋದಾರೆ
ಮನಿಮಾರು ಯಾರಿಗೆ
ಒಪ್ಪಿಸಬೇಕೆಂದರು ಮನದೊಳಗೆ

ಇತ್ತ ತಂದಿಯ ಹೊಟ್ಟೇಲಿ ಒಬ್ಬ
ಮಗ ಇದ್ದನಾವಗ
ಸರವರು ತಂದಿಟ್ಟುರು ಬದುಕಿಗೆ
ಆರು ವರುಷದ ಹುಡುಗನ ಮೈಮೇಲೆ
ಮೂರು ಸೇರು ಬಂಗಾರ
ಮುತ್ತಿನ ಕಂಠಿಗೆಜ್ಜೆ ಉಡುದಾರ
ಸೇರೆ ಸೇರಿಗೆ ಕಡೆವು ಸರಪಣಿ
ಹಾಲಗಡಗದುಂಗುರು
ಕೊರಳೊಳು ಹಾಕಿದರು ಮುತ್ತಿನ ಸರ
ಮಕಮಲ ಅಂಗಿ ಮ್ಯಾಲ ಡಾಗಿನ
ತೊಡಿಸಿದಾರು ಮೈಯಾಗ
ತಲೆಮೇಲೆ ಸುತ್ತಿದಾರು ಮಂಜುರ
ಸಣ್ಣ ಹುಡುಗನ ಶೃಂಗಾರಮಾಡಿ
ಕಳುವಿದರು ಸಾಲಿಗೆ
ಮೂರುಮಂದಿ ಕೊಟ್ಟರು ಕಾವುಲ

ಓಣಿ ಕೇರಿಗುಂಟ ಕಾಯುತ್ತ ಹುಡುಗನ
ಕರಿತರ ಒಂದು ಬಜಾರ
ಬಜಾರದೊಳಗ ಇತ್ತಿ ಕ್ವಾಮ್ವಿಗಾರ
ಕ್ವಾಮ್ವಿಗಾರ ಹುಡುಗನ ಕೈಯೊಳಗಿತ್ತಿರಿ
ಬಾಳೆಹಣ್ಣಿನ ಗೊನಿ
ತಿರಳರಗೂರಿಬಿಟ್ಟನು ಅವರ್ಮನಿ

ಬಾರೊ ಬಾರೊ ಎಂದು ಒಳಾಕ ಕರೆದು
ಬಾಯಿ ಮುಚ್ಯಾರು ಬಲ್ಬರ
ಹುಡುಗ ಒದರಿತು ತಾಯಿ ತಂದಿನ
ಹುಡುಗ ನೆನಿಸಿತು ತಾಯಿ ತಂದಿನ
ಹೊಡಿಯ ಬೇಡಿರೊ ಭಾವನ ಕರೆದು
ಕೊಡುವೆನು ಹಣ ಅಂದಿತು
ಭೂಮಿ ಮೇಲೆ ಬಿದ್ದು ಉರುಳಿತು

ಸಣ್ಣ ಮರುಳ ಶಿವ ಮುನಿದನೊ
ಮರಣ ಬಂದಿತ್ರಿ ಗುರುವಾರ
ಬ್ರಹ್ಮ ಹರಿದು ಬಿಟ್ಟ ಪತ್ರ

ಹಡೆದ ತಾಯಿ ತಂದಿ ಓಡೋಡಿ ಬಂದು
ಬಡಕೊಂಡರು ಹಣಿ ಹಣಿ
ಎತ್ತಲ ಹೋದಿತು ಮುತ್ತಿನ ಇಣಿ

ಊರ ಮುಂದಿನ ಗುಡಿಯ ಗುಂಡಾರ
ಹುಡುಕುತಾರ ಶೋಷಣಿ
ಯಾವಲ್ಲಿ ಕೇಳಲಿ ಕೂಸಿನ ಧ್ವನಿ
ದೇಶ ಬಿಟ್ಟು ಪರದೇಶಕೋದರೆ
ಎಲ್ಲಿ ಕಾಣಲಿಲ್ಲ ಗಿಣಿ
ಎನ್ನ ಮಾತಿನ ಮೋಹದ ಗಿಣಿ

ನೆತ್ರದಿಂದ ನೆರಳ ಕೂಡಿಸನ ನೋಡಿದಾನು ಫೌಜ್ದಾರ
ಮನದೊಳಗಲ್ಲುತಿಂದನು ಕರಕರ

ಊರಿನ ರೈತರು ಬಂದು ನಿಂದು ನೋಡಿದಾರು ಆವಾಗ
ಇಂಥವರಿರುಬಾರದು ಊರಾಗ
ಸರಕಾರದಿಂದ ಹುಕುಂ ಬಂದಿತ್ರಿ
ಸರುವರು ಬಿಡಸದಲ್ಲಿಗೆ
ಮೊದಲು ಕಳಿಸಿಕೊಡಿರಿ ಗಲ್ಲೀಗೆ

ಹಿರಿಯ ಬೂದ್ಯಾಳ ದೊರೆಯು ಬಸಣ್ಣನ
ಕರುಣ ಇತ್ರಿ ಅವರಿಗೆ
ಸರುವರು ಉಳಿದುಕೊಂಡರು ಊರಿಗೆ

ಮಗನ ಪ್ರಾಣವ ದೇವ ಬಲ್ಲನು
ಮತ್ತೆ ಕಾವರಿಬ್ಬರು
ಊರಿಗೆ ದೊಡ್ಡ ಸಾಹುಕಾರರು

ಇಲ್ಲಿ ತತ್ವಪದಕಾರರು ತಮ್ಮ ವಿಚಾರಧಾರೆಯಲ್ಲಿ ಗದ್ದುಗೆ ಎಂಬ ಊರಿನ ಅಂದರೆ ಈಗಿನ ಗದಗ ಶಹರದಲ್ಲಿ ಗೋವಿಂದ ಗುರುಗೋವಿಂದರಂತಹ ಎಂಬ ಈರ್ವರು ಶ್ರೀಮಂತ ಅಣ್ಣ ತಮ್ಮಂದಿರು ಇದ್ದರು. ಇವರಿಬ್ಬರಿಗೂ (ಮನೆಯಲ್ಲಿ) ಗಂಡುಮಕ್ಕಳಿರುವುದಿಲ್ಲ. ಆಗ ಇಬ್ಬರೂ ಸೇರಿ ಮಾತನಾಡಿಕೊಳ್ಳುತ್ತಾರೆ. ಈ ಭೂಮಿಯಲ್ಲಿ ದೇವರು ನಮ್ಮನ್ನು ಯಾಕಾದರೂ ಹುಟ್ಟಿಸಿದ್ದಾರೋ ಎನ್ನುತ್ತಾರೆ. ಈ ಭೂಮಿ ಮೇಲೆ ಹುಟ್ಟಿ ಭೂಮಿಯಲ್ಲೇ ಈ ದೇಹ ನಾಶವಾಗಿ ಹೋದರೆ ನಮ್ಮ ಮನೆಯನ್ನು ಯಾರಿಗೆ ಒಪ್ಪಿಸಬೇಕು ಎಂದು ಚಿಂತಿಸತೊಡಗಿದರು.

ಇತ್ತ ಕಡೆ ತಂದೆ ಹೊಟ್ಟೇಲಿ ಒಬ್ಬ ಮಗನಿದ್ದನು. ಆಗ ಇನ್ನೂ ಅವನು ಆರು ವರ್ಷದ ಬಾಲಕ ಅವನ ಮೈಮೇಲೆ ಹಾಕಿದರು ಮೂರು ಸೇರು ಬಂಗಾರ, ಮುತ್ತಿನ ಕಂಠಿ, ಗೆಜ್ಜೆಯ ನಡುಪಟ್ಟಿಯನ್ನು ಕಟ್ಟಿದರು. ಕಾಲಗಡಗ ಮತ್ತು ಉಂಗುರ ಎಂಬ ಬಂಗಾರದ ಆಭರಣಗಳನ್ನು ತೊಡಿಸಿದರು. ಕೊರಳಲ್ಲಿ ಮುತ್ತಿನ ಸರ ಹಾಕಿದರು. ಈ ರೀತಿ ಸಿಂಗರಿಸಿ ಮಗುವನ್ನು ಮೂರು ಮಂದಿ ಕಾವಲಿನೊಂದಿಗೆ ಶಾಲೆಗೆ ಕಳುಹಿಸಿದರು.

ಒಂದು ದಿನ ಮಗು ಆಟ ಆಡುತ್ತಾ ಬೀದಿಯಲ್ಲಿ ಸಮವಯಸ್ಕರೊಂದಿಗೆ ದಿನವೆಲ್ಲಾ ಕಳೆಯಿತು. ಸಾಯಂಕಾಲವಾದರೂ ಮನೆಗೆ ಬರದ ಮಗನನ್ನು ಕುರಿತು ತಂದೆ ತಾಯಂದಿರಿಗೆ ಚಿಂತೆ ಆರಂಭವಾಯಿತು. ಊರೆಲ್ಲಾ ಹುಡುಕಿದರೂ ಮಗ ಸಿಗದೇ ಇದ್ದಾಗ ತಂದೆ ತಾಯಿಗಳು ಪೇಚಿಗೆ ಸಿಲುಕುತ್ತಾರೆ. ಮಗುವನ್ನು ಕೊಮಟರೂ ಮನೆಯೊಳಗೆ ಅಡಗಸಿಟ್ಟಿರುತ್ತಾರೆ. ಆಗ

ಮಗುವನ್ನು ಒತ್ತಾಯ ಪೂರ್ವಕವಾಗಿ ಒಳಗಡೆ ಕರೆದು ಮೈಮೇಲಿನ ಎಲ್ಲ ಆಭರಣಗಳನ್ನು ದೋಚಲು ಪ್ರಾರಂಭಿಸುತ್ತಾ ಮಗು ನಿರಾಕರಿಸಿದಾಗ ಮಗುವನ್ನು ಶಿಕ್ಷಿಸಲು ಪ್ರಾರಂಭಿಸುತ್ತಾರೆ.

ಮಗುವಿಗೆ ಶಿಕ್ಷಿಸಲು ಪ್ರಾರಂಭಿಸಿದಾಗ ನನಗೆ ಹೊಡೆಯಬೇಡಿರಿ, ಹಣ, ಒಡವೆಯನ್ನು ಕೊಡುತ್ತೇನೆ ಎಂದು ಹೇಳುತ್ತದೆ. ಶಿವನು ಕಾಪಾಡು ಎಂದು ಕೂಗಿಕೊಂಡರೂ ಯಾರು ಓಗೋಡಲಿಲ್ಲ ಅವನ ಕೂಗಿಗೆ ಎಂದು ಹೇಳುತ್ತಾರೆ.

ಮಗುವಿನ ತಂದೆ ತಾಯಿ ಓಡೋಡಿ ಬಂದು ಹಣೆ ಹಣೆ ಬಡಿದುಕೊಂಡು ಮಗುವನ್ನು ಹುಡುಕಲು ಪ್ರಾರಂಭಿಸಿದರು. ಊರೊಳಗೆ, ಗುಡಿ ಗುಂಡಾರಗಳಲ್ಲಿ ಹುಡುಕಿದರೂ ಮಗುವಿನ ಸುಳಿವು ಸಿಗುವುದಿಲ್ಲ. ಯಾರು ಅಪಹರಿಸಿದರು ಎನ್ನ ಮಗುವನ್ನು ಎಂದು ಗೋಳಿಡುತ್ತಾರೆ. ಆಗ ಕೋಮಟಿಗರ ಮನೆಯಲ್ಲಿರುವುದು ತಿಳಿಯುತ್ತದೆ.

ಮಗುವಿನ ದೇಹ ರಕ್ತದಿಂದ ಕೂಡಿದ್ದನ್ನು ನೋಡಿದ ಫೌಜುದಾರ ಮನದೊಳಗೆ ಹಲ್ಲು ಕಡಿಯುತ್ತಾನೆ. ಊರಿನ ಎಲ್ಲಾ ರೈತರು ಬಂದು ನಿಂತು ನೋಡಿ, ಆವಾಗ ಇಂಥವರು ಇವರು ಊರಾಗ ಇರಬಾರದು ಎಂದು ಮಾತನಾಡಿಕೊಳ್ಳುತ್ತಾರೆ.

ಸರಕಾರದಿಂದ ಆಜ್ಞೆ ಬಂದಿದೆ. ಇಂತಹ ಕ್ರೂರ ಮನುಷ್ಯರನ್ನು ಮೊದಲು ಗಲ್ಲಿಗೆ ಹಾಕಿರಿ ಎಂದು ಹೇಳಿದರು. ಬೂದಿಹಾಳದ ಬಸವಣ್ಣನ ಕರುಣೆಯು ನಮ್ಮ ಮೇಲಿದೆ. ಮಗುವನ್ನು ಖಂಡಿತ ಬದುಕಿಸಿಯೇ ತಿರುತ್ತಾನೆ ಎಂದು ಹೇಳುವುದರಲ್ಲಿಯೇ ಶಿವನು ಪ್ರತ್ಯಕ್ಷ್ಯನಾಗಿ ಮಗುವಿಗೆ ಪುನರ್ ಜನ್ಮ ನೀಡುತ್ತಾನೆ.

೨೫. ಮಂಗಳವಾಗಿಹದೆ ಜಯ ಜಯ

ಮಂಗಳವಾಗಿಹದೆ ಜಯ ಜಯ
ಮಂಗಳವಾಗಿಹದೆ ॥ಪ॥

ಕಂಗಳ ಕೊನೆಯಲಿ ತಳ ತಳ ಹೊಳೆಯುವ
ತಿಂಗಳು ಬೆಳಕಿನ ತಿಳಿರಸ ಉಜ್ವಲ ॥ಅಪ॥

ರವಿ ಶಶಿ ತಾರೆಗಳು ಬೆಳಗುವ
ಪರಿಮಳ ಚಿತ್ಕಳೆಯೊ
ಕವಿಯೊಳಗೊರಗೊಂದ್ ಎಂಬದು ತೋರ್ಪದು ॥೧॥

ವಿರತಿ ಎಂಬುವ ಭಕ್ತಿ
ನಿರತವಾಗುವ ತೈಲ

ಎರಡು ಒಂದಾಗಿಹ ಅರಿವೆಂಬ ಜ್ಯೋತಿ
ಅವಿರಳ ಮಹಾಗುರು ಲಿಂಗನ ನೆನೆಯುತ ॥೨॥

ಈ ಮಂಗಳಾರತಿ ಪದವು ಮಹಾಗುರುಲಿಂಗರದಾಗಿದೆ. ಈ ಹಾಡಿನಲ್ಲಿ ತತ್ವಪದಕಾರ ತಾರಕ ಯೋಗದ ಅನುಭವವನ್ನು ಹಿಡಿದಿಟ್ಟಿದ್ದಾರೆ.

ಯೋಗಾನುಭವವನ್ನು ಪಡೆದು ಸಾಧಕ ತನ್ನ ಗುರಿ ಸಾಧಿಸಿ ಮಂಗಳವಾಗಿದೆ. ಜಯ ಜಯ ಎಂದು ಹಾಡುತ್ತಾರೆ. ಅದು ಹೇಗೆ ಆಯಿತು ಎನ್ನುವುದನ್ನು ಈ ರೀತಿ ನಿರೂಪಿಸಿದ್ದಾನೆ.

ಕಂಗಳ ಕೊನೆಯಲಿ ಥಳಥಳ ಹೊಳೆಯುವ ತಿಂಗಳ ಬೆಳಕಿನಲ್ಲಿ ತಿಳಿರಸ ಉಜ್ವಲು ತಾರಕಯೋಗದಲ್ಲಿ ತನ್ನ ದೃಷ್ಟಿಗೆ ಗೋಚರವಾದ ಪ್ರಕಾಶದ ವಿವರವನ್ನು ಥಳಥಳ ಹೊಳೆಯುವ ಚೆಂದಿರನ ತಂಪಾದ ಕಿರಣಗಳುಳ್ಳ ಬೆಳಕಿನ ತಿಳಿರಸಕ್ಕೆ ಮಾರುಹೋಗಿ ಆನಂದದಿಂದ ಹಾಡಿದಂತೆ ಕಂಡುಬರುತ್ತದೆ.

ಮುಂದುವರೆದು ಸೂರ್ಯ, ಚಂದ್ರ, ನಕ್ಷತ್ರಗಳು ಬೆಳುಗುವ ಬೆಳಕಿನಂತೆ ಪರಿಮಳ ಚಿತ್ಕಳೆಯನ್ನೊಳಗೊಂಡು ಒಳಹೊರಗೆ ಒಂದಾಗಿ ತೋರುವುದನ್ನು ಗುರುತಿಸುತ್ತಾನೆ. ಇಂತಹ ಅನುಭವವನ್ನು ಪಡೆಯಲಿಕ್ಕೆ ವಿರತಿ ಎಂಬುವ ಭಕ್ತಿ ನಿರತವಾಗುವ ತೈಲ ಎರಡೂ ಒಂದಾಗಿರುವ ಅರಿವೆಂಬ ಜ್ಯೋತಿ ಅವಿರಳವಾಗಿರುವಾಗ ಮಹಾಗುರುಲಿಂಗನ ನೆನೆಯುತ ಮಂಗಳವಾಗಿದೆ ಜಯ ಜಯವೆಂದು ಹಾಡುತ್ತಾನೆ.

ಅಡಿಟಿಪ್ಪಣಿಗಳು

೧. ಬಸವರಾಜ ಸಬರದ (ಸಂ); ಹೈದರಬಾದ್ ಕರ್ನಾಟಕದ ತತ್ವಪದಗಳು; ಪುಟ–೭

೨. ಅದೇ, ಪುಟ–೮

೩. ಅದೇ, ಪುಟ–೯ ರಿಂದ ೧೧

೪. ಎಚ್.ಎಲ್.ನಾಗೇಗೌಡ (ಸಂ); 'ಹಾವು ತುಳಿದೆನೆ'; ಶ್ರೀ ಆದಿಚುಂಚನಗಿರಿ ಗ್ರಾಮಗೀತೆ ಮಾಲಿಕೆ–೨.

ಅಧ್ಯಾಯ ನಾಲ್ಕು

ವಚನಕಾರರ, ದಾಸರ ಹಿನ್ನೆಲೆಯಲ್ಲಿ ಮಾರೆಪ್ಪ ಚೆನ್ನದಾಸರು ಹಾಡಿರುವ ತತ್ವಪದಗಳ ತಾತ್ವಿಕ ವಿವೇಚನೆ

ವಚನಕಾರರ, ದಾಸರ ಹಿನ್ನೆಲೆಯಲ್ಲಿ ಮಾರೆಪ್ಪ ಚೆನ್ನಪ್ಪದಾಸರು ಹಾಡಿರುವ ತತ್ವಪದಗಳ ತಾತ್ವಿಕ ವಿವೇಚನೆ

"ಕರ್ನಾಟಕ ಸಾಂಸ್ಕೃತಿಕ ಇತಿಹಾಸದಲ್ಲಿ ೧೯ನೆಯ ಶತಮಾನದ ಕೊನೆಯ ತಲೆಮಾರಿಗೆ ಒಂದು ವಿಶಿಷ್ಟ ಸ್ಥಾನವಿದೆ. ಅನೇಕ ಸತ್ಪುರುಷರ ಪ್ರಾದುರ್ಭಾವದ ಕಾಲವದು. ಈ ಆಧ್ಯಾತ್ಮಿಕ ಕೃಪಾ ಛತ್ರದ ಶ್ರೇಯಸ್ಸಿನಲ್ಲಿಯೇ ಒಂದು ರೀತಿಯಿಂದ ಇಂದಿನ ಕನ್ನಡ ಸಾಹಿತ್ಯಕ್ಕೆ ಪ್ರಾರಂಭವಾಯಿತು ಎಂದು ಡಾ. ವಿ.ಕೃ.ಗೋಕಾಕರು ಹೇಳಿರುವುದು ಸೂಕ್ತವಾಗಿದೆ. ಪುರೋಹಿತ ಶಾಹಿಯ ಭದ್ರವಾದ ನೆಲೆಯಾಗಿದ್ದ ವರ್ಣ ವ್ಯವಸ್ಥೆಗೆ ಪೂರ್ಣ ವಿರೋಧವಾದ ಈ ಪಂಥ ಎಲ್ಲ ಮನುಷ್ಯರಿಗೂ ಸಾಮಾಜಿಕ-ಧಾರ್ಮಿಕ ಸಮಾನತೆಯ ಅಂಶವನ್ನು ಘೋಷಿಸಿದವು. 'ಸರ್ವಂ ಖಲಿದ್ವಂ ಬ್ರಹ್ಮಂ' ಎಂಬ ಉಪನಿಷದ್ವಾಕ್ಯವನ್ನು ಅಕ್ಷರಶಃ ಪರಿಪಾಲಿಸಿದವರು ತತ್ವಪಾದಕರರು."[೧]

ಮಾರೆಪ್ಪ ಚೆನ್ನದಾಸರು ಹಾಡುವ ತತ್ವಪದಗಳು ಸರಳವಾಗಿವೆ. ಪ್ರಾಮಾಣಿಕವಾದ ಧಾರ್ಮಿಕ ಕಳಕಳಿಯಿಂದ ಕೂಡಿವೆ. ಮಾನವೀಯ ಅನುಕಂಪೆಯನ್ನೊಳಗೊಂಡಿವೆ. ಹೀಗಾಗಿ ಮುಮುಕ್ಷುಗಳ ಮನೋರಂಗದಲ್ಲಿವು ನಾಟುತ್ತವೆ. ಇದನ್ನು ಎತ್ತರದ ಧ್ವನಿಯಲ್ಲಿ ಮಧುರವಾಗಿ ಹಾಡಿದಾಗ ಒಂದು ವಿಶೇಷ ಆಧ್ಯಾತ್ಮಿಕ ವಾತಾವರಣವೊಂದನ್ನು ಸೃಷ್ಟಿಸಿ ಸಹೃದಯರನ್ನು ತನ್ಮಯರನ್ನಾಗಿ ಮಾಡಿಬಿಡುತ್ತವೆ. 'ನಮ್ಮ ಸುತ್ತಲ' ಸಮಾಜದಲ್ಲಿ ನಡೆಯುತ್ತಿದ್ದ ಪ್ರತಿಯೊಂದು ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಜಾತಿ, ಮತ, ಪಂಥ ಇವುಗಳನ್ನೊಂದೂ ಲೆಕ್ಕಿಸದೇ ಬಹು ಆಸ್ಥೆಯಿಂದ ಭಾಗವಹಿಸಿ ಎಲ್ಲರಿಗೂ 'ಬೆಲ್ಲದ ಹೇರಾಗಿ, ಜನಮನದಲ್ಲಿ ಚಿರಸ್ಥಾಯಿಯಾಗಿ ನೆಲೆಗೊಂಡರು' ಎಂದು ಹೇಳಬಹುದು.

"ಕನ್ನಡ ತತ್ವಪದಗಳಲ್ಲಿ ಆಧ್ಯಾತ್ಮಿಕ ದೃಷ್ಟಿಕೋನ ಭಾರತದ ಪರಂಪರಾಗತ ಆಧ್ಯಾತ್ಮಕ ದೃಷ್ಟಿಕೋನಕ್ಕಿಂತ ಭಿನ್ನವೇನಲ್ಲ. ಇದು ಹಿಂದಿನದರ ಸರಳೀಕೃತ ಪುನರ್ನಿರೂಪಣೆಯೇ ಆಗಿದೆ. ಆದ್ದರಿಂದ ಕನ್ನಡ ತತ್ವಪದಕಾರರ ಆಧ್ಯಾತ್ಮಿಕ ದೃಷ್ಟಿಯ ವಿವರಣೆ ಎಂದರೆ ಸ್ಥೂಲಾರ್ಥದಲ್ಲಿ, ಅದು ಭಾರತೀಯ ಆಧ್ಯಾತ್ಮಿಕ ನೆಲೆಯ ನಿರೂಪಣೆಯೇ ಆಗಿಬಿಡುತ್ತದೆ.

[illegible]

[illegible]

[illegible]

[illegible]

[illegible]

ತತ್ವಪದಕಾರರ ದೃಷ್ಟಿಯಲ್ಲಿ ಬದುಕೆಂದರೆ – ಹಲವು ನಿಲ್ದಾಣಗಳನ್ನೊಳಗೊಂಡ ಒಂದು ದೀರ್ಘ ಪಯಣ. ಮರಣಗಳು ಈ ಪಯಣದ ನಡುನಡುವಿನ ನಿಲುಗಡೆಗಳಾದರೆ ಮುಕ್ತಿಯೇ ಇದರ ಕೊನೆಯ ನಿಲ್ಮನೆ. ನಡುವಿನೆರಡು ನಿಲ್ಮನೆಗಳ ನಡುವಿನ ಪಯಣವೇ ಪ್ರೀತಿ ಜನ್ಮದ ಬದುಕು"[೨]

ಮಾರೆಪ್ಪ ಚೆನ್ನದಾಸರು ಹಾಡಿರುವ ತತ್ವಪದಗಳಲ್ಲಿ ಆಧ್ಯಾತ್ಮಿಕ ನಿಲುವಿನ ಮುಖ್ಯಾಂಶಗಳನ್ನು ಸಂಗ್ರಹಿಸಿದಾಗ –

೧. ಇವರ ಆಧ್ಯಾತ್ಮಿಕ ದೃಷ್ಟಿ ಭಾರತದ ಪರಂಪರಾಗಡ ಆಧ್ಯಾತ್ಮಿಕತೆಯ ಮುಂದುವರಿಕೆಯೇ ಆಗಿದೆ.

೨. ಆತ್ಮನು ಭವಚಕ್ರದಲ್ಲಿ ತೊಳಲುತ್ತಿರುತ್ತಾನೆ. ಮುಕ್ತಿಯೇ ಆತ್ಮನ ನಿಜವಾದ ಗುರಿ.

೩. ಭಕ್ತಿ, ಜ್ಞಾನ, ವೈರಾಗ್ಯಗಳು ಮುಕ್ತಿ ಸಾಧನೆಗೆ ಅಡಿಗಲ್ಲುಗಳು

೪. ಮೋಕ್ಷ ಸಾಧನೆಗೆ ಸಂಸಾರಕ್ಕಿಂತ ವಿರಾಗಿ ಜೀವನವೇ ಶ್ರೇಯಸ್ಕರ.

೫. ಸಾಧನೆಗೆ ಗುರುವೊಬ್ಬನ ಮಾರ್ಗದರ್ಶನ ಅತ್ಯಗತ್ಯ, ಸಾಧಕ ಅಂಥ ಗುರುವನ್ನು ಹುಡುಕಿಕೊಂಡು ಅವನ ಪದತಲದಲ್ಲಿ ತನ್ನದೆಲ್ಲವನ್ನೂ ಅರ್ಪಿಸಬೇಕು. ಅದಿಲ್ಲದೇ ಮೋಕ್ಷ ಪ್ರಾಪ್ತಿ ಅಸಾಧ್ಯ

೬. ಸದಾಚಾರ ಅತಿಮುಖ್ಯ. ಪೂಜೆ ಇದರ ಒಂದು ಅಂಗ, ಒಂದು ಹಂತದವರೆಗೆ ಬಾಹ್ಯ ಪೂಜೆ ಅಗತ್ಯ. ಅನಂತರ ಅದಿಲ್ಲದೆಂದೂ ಭಕ್ತ ಭಗವತ್ಸಂಪರ್ಕ ಪಡೆಯಬಲ್ಲ. ಈ ಸಾಯುಜ್ಯವೇ ಮೋಕ್ಷ.

ತತ್ವಪದ ವರ್ಗ

ಭಾರತೀಯ ಸಮಾಜದಲ್ಲಿ ತತ್ವಪದ ಮತ್ತು ತತ್ವಪದಗಳನ್ನು ಹಾಡುವ ಗಾಯಕರನ್ನು ಮತ್ತು ತತ್ವಪದ ರಚನಾಕಾರರು ಯಾವ ವರ್ಗದಲ್ಲಿ ನಿಲ್ಲುತ್ತಾರೆಂಬುದನ್ನು ತಾತ್ವಿಕವಾಗಿ ನೋಡಿದಾಗ ಓ.ಶಿ.ರಾಮಚಂದ್ರೇಗೌಡರು ಹೇಳುವಂತೆ ಮುಖ್ಯವಾಗಿ ನಾಲ್ಕು ವರ್ಗಗಳಲ್ಲಿ ಗುರುತಿಸಬಹುದು.

೧. ತನ್ನನ್ನು ಕಳಕೊಂಡು ಇನ್ನೊಬ್ಬನಾಗುವ ತತ್ವ

ತೀರ ಕೆಳ ಹಾಗೂ ತೀರ ಮೇಲು ತರತಮ ಸಾಂಸ್ಕೃತಿಕ ಮತ್ತು ಜೀವನ ಅಂತರಗಳಿರುವ ಕಡೆ ಈ ಪ್ರಕ್ರಿಯೆ ನಡೆಯುತ್ತದೆ. ಮೇಲಿನದು ಎಂಬುದು ಬೆಳೆದ ಒಂದು ಆರ್ಥಿಕ ಸ್ವಭಾವವಾಗಿದೆ. ಶ್ರೇಷ್ಠವೆಂಬ ಸಾಂಸ್ಕೃತಿಕ ಭ್ರಮೆಯಾಗಿ ಬಿಟ್ಟದ್ದರಂತು ಈ ಪ್ರಕ್ರಿಯೆಗೆ ಹೆಚ್ಚಿನ ಚಾಲನೆ ಬರುತ್ತದೆ.

ವೃತ್ತಿ ಸಂಸ್ಕೃತಿ ಕನಿಷ್ಠಗೊಂಡು, ಮಧ್ಯವರ್ತಿ ವ್ಯವಹಾರಿಗಳ ಸಂಸ್ಕೃತಿಗೆ ಗೌರವವಿರುವ ಕಡೆಯೂ ವೃತ್ತಿಗಳು ಆ ಮೇಲು ಎಂಬುದರ ಕಡೆಗೆ ಹೊರಡುತ್ತವೆ. ನಮ್ಮ ಜಾತಿ ಸಮಾಜದಲ್ಲಿ ಅದನ್ನು ಬೇರೆ ಬೇರೆ ರೀತಿಯಲ್ಲಿ ಎಟುಕಿಸಿಕೊಳ್ಳುವ ಪ್ರಯತ್ನಗಳು ನಡೆಯುತ್ತಲೇ ಬಂದಿವೆ.

ನಮ್ಮ ಸನ್ನಿವೇಶದಲ್ಲಿ ಈ ಪ್ರಕ್ರಿಯೆಯನ್ನು ವೃತ್ತಿಜಾತಿಯಾಗಿ ರೂಪಾಂತರಗೊಳ್ಳುವ ಕ್ರಮ ಎಂದು ಕರೆಯಬಹುದು. ಇದು ಸ್ಥಾನ ಭ್ರಷ್ಠತೆ ಮತ್ತು ಸ್ಥಾನಾಂತರ ಎಂಬ ಪರಿಕಲ್ಪನೆಗೆ ಒಳಪಟ್ಟಿದೆ. ತಾನಿರುವ ಸ್ಥಾನ ಕೀಳು, ಕಳಪೆಯದು. ಮುಂದಿನ ಬೆಳವಣಿಗೆಗೆ ಅಡ್ಡಿ ಎಂದು ಭಾವಿಸಿದಾಗಲೆಲ್ಲ ಈ ಸ್ಥಿತ್ಯಂತರ ನಡೆಯುತ್ತದೆ. ಪರೋಕ್ಷವಾಗಿ ಇದು ಅಸ್ಪೃಶ್ಯತೆಯ ವಿರುದ್ಧದ ಹೋರಾಟವೂ ಹೌದು. (ಬಾಗಿಲನು ತೆರೆದು ಸೇವೆಯನು ಕೊಡು ಹರಿಯೇ) ಆದರ ಗುಣಾತ್ಮಕವಾದುದಲ್ಲ. ಆದರೆ ಅದೇ ವರ್ಗದ ಸಾಮಾಜಿಕ ಸ್ಥಾನಾಂತರ ನಡುವಳಿಕೆಯಲ್ಲಿ ಒಂದು. ಇದಕ್ಕೆ ಉತ್ತಮ ಉದಾಹರಣೆ ವ್ಯಕ್ತಿಗಳ ನೆಲೆಯಲ್ಲಿ ಕನಕದಾಸರು ಮತ್ತು ಪುರಂದರದಾಸರು ಸಾಮೂಹಿಕ ನೆಲೆಯಲ್ಲಿ ನಮ್ಮ 'ದಾಸ' ಸಂಸ್ಕೃತಿಗಳು ಇದರೊಳಗೆ ಬರುತ್ತದೆ. ವ್ಯಾಪಕ ಅರ್ಥದಲ್ಲಿ ಈಗನ ನವ ಬ್ರಾಹ್ಮಣಶಾಹಿಯನ್ನು ಇಲ್ಲಿ ಹೆಸರಿಸಬಹುದು.

೨. ತನ್ನನ್ನು ಕಳಕೊಂಡು ಮತ್ತೇನೂ ಆಗದ ತತ್ವ

ಕನ್ನಡ ಸಾಹಿತ್ಯದ ಹತ್ತನೆ ಶತಮಾನದ ಸೇವಕ ವರ್ಗಗಳನ್ನು ನೆನೆಪಿಸಿಕೊಳ್ಳಿ. ವೇಳವಾಳಿ, ಜೋಳವಾಳಿ ಇತ್ಯಾದಿ. ಇವರು ಬಿಡುಗಡೆ ಸ್ಥಳದಿಂದ ನಿವೃತ್ತಿಗೊಳ್ಳುವುದು ಮತ್ತು ನಂತರದ ಸ್ಥಾನ ನಿರ್ದಿಷ್ಟವಿಲ್ಲದಿರುವುದು. ಇದನ್ನು ತನ್ನ ಅಸ್ತಿತ್ವವನ್ನು ನಿವಾರಿಸಿಕೊಳ್ಳುವ ತತ್ವ ಎಂದು ಕರೆಯಬಹುದು. (Removal of one self) ತ್ರಿಶಂಕುಗೆ ಹೇಳಿಕೊಳ್ಳುವ ಒಂದು ಸ್ಥಿತಿಯಾದರೂ ಇದೆ. ಈ ವರ್ಗದ ವ್ಯಕ್ತಿಗಳಿಗೆ ಅದೂ ಇರುವುದಿಲ್ಲ. ತನ್ನನ್ನು ಅಜ್ಞಾನಿ, ಅಸಂಸ್ಕಾರಿ, ಭವಿ ಎಂದು ಮುಂತಾಗಿ ಭಾವಿಸಿಕೊಂಡು ಒಂಟಿಯಾಗಿ ಅಥವಾ ತನ್ನ ಸಮೂಹವೇ ಒಟ್ಟಾಗಿ ತೆಗೆದುಕೊಂಡ ಏಕಪಕ್ಷೀಯವಾದ ತೀರ್ಮಾನವಿದು. ಒಬ್ಬ ಕ್ಯಾಪ್ಟಲಿಸ್ಟ್; ವ್ಯಕ್ತಿ ಅಥವಾ ಕೆಟ್ಟುಹೋಗಿದೆ ಎಂದು ಭಾವಿಸಿಕೊಂಡ ಸಮಾಜ ತನ್ನ ತಲೆಯ ಮೇಲೆ ಕೂತಿದೆ ಎಂದು ತಿಳಿದ ಈ ಜನ ಭೌತಿಕವಾಗಿ ಈ ಹಾಲಿಶೋಷಕನಿಂದ ಬಿಡುಗಡೆಯಾಗ ಬಯಸಿಗೊತ್ತಿಲ್ಲದ, ತಮ್ಮ ಮನಸ್ಸಿನಲ್ಲಿ ಭಾವಿಸಿಕೊಂಡ ಮತ್ತೊಬ್ಬ ಭಾವಿ ಶೋಷಕನ ಕಡೆಗೆ ನಡೆಯುವರು. ಬಡತನಕ್ಕೆ ಹೆದರಿ ಬಡವ ಆತ್ಮಹತ್ಯೆ ಮಾಡಿಕೊಳ್ಳುವ ರೀತಿಗಳಲ್ಲಿ ಇದು ಕೂಡಾ ಒಂದು. ನಮ್ಮ ತತ್ವಪದಕಾರರು ಈ ವರ್ಗದಲ್ಲಿ ಸೇರುತ್ತಾರೆ.

೩. ತಾನು ತಾನೇ ಆಗುವ ತತ್ವ

ತನ್ನನ್ನು ಇರುವ ಸಮಾಜದ ಮಧ್ಯೆ ಭದ್ರನಾಗಿ ಗುರುತಿಸಕೊಳ್ಳುವ ಬಡತನ ಅಥವಾ

ನೊಂದವನ ಹಠತತ್ವ ಇದು. ಮೇಲಿನವರಿಗೆ ಇರುವ ಅಸ್ತಿತ್ವದ ಅಧಿಕಾರವನ್ನು ಪ್ರಶ್ನಿಸುತ್ತ ತನ್ನದೂ ಅದರಂತೆ, ಅದಕ್ಕೆ ಪ್ರತಿಸ್ಪರ್ಧಿ ಎಂಬಂತೆ ಅಸ್ತಿತ್ವ ಪ್ರತಿಪಾದನೆ ಮಾಡುವ ಈ ವರ್ಗ ಸ್ಥಿತ ಸಮಾಜದಲ್ಲಿ ಒಂದು ಪ್ರತಿ ವರ್ಗ ಎನಿಸಿಕೊಳ್ಳುತ್ತದೆ. ಇರುವವರಂತೆ ಆಗಲು ಸಾಧ್ಯವಿಲ್ಲವಾಗಿ ತನ್ನ ಪ್ರತಿ ಸಂಸ್ಕೃತಿಯೊಂದರಲ್ಲಿ ಇದು ತನ್ನನ್ನು ಗುರುತಿಸಿಕೊಳ್ಳುತ್ತದೆ. ವಚನ ಚಳುವಳಿ ಇದಕ್ಕೆ ಉತ್ತಮ ಉದಾಹರಣೆ.

೪. ಎಲ್ಲರಂತಾಗುವ ತತ್ವ

ಇದು ಒಡನಾಟದ ತತ್ವ. ಈ ಲೋಕ ಹಾಗೂ ಇತರ ಲೋಕದ ಜನರೊಡನೆ ಎಲ್ಲರ ಹಾಗೆ ತಾನೂ ಸಂಬಂಧ ಹೊಂದುವುದು, ಜನಪದ ಸಮಾಜ ಇದಕ್ಕೆ ಉತ್ತಮ ಉದಾಹರಣೆ. ಅದು ಇತರ ಜನವರ್ಗ ಮತ್ತು ಲೋಕಗಳನ್ನು ಅನ್ಯ ಎಂದು ಭಾವಿಸುವುದಿಲ್ಲ. ಶ್ರೇಷ್ಠ ಎಂದು ಕೊಂಡಾಡುವುದಿಲ್ಲ. ಅವರು ಸ್ವಲ್ಪ ಮೇಲೆ ಅಥವಾ ಕೆಳಗೆ, ಅವರೊಡನೆ ಹೆಣ್ಣು ತರುವ ಕೊಡುವ ಮೂಲಕ ಸಂಬಂಧ ಬೆಳಸಬಹುದು. ಶಿಷ್ಟವರ್ಗ ನಿರೂಪಿಸಿಕೊಂಡಂತೆ ಆ ಲೋಕ ದೂರವಲ್ಲ. ಬೇರೆಯಲ್ಲ ಅಸಾಧ್ಯವಾದುದಲ್ಲ. ಕೆಳಗಿನಿಂದ ಮೇಲಿನವರೆಗಿನ ಮೂರು ಲೋಕಗಳು ಆರ್ಥಿಕಾಭಿವೃದ್ಧಿಯ ಬೆಳೆದ ಹಂತಗಳು ಆದ್ದರಿಂದ ಶಾಪ ಹೊಂದಿರಲ್ಲದೆ ಕೆಳಕ್ಕೆ ಹೋಗಲು ಭಯ. ಮೇಲಕ್ಕೆ ಹೋಗಲು ಕಾತುರ. ಯಾಕೆಂದರೆ ಅಲ್ಲಿ ಒಳ್ಳೆ ಹೆಣ್ಣುಗಳಿವೆ, ವಸ್ತುಗಳಿವೆ. ಇಲ್ಲಿ ಸ್ಥಾನಾಂತರದ ಪ್ರಜ್ಞೆ ವಿಶೇಷವಾಗಿ ಕಾಡುವುದಿಲ್ಲ. ಅದು ಸ್ಥಾನ ಭದ್ರಪಡಿಸಿಕೊಂಡಿರುವ ಅದನ್ನು ಬಿಡಲಾರದ ವರ್ಗದ ಅಪೇಕ್ಷೆ. ದೇಹ ಸಹಿತ ಕೈಲಾಸಕ್ಕೆ ಹೋಗುವ, ಸ್ಥಾನ ಸಹಿತ ದೇವಲೋಕಕ್ಕೆ ಹೋಗುವ ಅಥವಾ ಕುರ್ಚಿಯನ್ನೇ ಎತ್ತಿಕೊಂಡು ಅಲ್ಲಿಗೆ ಹೋಗುವ ದುರಾಪೇಕ್ಷೆ ಇಲ್ಲಿ ಬರುವುದಿಲ್ಲ.

"ಸ್ಥಾನದ ಜೊತೆಗೆ ಬದಲಾವಣೆ ಅಲ್ಲ. ಮನುಷ್ಯನ ಸ್ಥಳಾಂತರ ಮತ್ತು ಸಾಧನೆಯ ಜೊತೆಗೆ ಬದಲಾವಣೆ ಎಂಬುದು ಇಲ್ಲಿಯ ನಿಯಮ. ದೇವರು ಭೂಮಿಗೆ ಬಂದು ಮನುಷ್ಯನಾಗುತ್ತಾನೆ. ರಾಜಕುಮಾರ ದೇವಲೋಕಕ್ಕೆ ಹೋಗಿ ಇಂದ್ರನ ಮಗಳನ್ನು ಗೆದ್ದು ಅರ್ಧ ರಾಜ್ಯ ಪಡೆಯುತ್ತಾನೆ. ಮನುಷ್ಯ, ಮನುಷ್ಯ ದೇವ-ಮನುಷ್ಯ, ರಾಕ್ಷಸ-ಮನುಷ್ಯ ದೂರ ದೂರದ ಇರದ ಪ್ರಾಕೃತಿಕ ನಿಯಮ ಇದು. ಮೇಲಿನ ಮೂರು ತತ್ವಗಳು ಮೇಲುಗಡೆಗೆ ಕೆಳವರ್ಗದ ಜನ ಚಲಿಸುವ ಕ್ರಮಗಳು ಪರಿಣಾಮ ಮಾತ್ರ ಬೇರೆ ಬೇರೆ."

ನನ್ನ ಈ ವಿವೇಚನೆಯಿಂದ ಭಾರತದ ಸಮಾಜದಲ್ಲಿ ತತ್ವಪದಕಾರರ ಸ್ಥಾನ ಏನು ಎಂಬುದನ್ನು ಮನವರಿಕೆ ಮಾಡಿಕೊಟ್ಟಿದ್ದೇನೆ. ಈಗ ಅವರು ಇರುವ ಹಾಗೆ ಅಥವಾ ಅವರ ಅಭಿವ್ಯಕ್ತಿಯೊಳಗೆ ಏನು ಎಂಬುದನ್ನು ಮನನ ಮಾಡಿಕೊಂಡಾಗ ತತ್ವಪದಕಾರರು ಬಡತನದ

[illegible]

ವಿರುದ್ಧ ಯುದ್ಧ ಹೂಡಿದ್ದಾರೆ. ಅದು ನಕಾರಾತ್ಮಕ ಯುದ್ಧ. ದುಡಿಯುವ ಸಾಧನಗಳನ್ನು ಬಿಸಾಡಿ ಅಥವಾ 'ಜನ್ಮ'ವನ್ನು ಸ್ಥಾಪಿಸಿಕೊಂಡು ದೇಹವನ್ನು ನಿರಾಕರಿಸಿ ತಮ್ಮ ಸ್ಥಾಪಿತ ಶತ್ರುವಿನಿಂದ ದೂರ ಓಡಿ ಹೋಗುತ್ತಿದ್ದಾರೆ. "ವಲಸೆ ಮತ್ತು ಅಸ್ತಿತ್ವ"ದ ಪ್ರಶ್ನೆಯಾಗಿ ಆರ್ಯರಿಂದ ನಿರೂಪಿತಗೊಂಡ ಜೀವನ ಭಯದ ತತ್ವ ಮುಂದೆ ಭಾರತದಲ್ಲಿ ಒಂದು ಪಲಾಯನವಾದ ಹಾಗೂ ಜೀವನ ನಿಂದನಾವಾದವಾಗಿ ಪರಿಣಮಿಸಿದ್ದು ನಮ್ಮ ಇತಿಹಾಸದ ದುರಂತಗಳಲ್ಲಿ ಒಂದು. ಕಾಲಘಟ್ಟವೊಂದರ ಈ ಪರಿಣಾಮವನ್ನು ಮಾನವ ಜೀವನದ ಚಿಂತನೆಯನ್ನು ಅನಾರ್ಥಿಕಗೊಳಿಸಲಾಗಿದೆ. ಈ ಅನಾರ್ಥಿಕ ತತ್ವ ನಮ್ಮ ಬ್ರಾಹ್ಮಣ ತತ್ವವಾದುದು ಮತ್ತೊಂದು ವಿಪರ್ಯಾಸ. ಇದನ್ನು ತಮ್ಮ ಜೀವನೋದ್ಧಾರ ಮಾರ್ಗ ಎಂದು ತಿಳಿದುಕೊಂಡ ಕೆಳವರ್ಗದ ಪರಿ ಮತ್ತೊಂದು ಕಂಟಕದ ಸಂಕಟಕ್ಕೆ ಸಿಕ್ಕಿಕೊಂಡಿದ್ದಾರೆ. ಈ ತತ್ವದ ಮೇಲೆ ಜೀವನವನ್ನು ಸೋಲಾಗಿ ತಿಳಿದುಕೊಂಡ ಇವರು ಎರಡು ಶಕ್ತಿಗಳನ್ನು ಎದುರಿಸಿ ಹೊರಟಿದ್ದಾರೆ.

೧. ಬ್ರಾಹ್ಮಣ ಶಕ್ತಿಯನ್ನು ; ಬ್ರಾಹ್ಮಣ್ಯವನಲ್ಲ

ಅದನ್ನು ಪರೋಕ್ಷವಾಗಿ ತಾವೇ ಪಡೆಯಹೊರಟು ತಮ್ಮ ಹೋರಾಟವನ್ನು ತಮ್ಮ ವಿರುದ್ಧವೇ ತಿರುಗಿಸಿಕೊಂಡಿದ್ದಾರೆ. ನಾರಾಣಪ್ಪ ಎದುರಿಸುವ ಮಲ್ಲಯ್ಯನೆಂಬ ಶ್ಯಾನುಭೋಗ, ಕಡಕೋಳ ಮಡಿವಾಳಪ್ಪ ಎದುರಿಸುವ ಹಳಿಪ್ಯಾಟಿ ಬಸವಯ್ಯ, ಕೂಡಲೂರು ಬಸವಲಿಂಗ ಎದುರಿಸುವ ಸುಭದ್ರ ಕುಲದ ಪ್ರಶ್ನೆ, ಶರೀಫ್ ಎದುರಿಸುವ ಹಿಂದುತ್ವ ಅವರ ಕೇವಲ ಭೌತಿಕ ಶತ್ರುಗಳು ಇವುಗಳನ್ನು ಇವರು ಮಾನಸಿಕವಾಗಿ ಎದುರಿಸುವುದಿಲ್ಲ. ಮಾನಸಿಕವಾಗಿ ಒಪ್ಪಿಕೊಂಡು ಬಿಡುತ್ತಾರೆ. ಶರೀಫ "ಹಾಕಿದ ಜನಿವಾರ ನೂಕಿದ ಭವಭಾರ" ಎನ್ನುವ ಮಡಿವಾಳಪ್ಪ ಮತ್ತು ಬಸವಲಿಂಗ ತಮ್ಮ ಕುಲಶ್ರೇಷ್ಠತೆಗಾಗಿ ಮಾಡುವ ತಾತ್ವಿಕ ವಾದಗಳು ಇದನ್ನು ಸಮರ್ಥಿಸುತ್ತವೆ. ಈ ಮೂಲಕವೇ ಇವರು ತಮ್ಮ ಶೂರತ್ವದ ವಿಕಾಸ ಮಾಡಿಕೊಳ್ಳಲು ಹೊರಡುತ್ತಾರೆ. ಆದರೆ ಅದು ಅವರ ನಿಜವಾದ ವಿಗತಿ; ಅಥವಾ ಸ್ಥಳ ಕಳಕೊಳ್ಳುವಿಕೆ. ಬುದ್ಧ/ಬಸವ ಮತ್ತು ಗಾಂಧೀಜಿಗೆ ಬಂದ ಯತಿ ಕೂಡ ಈ ಕಾಲಬದ್ಧ ಅಥವಾ 'ಕಾಲಜ್ಞಾನ'ದ ಪರಿಮಿತಿ, ಕಾಲಜ್ಞಾನದ ಪರಿಮಿತಿ ಎಂದರೆ ಆ ಕಾಲದ ಆಚೆಗೆ ಅಥವಾ ಭವಿಷ್ಯ ಸಂಬಂಧಿಯಾಗಿ ಆಲೋಚಿಸಲು ಇರುವ ಹಾಗೂ ಹಾಕಿಕೊಂಡ ನಿರ್ಬಂಧ, ಭಾರತದ ಸ್ವಾತಂತ್ರ್ಯ ಹೋರಾಟ, ಇವತ್ತಿನ ಶೂದ್ರ ಚಳುವಳಿ ಕೂಡ ಇದೆ ಮಿತಿಯಲ್ಲಿ ನಡೆಯುತ್ತಿವೆ.

೨. ಶ್ರೀಮಂತಿಕೆ ಅಥವಾ ಬಡತನದ ವಿರುದ್ಧ ಹೋರಾಟ

ಶ್ರೀಮಂತಿಕೆಯ ವಿರುದ್ಧದ ಹೋರಾಟ ಬಡತನದ ನಿವಾರಣೆಯ ಹೋರಾಟವಾಗಬೇಕು. ತತ್ವಪದಕಾರರಲ್ಲಿ ಅದು ಬಡತನವನ್ನು ಉಳಿಸಿಕೊಳ್ಳುವ ಹೋರಾಟವಾಗಿದೆ. ಶ್ರೀಮಂತಿಕೆಯ

ವಿರುದ್ಧ ಹೋರಾಡಲು ಬೇಕಾಗುವ ತತ್ವ ಮತ್ತು ಸಲಕರಣೆಗಳನ್ನು ಅವರು ಪಡೆಯುವುದೇ ಇಲ್ಲ. ಯುದ್ಧಕಣದಲ್ಲಿ "ಜನಗಣ ಮನ" ಹಾಡಲು ಶುರು ಮಾಡುತ್ತಾರೆ. ದುಡಿಯುವವ ಅಥವಾ ಬಡವ ಮತ್ತೆ ನಿರಾಯುಧನಾಗುವ ನಿರ್ವಸಿತನಾಗುವ ಮತ್ತು ಸ್ಥಳ ಕಳಕೊಳ್ಳುವ ಪರಿಸ್ಥಿತಿ ಉಂಟಾಗುತ್ತದೆ. ಬಡತನವನ್ನು ಮರೆಯುವ, ಅದರಿಂದ ನಾಶವಾಗುವ ತತ್ವ ಹುಟ್ಟಿಕೊಳ್ಳುತ್ತದೆ. ಕೈವಾರ ನಾರಾಯಣಪ್ಪನ ಕುಟುಂಬದ ಸ್ಥಿತಿಯನ್ನು ನೆನಸಿಕೊಂಡರೆ ಭೂಮಿಗೆ ಮಾತೇ ಬರುವುದಿಲ್ಲ. ಸಂಸ್ಕೃತಿ ಹುಟ್ಟುವುದಿಲ್ಲ ಎನ್ನಿಸುತ್ತಾರೆ. ಬ್ರಿಟಿಷ್ ವಸಾಹತುಶಾಹಿ ಭಾರತದ ಕೈಗಾರಿಕೆಗಳನ್ನು ನಾಶ ಮಾಡುತ್ತಾ ಹೊರಟ ಮೊದಲು ಪರಿಣಾಮ ಇದಾಗಿರಬೇಕೆನಿಸುತ್ತದೆ. ಈ ಪರಿಣಾಮ ಯುದ್ಧದ ನಂತರದ ಪರಿಣಾಮಕ್ಕಿಂತ ಘೋರವಾಗಿರಬೇಕೆನಿಸುತ್ತಾರೆ. ನಮ್ಮ ಈ ತತ್ವಪದಕಾರ ಅಭಿವ್ಯಕ್ತಿಯನ್ನು ನೋಡಿ ಅವರು

i. ನೆಲ–ನೆಲೆ ನಿರಾಕರಿಸುತ್ತಾರೆ.

ii. ಕುಲ (Clan ಪ್ರಾಥಮಿಕ ಸಂಘಟನೆ) ನಿರಾಕರಿಸುತ್ತಾರೆ.

iii. ಜನ ಮುಂದುವರಿಕೆ (ಹೆಣ್ಣು ಮಕ್ಕಳು)ಯನ್ನು ನಿರಾಕರಿಸುತ್ತಾರೆ.

ಮತ್ತೆ ಏನು ಉಳಿಸಿಕೊಂಡಿದ್ದಾರೆ?
ಎದ್ದು ಹೋಗುತೇನಿ ತಾಳೋ
ಇದ್ದು ಇಲ್ಲೇ ಭವಕೆ ಬೀಳೊ
ಬಡತೀನಿ ದೇಹದ ಕೊಡತೀನಿ ಭೂಮಿಗೆ
ಬಡತೀನಿ ಮಹಿಮರ ನಡತಿಯ ದಿಡಿದು

– ಶರೀಫರು

ನೀವಾಳಿಸುವೆ ದೇಹ ನೀವಾಳಿಸುವ ದೇವ
ಭವಾಳಿಯೊಳಾರ ನಾಹಂ ನೀವಾಳಿಸುವ ದೇವ

–ಮಡಿವಾಳಪ್ಪ

ಇಂತಹ ತತ್ವಪದಗಳು ದೇವನ ಧೋರಣೆಯನ್ನು ಕಲಿಸುತ್ತವೆ. ಈ ಧೋರಣೆ ಅಭಿವ್ಯಕ್ತಿಗೆ ದತ್ತಾಂಶವಾಗಿರುತ್ತದೆ. ಆದ್ದರಿಂದ ಬರಹಗಾರರನ್ನು ಹಾಗೂ ತತ್ವಪದ ಹಾಡುಗಾರರನ್ನು ಅವರ ಜೀವನ ಸಾಧನೆಯ ಜೊತೆಗೆ ನೋಡಬೇಕು. ನನ್ನ ಜೀವನ ಬೇರೆ, ಬರಹ ಬೇರೆ ಎನ್ನುವವನು ತನ್ನ ಜೀವನ ಮೂಲವನ್ನು ಗುಟ್ಟಾಗಿ ಅಟಥವಾ ಪವಿತ್ರವಾಗಿ ಇರಡಲು ಬಯಸುತ್ತಿದ್ದಾನೆ ಎಂದರ್ಥ. ಇದು ಯಜಮಾನ ಸಂಸ್ಕೃತಿಯ ಸ್ವಭಾವ. ಬದುಕುವ ಭಾಗದ ಜೊತೆಗೆ ಜೀವನದಲ್ಲಿ

[illegible]

[illegible]

[illegible]

ಬೇರೆ ಬೇರೆ ಪಾಠದಿಂದ ಕಲಿಯುವ ಅಥವಾ ಗಾಯಕನ ಜೀವನ ಗೌಪ್ಯವಾಗಿ ಇರತಕ್ಕದ್ದಲ್ಲ. ಇದು ನಮ್ಮ ಋಷಿ ಮೂಲ, ಗುರು ಮೂಲ ಹಾಗೂ ನದಿ ಮೂಲವನ್ನು ಹುಡುಕಬಾರದು ಎಂಬ ಪಾವಿತ್ರ್ಯ ರಕ್ಷಣಾತಂತ್ರದ ಮಾತಾಗುತ್ತದೆ. ಒಬ್ಬನ ಬರಹ ಅವನ ವ್ಯಕ್ತಿತ್ವದ ರೂಪೀಕರಣದಿಂದಲೂ ಪುಷ್ಟಿಗೋಳ್ಳುತ್ತದೆ ಎಂಬುದನ್ನು ಮರೆಯುವಂತಿಲ್ಲ. ತತ್ವಪದಕಾರರು ಹಾಗೂ ತತ್ವಪದಗಾಯಕರು ಈ ಸಮಾಜಕ್ಕೆ ಒಂದು ಜೀವನ ಚಿಂತನೆಯನ್ನು ಕೊಡುತ್ತಿದ್ದಾರೆ. ಅವರು ಸಮಾಜವನ್ನು ನಿರ್ವಹಿಸುವ ಒಂದು ಬಗೆಯ ಸಾಂಸ್ಕೃತಿಕ ವ್ಯಕ್ತಿತ್ವವುಳ್ಳವರು. ಈ ವ್ಯಕ್ತಿತ್ವ ನಕಾರಾತ್ಮಕವೂ ಸಕಾರಾತ್ಮಕವೂ ಎಂಬುದು ಈ ಕಾರಣಕ್ಕಾಗಿ ಸ್ಪಷ್ಟವಾಗಬೇಕು. ತತ್ವಪದಗಳನ್ನು ಯಾರೊಬ್ಬ ವ್ಯಕ್ತಿ ಹೇಳಿದ್ದರೆ ಅದನ್ನು ನಾವು ಗಂಭೀರವಾಗಿ ತೆಗೆದುಕೊಳ್ಳ ಅವಶ್ಯಕತೆ ಇರಲಿಲ್ಲ. ನಮ್ಮ ಸಮಾಜದೊಳಗೆ ಜೀವನ ಪರಿಹಾರ ಎಂಬಂತೆ ತತ್ವಚಿಂತನೆ ಗಾಢವಾಗಿಯೇ ಸೇರಿಕೊಂಡಂತಿದೆ. ಆದಕಾರಣ ನಾನು ತತ್ವಪದ ಹಾಡುಗಾರರ ಜೀವನ ಸಂಬಂಧವಾಗಿ ಕೆಲವು ಅಂಶಗಳನ್ನು ಗುರುತಿಸಿದ್ದೇನೆ.

ತತ್ವಪದಕಾರರು ಹಾಗೂ ತತ್ವಪದಗಾಯಕರು ನಮ್ಮ ಸಮಾಜದ ತಬ್ಬಲಿಗಳು. ಮಧ್ಯಮ ವರ್ಗದಲ್ಲಿ ಒಡೆಯುತ್ತಿರುವ ಆರ್ಥಿಕ ದುಷ್ಪರಿಣಾಮದ ಫಲಗಳು. ತತ್ವ ಹುಟ್ಟುತ್ತಿರುವುದೇ ಇರುವ ಇಲ್ಲದಿರುವ ಆರ್ಥಿಕ ವೈರುಧ್ಯದ ಪರಿಣಾಮವಾಗಿ ಭೌತಿಕ ಜೀವನದ ಹೋಲಿಕೆ, ವಾಸ್ತವತೆ ಇಲ್ಲದೆ ಯಾವ ತತ್ವವೂ ಮೂಡಲಾರದು. ಇಂಥ ಭೌತಿಕ ವಸ್ತುಗಳಿಗೆ ಸಾಂಸ್ಕೃತಿಕ ನಡವಳಿಕೆಯೊಂದು ಆರೋಪ ಹೊಂದುವುದು ನಂತರದ ಪ್ರಕ್ರಿಯೆಯಲ್ಲಿ ನಮ್ಮ ಕಡಕೋಳ ಮಡಿವಾಳಪ್ಪ, ಕೂಡಲೂರು ಬಸವಲಿಂಗ, ಕೈವಾರ ನಾರಾಣಪ್ಪ ಮತ್ತು ಶಿಶುನಾಳ ಶರೀಫ್, ಮಾರೆಪ್ಪ ಚೆನ್ನದಾಸರು ಹಾಡುವ ಇವರ ತತ್ವ ಜೀವನ ಆರ್ಥಿಕ ದುಷ್ಪರಿಣಾದ ಫಲವೇ ಆಗಿದೆ."[೩]

ನಾವು "ತತ್ವಪದಗಳನ್ನು ಬೇರೆ ಬೇರೆ ಆಯಾಮಗಳಿಂದ ವಿವೇಚಿಸುವುದಾದರೆ ಭಾಷೆ ಮತ್ತು ಬಂಧಗಳ ನೆಲೆಯಲ್ಲಿ ಹಲವಾರು ವಿಶಿಷ್ಟ ಲಕ್ಷಣಗಳು ಕಂಡುಬರುತ್ತವೆ. ಇಂತಹ ವಿಶಿಷ್ಟ ಲಕ್ಷಣಗಳ ಹಿಂದೆ ತಾತ್ವಿಕ ದೃಷ್ಟಿ ಧೋರಣೆಗಳ ಪ್ರಭಾವವನ್ನು ಗುರುತಿಸಬಹುದು. ವಚನಗಳ ಭಾಷೆ ಮತ್ತು ಬಂಧಗಳಿಗೂ ತತ್ವಪದಗಳ ಭಾಷೆ ಮತ್ತು ಬಂಧುಗಳಿಗೂ ಇರುವ ವ್ಯತ್ಯಾಸ ಒಡೆದು ಕಾಣುವಂತಹದು. ವಚನಗಳ ಭಾಷೆ ಮತ್ತು ಬಂಧಗಳಲ್ಲಿ ಏಕಶಿಲಾಕೃತಿಯ ಅಭಿವ್ಯಕ್ತಿಯಿದೆ. ಒಬ್ಬ ವಚನಕಾರ ಯಾವುದೇ ವೃತ್ತಿ-ಜಾತಿ ಅಥವಾ ಪ್ರಾಂತ್ಯಕ್ಕೆ ಸೇರಿರಲಿ ವಚನಗಳ ಭಾಷೆ ಏಕರೂಪಿಯಾಗಿ ಕಾಣುತ್ತದೆ. ಪ್ರಾದೇಶಿಕವಾದ ಪ್ರಾಂತಭೇದಗಳ ವಚನಗಳಲ್ಲಿ ಕಂಡುಬರುವುದಿಲ್ಲ. ಇದಕ್ಕೆ ವ್ಯತಿರಿಕ್ತವಾಗಿ ತತ್ವಪದಗಳ ಭಾಷೆ ಮತ್ತು ಬಂಧಗಳು ಬಹುಮುಖವಾಗಿ ಪ್ರಕಟಗೊಂಡಿವೆ. ಪ್ರಾದೇಶಿಕವಾಗಿ ಪ್ರಾಂತ್ಯಬೇಧಗಗಳಿಗನುಗುಣವಾಗಿ ತತ್ವಪದಗಳನ್ನು ತತ್ವಪದಕಾರರನ್ನು

ವಿಂಗಡಿಸಬಹುದಾಗಿದೆ. ಪದಕೋಶದಿಂದ ಹಿಡಿದು ರೂಪಕ, ಪ್ರತಿಮೆಗಳವರೆಗೆ ಗುರುತಿಸಬಹುದು. ವಚನಗಳಲ್ಲಿ ಕಾಯಕಕ್ಕೆ ಸಂಬಂಧಪಟ್ಟಂತೆ ಭಿನ್ನಭಿನ್ನ ರೂಪಕ, ಪ್ರತಿಮೆಗಳು ವಿವಿಧ ವೃತ್ತಿ ಜಾತಿಗಳ ನೆಲೆಯಿಂದ ಮೂಡಿ ಬಂದಿದ್ದರೂ ಕಾಯಕ ನಿಷ್ಠವಾದ ರೂಪಕ–ಪ್ರತಿಮೆಗಳು ಕಂಡುಬರುವುದಿಲ್ಲ. ಇದು ವಸಾಹತುಶಾಹಿ ಸಂದರ್ಭದಲ್ಲಿ ಸಂಭವಿಸಿದ ಜಾತಿ ಮೂಲವಾದ ವೃತ್ತಿಧರ್ಮದ ಅವನತಿಯ ದ್ಯೋತಕವೂ ಆಗಿದೆ. ಒಟ್ಟಿನಲ್ಲಿ ವಚನಗಳ ಭಾಷೆ ಮತ್ತು ಬಂಧುಗಳಲ್ಲಿ ಕಂಡುಬರುವ ಏಕಶಿಲಾಕೃತಿಯ ರಚನೆಯ ಪೂರಕವಾಗಿ ವಚನಕಾರರಿಗೆ ಪ್ರಿಯವಾದ ತಾತ್ವಿಕ ದೃಷ್ಟಿ ಏಕದೇವತಾ ವಾದವನ್ನು ಮನಗಾಣಬಹುದು. ಹಾಗೆಯೇ ತತ್ವಪದಗಳ ಭಾಷೆ ಬಂಧಗಳಲ್ಲಿ ಕಂಡುಬರುವ ಬಹುಮುಖ ದೃಷ್ಟಿಯ ರಚನೆಗೆ ಪೂರಕವಾಗಿ ತತ್ವಪದಕಾರರಿಗೆ ಪ್ರಿಯವಾದ ತಾತ್ವಿಕ ಬಹುದೇವತಾವಾದ ಗುರುತಿಸಬಹುದು. ಇಲ್ಲಿ ಮನುಷ್ಯನ ಮಿದುಳಿಗೂ ಮತ್ತು ನಾಲಗೆಗೂ ಇರುವ ಪರಸ್ಪರ ಸಮನಾಂತರ ದೃಷ್ಟಿಯನ್ನು ವಿವರಿಸಲಾಗಿದೆಯೇ ಹೊರತು ಇದನ್ನೇ ಕಾರ್ಯ–ಕಾರಣ ಸಂಬಂಧವೆಂದು ತಿಳಿಯಕೂಡದು."[೪]

ವಚನಗಳ ಅಭಿವ್ಯಕ್ತಿ ಕ್ರಮದಲ್ಲಿ ನಿದರ್ಶನದಿಂದ ನಿರ್ಣಯದ ಕಡೆಗೆ ಸಾಗುವ ಅನುಗಮನ ವಿಧಾನ ಎದ್ದುಕಾಣುವ ಸಂಗತಿಯಾಗಿದೆ. ತತ್ವಪದಗಳ ಅಭಿವ್ಯಕ್ತಿ ಕ್ರಮದಲ್ಲಿ ನಿರ್ಣಯದಿಂದ ನಿದರ್ಶನದ ಕಡೆಗೆ ಚಲಿಸುವ ನಿಗಮನ ವಿಧಾನವೇ ಪ್ರಧಾನವಾಗಿದೆ.

ವಚನಕಾರರು ಮತ್ತು ಹರಿದಾಸರ ಜೊತೆಗಿನ ತತ್ವಪದಕಾರರ ಸಂಬಂಧ

i. ಇಲ್ಲಿ ಸಲ್ಲುವವರು ಅಲ್ಲಿಯೂ ಸಲ್ಲುವವರು – ವಚನ

ii. ಅಲ್ಲಿದೆ ನಮ್ಮನೆ ಇಲ್ಲಿ ಬಂದೆ ಸುಮ್ಮನೆ – ಹರಿದಾಸ

iii. ಎದ್ದು ಹೋಗುತೇನಿ ತಾಳೋ ಇದ್ದು ಇಲ್ಲೇ ಭವಕೆ ಬೀಳೊ – ತತ್ವಪದ

iv. ಕರುಣೆ ಬಂದರೆ ಕಾಯೋ ಮರಣ ಬಂದರೆ ಹೊಯ್ಯೊ – ಜನಪದ

  i. ಅಸ್ತಿತ್ವ ಸ್ಥಾಪನೆಗಾಗಿ ಹೊರಟ ಸಾಂಘಿಕ ಮನೋಧರ್ಮ. ಇಲ್ಲಿ ಮನುಷ್ಯ ಬಳಿದಿದ್ದಾನೆ. ಅಲ್ಲಿಯೂ ಉಳಿಯ ಹೊರಟಿದ್ದಾನೆ.

  ii. ಜೀವನ ಭಯವೇನೂ ಅಲ್ಲ. ಎರಡು ಕಡೆಯಲ್ಲಿ ಇರುವುದು.

  iii. ಇಲ್ಲಿಯ ಪಾತ್ರಾಭಿನಯ ಹಾಗೆ. ನಾಟಕ ಮುಗಿದ ಮೇಲೆ ಮೂಲತತ್ವ

  iv. ಗುಳೆಹೋಗುವ ವಿಧಾನ

ತತ್ವಪದಗಳು ವಚನ ಸಾಹಿತ್ಯದ ನಂತರದ ಬೆಳವಣಿಗೆಯಾಗಿವೆ. ವಚನಗಳಿಗಿಂತಲೂ

ಸರಳ ರೀತಿಯಲ್ಲಿ ಜನಮನ ಮುಟ್ಟುವಂತೆ ತತ್ವಪದಕಾರರು ಸಾಹಿತ್ಯ ಸೃಷ್ಟಿಸಿದ್ದಾರೆ. ಇಂದಿಗೂ ಭಜನೆ ಪದ ಮಂಗಳಾರತಿ, ಏಕತಾರಿ ಪದ, ಹೆಣ್ಣುಮಕ್ಕಳ ಹಾಡು ಹಾಗೂ ಇತರ ಜಾನಪದ ಹಾಡುಗಳಲ್ಲಿ ತತ್ವಪದಗಳು ಜೀವಂತವಾಗಿದೆ. ವೀರಶೈವ ವಚನ ಸಾಹಿತ್ಯ ಸನಾತನ ಹಿಂದೂ ವ್ಯವಸ್ಥೆ ವಿರುದ್ಧ ಬಂಡಾಯವಿದ್ದು ವ್ಯವಸ್ಥೆಯನ್ನು ಬದಲಾಯಿಸುವ ಪ್ರಕ್ರಿಯಿಗೆ ಬುನಾದಿ ಹಾಕಿದರೆ ತತ್ವಪದಗಳು ಭಕ್ತಿ, ಜ್ಞಾನ, ವೈರಾಗ್ಯಕ್ಕೆ ಹೆಚ್ಚು ಒತ್ತುಕೊಟ್ಟವು. ಆದರೆ ಇವೆರಡರ ಚಿಂತನೆಯಲ್ಲಿ ವೀರಶೈವ ಸಿದ್ಧಾಂತದ ಮೂಲ ಸೆಲೆ ಸೂಕ್ಷ್ಮವಾಗಿ ಕಂಡುಬರುತ್ತದೆ. ಒಂದು ರೀತಿಯಿಂದ ತತ್ವಪದಕಾರರು ಮೋಕ್ಷೀಕರಣ ಪ್ರಕ್ರಿಯೆಯ ಹರಿಕಾರರೆನ್ನಬಹುದು. ಸಾಮೂಹಿಕವಾಗಿ ಅಂತಸ್ತು ಬದಲಾಯಿಸಲು ಇದು ನೆರವಾಗಿದಿದ್ದರೂ ಆತ್ಮಜ್ಞಾನಕ್ಕೆ ಎಲ್ಲರಿಗೂ ಮುಕ್ತ ಅವಕಾಶ ಒದಗಿಸಿತು.

ಗಂಡನ ಜೋಪಾನ ಮಾಡಮ್ಮ
ಗಂಡನೆಂದರೆ ನಿನ್ನ ಮನಿದೇವರಮ್ಮ
ಕರಿಮಣಿ ಎಂಬುದೊಂದೇ ಹೊನ್ನಿನ ರಾಶೆಮ್ಮ
ಆ ರಾಶಿ ಹೋದ ಮೇಲೆ ನೀ ಪರದೇಶಮ್ಮ

ಶರೀಫರು ರಚಿಸಿರುವ ಈ ತತ್ವಗೀತೆಯನ್ನು ನೋಡಿದಾಗ ಮತ್ತು

ಗಂಡ ಗಂಜಿ ಬದುಕು ಮಾಡಮ್ಮ
ಮುತ್ತೈದೆತನ ಕಳಕೋಬೇಡ ತಿಳಕೊ ತಂಗೆಮ್ಮ

ಹೆಣ್ಣು ತನ್ನವಳೆಂದು ಸ್ನೇಹ ಹಚ್ಚಿ
ಸರಸವಾಗಿ ಇರಬಾರದು

....

ಕುನ್ನಿ ಮಾಡಿ ಕುಣಿಸಿ ಬಾಯಲಿ
ಮಣ್ಣು ಹಾಕಿ ಹಿರಿ ಹಿಗ್ಗುವಳೊ

– ಕೂಡೂರು ಬಸವಲಿಂಗ

ವಚನ ಸಾಹಿತ್ಯದಲ್ಲಿ ಹೆಣ್ಣು ಬೆಳೆದಿದ್ದಾಳೆ, ತತ್ವಪದಕಾರರು ಹೆಣ್ಣನ್ನು ಮಾಯೆ, ಮೋಸದವಳೆಂದು ಹೀಯಗಳೆದಿದ್ದಾರೆ.

ಅಪ್ರಮಾಣಿಕರಾದ ಸ್ತ್ರೀಯರು ಲೋಕದಲ್ಲಿ
ಅರ್ಧಪಾಲು ಇದ್ದಾರೆ.

– ಕೈವಾರ ನಾರಾಯಣರು

ಇಂಥ ಮಾತುಗಳನ್ನು ಕೇಳಿದರೆ ತತ್ವಪದಕಾರರು ಯಾವ ಗುಹೆಯೊಳಗಿಂದ ಮಾತನಾಡುತ್ತಿದ್ದಾರೆ ಎಂಬುದು ಸ್ಪಷ್ಟವಾಗುತ್ತದೆ. ಈ ನಿಲುವು ಗಂಡನ್ನು ರಕ್ಷಿಸುವುದು ಮತ್ತು ಸಮರ್ಥಿಸುವುದು ಎಂದು ಇವರು ನಮ್ಮ ಹಿಂದೂ ಸನಾತನವಾದ ಭಾವಿಸಿದಂತೆ ತಿಳಿದುಕೊಂಡಂತಿದೆ. ಪ್ರಜ್ಞಾವಂತ ಗಂಡಿಗೆ ಇದಕ್ಕಿಂತ ಹೆಚ್ಚು ರೀತಿಯಲ್ಲಿ ಅವಮಾನ ಮಾಡಬೇಕಿಲ್ಲ. ಹೆಣ್ಣನ್ನು ಸಾಂಸ್ಥಿಕ ಕೊಠಡಿಯೊಳಗೆ ಕೂಡಿಕೊಂಡು ಮಾನಭಂಗ ಮಾಡುವ ರೀತಿ ಇದು.

ಹೆಣ್ಣಿನ ಬಗ್ಗೆ ತತ್ವಪದಕಾರರು ಹೇಳುವ ಮಾತುಗಳನ್ನು ನೋಡಿದರೆ ಇವರು 'ಗುಮಾನಿ ಗಂಡಸರು' ಎನಿಸುತ್ತದೆ. ಆಧುನಿಕ ಸಮಾಜ ತಲೆ ತಗ್ಗಿಸುವಂತಾಗುತ್ತದೆ.

ಹಾಗೇನೆ ಮಾರೆಪ್ಪನವರು ಹಾಡುವ ಇನ್ನು ಒಂದು ತತ್ವಪದಗೀತೆಯನ್ನು ಗಮನಿಸಿದಾಗ

ಹದಿನೆಂಟು ಕುಲದೈವ ಕೇಳರಿ
ಯಾರ ಇದೀರಿ ನಿಮ್ಮ ನೀವು ಚೂರ
ಕಲಿಯುಗದಾಗುಟ್ಟಿ ಕರ್ಮ ಕಳೆಯಿರಿ
ಎಲ್ಲೈತೊ ನಿಮ್ಮ ಆಚಾರ

ಪೀರ ಸಾಹೇಬರು ರಚಿಸಿರುವ ಈ ತತ್ವಗೀತೆಯೂ ತತ್ವಪದಕಾರರು ಕುಲದ ಬಗ್ಗೆ ಮಾತನಾಡಿದಾಗ ಖುಷಿ ಪಡುವಂತಾಗುತ್ತದೆ. ಆದರೆ ಅದು ಕುಲ-ಜಾತಿ ವಿರೋಧಿಯಾದ ಧೋರಣೆಯಲ್ಲಿ ಕುಲವೆಂಬುದೆ ಹೊಲಸು ಎಂಬುದು ಅವರ ಸರಳ ತೀರ್ಮಾನ. ಯಾಕೆಂದರೆ ಗಂಡು-ಹೆಣ್ಣು ಹೆಣ್ಣಿನ ಹೊಲೆಯ ಜಾಗದಿಂದ ಹುಟ್ಟಿಬರುವಾಗಲೇ ಅವರು ಅಪವಿತ್ರರಾಗಿರುತ್ತಾರೆ. ಹಾಗಿದ್ದ ಮೇಲೆ ಕುಲದ ಬಗ್ಗೆ ಮಾತನಾಡುವುದರಲ್ಲಿ ಅರ್ಥವಿಲ್ಲ ಎನ್ನುತ್ತಾರೆ.

ತತ್ವಪದಗಳನ್ನು ಸರಳವಾಗಿ ಗ್ರಹಿಸುವುದು ಕಠಿಣ. ಸಂಕೇತ, ಪತ್ರಿಕೆಗಳ ಮೂಲಕ ಅವರು ತಮ್ಮ ವಿಚಾರಗಳನ್ನು ಪ್ರತಿಪಾದಿಸಿದ್ದಾರೆ. ಹೀಗಾಗಿ ಅವುಗಳ ಅಂತರಂಗವನ್ನು ಅರ್ಥೈಸುವುದು ಒಮ್ಮೊಮ್ಮೆ ಸುಲಭ ಸಾಧ್ಯವಿಲ್ಲ. ಉದಾಹರಣೆಯಾಗಿ 'ಬಿದ್ದಿಯಬ್ಬೇ ಮುದುಕಿ', 'ಕೋಡಗನ ಕೋಳಿ ನುಂಗಿತ', 'ಗುಡಿಯ ನೋಡಿರಣ್ಣ' ಮುಂತಾದ ಹಾಡುಗಳನ್ನು ಗಮನಿಸಬಹುದು. ಅಲ್ಲದೆ ಎಲ್ಲ ತತ್ವಪದಕಾರರು ಒಂದೇ ಸಾಮಾಜಿಕ ಹಿನ್ನಲೆಯಿಂದ ಬಂದವರಲ್ಲ. ನಿಜಗುಣರಂತವರು ರಾಜತ್ವ ತ್ಯಜಿಸಿ ವೈರಾಗ್ಯ ಸ್ವೀಕರಿಸಿದರೆ, ಶರೀಫ್‌ರಂತವರು ಅನ್ಯಮತದಿಂದ ಹಿಂದುತ್ವವನ್ನು ಪ್ರವೇಶಿಸಿದ್ದಾರೆ. ಭಾಷೆಯ ವೈವಿಧ್ಯತೆಯನ್ನು ಇಲ್ಲಿ ಕಾಣಬಹುದು.

ಜನನ, ವಿವಾಹ, ಮರಣ, ಜಾತಿ, ಧರ್ಮ, ಶೀಲ, ಮಡಿ, ಮೈಲಿಗೆ, ಸಂಪತ್ತು, ಅಧಿಕಾರ, ವೃತ್ತಿ, ಅಂತಸ್ತು, ಇವು ಎಲ್ಲ ಸಮಾಜಗಳಲ್ಲಿ ಕಾಣುವ ಸಾಮಾಜಿಕ ಅಂಶಗಳಾಗಿವೆ. ಇವುಗಳ

ಬಗ್ಗೆ ಸಮಾಜ ತನ್ನದೇ ಆದ ನಂಬಿಕೆ ಪರಂಪರೆಗಳನ್ನು ಸೃಷ್ಟಿಸಿಕೊಂಡಿರುತ್ತದೆ. ಭಾರತೀಯ ಸಮಾಜದಲ್ಲಿ ಇವುಗಳ ಬಗ್ಗೆ ವಿಚಿತ್ರ ನಂಬಿಕೆ, ಸಂಪ್ರದಾಯಗಳು ರೂಪಗೊಂಡಿವೆ. ಕರ್ಮಸಿದ್ಧಾಂತದ ತಿರುಗುಣಿ ಮಡದಲ್ಲಿ ಭಾರತೀಯರ ಬದುಕು ಗಿರಿಕಿ ಹೊಡೆಯುತ್ತಿರುವಾಗ ಜನನ ಮರಣಗಳಿಗೆ ವಿಭಿನ್ನ ಅರ್ಥ ನೀಡಿ ವ್ಯಕ್ತಿ ತನ್ನ ಸಾಧನೆಯಿಂದ ಶ್ರೇಷ್ಠತೆ ತಲುಪಬಹುದೆಂದು ಮಾರೆಪ್ಪನವರು ತಮ್ಮ ಹಾಡುಗಳಿಂದ ಸಾರಿ ಹೇಳಿದ್ದಾರೆ. ತತ್ವಪದಕಾರರಲ್ಲಿ ವೈರಾಗ್ಯಕ್ಕೆ ಹೆಚ್ಚು ಹೊತ್ತು ಬಿದ್ದಿದ್ದರೂ ಲೌಕಿಕವನ್ನು ತಿರಸ್ಕರಿಸಿದವರಲ್ಲ. ನಿಜಗುಣರು, ಸರ್ಪಭೂಷಣ ಶಿವಯೋಗಿಗಳು, ತೀರಾ ಆಧ್ಯಾತ್ಮ ಚಿಂತಕರಾಗಿದ್ದರೆ ಶರೀಫ್, ಮಡಿವಾಳೇಶ್ವರರಂತವರು ಜನಪದ ಸಾಹಿತಿಗಳಾಗಿದ್ದಾರೆ.

ಭಾರತೀಯ ಸಮಾಜದಲ್ಲಿ ಜನನ, ಜಾತಿ ಹಾಗೂ ಸಂಪ್ರದಾಯಗಳ ಆಚರಣೆಯ ನಡುವೆ ಸಂಬಂಧವಿದೆ. ಪೂರ್ವಜನ್ಮದಲ್ಲಿ ಮಾಡಿದ ಕರ್ಮದ ಪರಿಣಾಮದಿಂದ ವರ್ತಮಾನ ಬದುಕಿನಲ್ಲಿ ವಿಶಿಷ್ಟ ಜಾತಿಯಲ್ಲಿ ವ್ಯಕ್ತಿ ಜನನ ಹೊಂದುತ್ತದೆ ಎಂಬ ನಂಬಿಕೆಯಿದೆ. ಈ ಜಾತಿಗಳು ಶ್ರೇಣೀಕೃತ ವಿಂಗಡಣೆಯನ್ನು ಹೊಂದಿವೆ. ಮೇಲಿನ ಜಾತಿಯವರು ಅತಿ ಹೆಚ್ಚು ಶೀಲ, ಮಡಿ, ಮೈಲಿಗೆ, ಕ್ರಿಯಾವಿಧಿಗಳನ್ನು ಆಚರಿಸಿದರೆ, ಕೆಳಜಾತಿಗಳಲ್ಲಿ ಇವು ಕಡಿಮೆ, ಜನಪದ ಆಧಾರದ ಮೇಲೆಯೇ ಹಿಂದೂ ವ್ಯವಸ್ಥೆ ರೂಪುಗೊಂಡಿದೆ.

ಆದರೆ ಜನಪದ ಬಗ್ಗೆ ವೈಜ್ಞಾನಿಕ ಹಾಗೂ ಕಟುಸತ್ಯ ಹೇಳಿದ ಕೀರ್ತಿ ತತ್ವಪದಕಾರರಿಗೆ ಸಲ್ಲುತ್ತದೆ.

ಕೈವಾರ ನಾರಾಣಪ್ಪನವರು 'ಮಾನವರೆಲ್ಲ ಮೂತ್ರದ್ವಾರದಿಂದ ತೂರಿ ಬಂದವರಾಗಿದ್ದಾರೆ. ಉತ್ತಮ ಕುಲ ಎಂದು ಹೇಳುವುದು ಯುಕ್ತವಲ್ಲ' ಎಂದು ಅಭಿಪ್ರಾಯಪಟ್ಟಿದ್ದಾರೆ. 'ವೀರ್ಯದೊಡನೆ ಮಾತ್ರ ಗರ್ಭವನ್ನು ಪ್ರವೇಶಿಸಿದ ಜೀವನು ದೇಹಧಾರಿಯಾಗಿ ಯೋನಿದ್ವಾರದ ಮೂಲಕ ಹುಟ್ಟಿ ಬರುತ್ತಾನೆ... ಆ ಸ್ಥಾನದ ಬಗ್ಗೆ ಅದೆಷ್ಟು ಮೋಹ' ಎಂದು ಹೇಳುತ್ತ ಪ್ರಪಂಚದ ವ್ಯಾಮೋಹದ ಬಗೆಗೆ ಅಣಕ ಮಾಡಿದ್ದಾರೆ. ಬ್ರಾಹ್ಮಣ್ಯದ ಬಗ್ಗೆ ಕೈವಾರ ನಾರಾಯಣಪ್ಪನವರು ಸಾಮಾಜಿಕ ಚಲನೆಯ ಸಿದ್ಧಾಂತದ ಹಿನ್ನೆಲೆಯಲ್ಲಿ ಕಾಲಜ್ಞಾನ ನುಡಿದಿದ್ದಾರೆ. 'ಅರಸನ ಬಳಿ ಕಾರಕೂನರಾಗಿರುವ ಶ್ರೇಷ್ಠರೆಂದು ಹೆಮ್ಮೆಯಿಂದ ಬೀಗುವ ಬ್ರಾಹ್ಮಣರ ಪ್ರಾಬಲ್ಯ ಸ್ಥಿರವಾಗಿ ಉಳಿಯಲಾರದು' ಎಂದು ಹೇಳುತ್ತಾ ಹುಟ್ಟಿದಾಗ ಎಲ್ಲರೂ ಶೂದ್ರರು, ಬಾಹ್ಯ ಸಂಸ್ಕಾರದಿಂದ ಬ್ರಾಹ್ಮಣತ್ವ ಹೇಗೆ ಬರುತ್ತಾರೆ ಎಂದು ಪ್ರಶ್ನಿಸಿದ್ದಾರೆ.

ಮಾರೆಪ್ಪ ಚೆನ್ನದಾಸರು ಹಾಡುವ ಇನ್ನೂ ಒಂದು ತತ್ವಗೀತೆಯ ರಚನಾಕಾರರಾದ ವಡ್ಡಟ್ಟಿ ಸೋಮನಾಥನನ್ನು ಆರಾಧ್ಯ ದೈವವನ್ನಾಗಿರಿಸಿಕೊಂಡ ಪೀರಸಾಹೇಬರು ಮನುಷ್ಯ ಅಂತರಂಗದಲ್ಲಿಯೇ ಹೊಲಸುಗಳನ್ನು ಇಟ್ಟುಕೊಂಡು ಬಹಿರಂಗದಲ್ಲಿ ಕೃತೀಮ ಆಚರಣೆ ಮಾಡುತ್ತಾನೆಂದು ಛೇಡಿಸಿದ್ದಾರೆ.

ಕೆಟ್ಟ ಹೊಲಸುತನ ಹೊಟ್ಟೆಯೊಳಗಿಟ್ಟುಕೊಂಡು
ಮುಟ್ಟಿ ಮಾಡುತ್ತೀರಿ ಶಿವಧ್ಯಾನ
ಮುಟ್ಟಿನೊಳಗಲಿ ಹುಟ್ಟಿಬಂದಿಯೋ
ಇಷ್ಟಾರ ತಿಳಿಯೋ ಶಿವಧ್ಯಾನ

ಶಿಶುನಾಳ ಶರೀಫ್ ಸಾಹೇಬರು ತೊಗಲಿನ ದೇಹವನ್ನು ಮೈಲಿಗೆಯ ಸಂಕೇತವೆಂದು ಬಳಸಿ ಕೆಳಗಿನಂತೆ ಹುಟ್ಟಿನ ಗುಟ್ಟನ್ನು ರಟ್ಟು ಮಾಡಿದ್ದಾರೆ.

'ಬೋಕಿಯೊಳಗೆ ಮೂರುಲೋಕ ಹುಟ್ಟಿತೋ
ಆ ಕುಲ ಈ ಕುಲ ಎಲ್ಲಿತ್ತೋ
ಜೋಕಿಲೆ ಹದಿನೆಂಟು ಜಾತಿಗೆ ಹೇಳತೀನಿ
ಏಕ ಮುಂಡಗಿ ಮಾಡಿದು ಗೊತ್ತೋ
ತೊಗಲ ಮಲಿಯ ಹಾಲು ಕುಡಿದು ದೊಡ್ಡವರಾಗಿ
ಶೀಲ ಮಾಡುತ್ತೀರಿ ನಾಡೆಲ್ಲಾ
ತಗಲು ಮಾತು ಒಂದು ಚೂರಿಲ್ಲಾ

ತತ್ವಪದಕಾರರು ಜಾತಿಯನ್ನು ಒಂದಿಲ್ಲೊಂದು ರೀತಿಯಿಂದ ಅಲ್ಲಗಳೆದಿದ್ದಾರೆ. ಕೈವಾರ ನಾರಾಯಣಪ್ಪನವರು

ಜಾತಿ ಕೊಂಚಂ ಜೈನ-ಜನಲು ಯವ್ವರು ಲೇರು
ಜಾತಿ ವಿಜಾತುಲನಿ-ಯಂಚರಾದು;

ಜಗತ್ತಿನಲ್ಲಿ ಕೀಳು ಜಾತಿಗೆ ಸೇರಿದವರು ಯಾರು ಇಲ್ಲ...... ಎಲ್ಲರೂ ಮಾನವ ಜಾತಿಗೆ ಸೇರಿದವರು ಎಂದು ಹೇಳಿದ್ದಾರೆ.

ಶೂದ್ರರನ್ನು ನಿಂದಿಸಲು ಕಾರಣವೇನು? ಸಕಲ ದೇಹಗಳಲ್ಲಿ ಸದ್ಗುರು ಪರಮಾತ್ಮನಿದ್ದಾನೆ ಎಂದು ಹೇಳುತ್ತಾ ಮಾನವತೆಯ ಪರಾಕಾಷ್ಟತೆ ಎತ್ತಿ ಹಿಡಿದಿದ್ದಾರೆ.

ಕೂಡಲೂರು ಬಸವಲಿಂಗ ಶರಣರು 'ಹೊಲೆಯರು ನಾವು' ಎಂಬ ಹಾಡಿನಲ್ಲಿ ಶ್ರೇಷ್ಠ ಕನಿಷ್ಠ ಎಂಬ ವಿಂಗಡನೆ ಹೇಗೆ ಸಮಾಜವನ್ನು ಹಾಳು ಮಾಡುತ್ತದೆ ಎಂಬುದನ್ನು ಮಾರೆಪ್ಪ ಚೆನ್ನದಾಸರು ಸರಳವಾಗಿ ಆ ಹಾಡನ್ನು ಹಾಡುತ್ತಾರೆ.

ಮುಟ್ಟಿನಲ್ಲಿ ಹುಟ್ಟಿ ಬಂದು
ಮುಟ್ಟಿಗಿ ತಟ್ಟಿಗಿ ಅನ್ನುವವರು

....

ರಾಷ್ಟ್ರದೊಳಗೆ ಮೇಲು ಕೀಳು
ಸೃಷ್ಟಿಮಾಡಿ ಮೆರೆವವರು
ಶ್ರೇಷ್ಠರೆನಿಸಿ ಮತ್ತೆ ನಷ್ಟರಾಗಿ ಹೋಗುವವರು

ತತ್ವಪದಕಾರರು ವ್ಯಕ್ತಿಯ ಅಂತರಂಗ ಬಹಿರಂಗ ಶುದ್ಧವಾಗಿರಬೇಕೇ ಹೊರತು ಕೇವಲ ಮಡಿ ಮೈಲಿಗೆಯ ಆಚರಣೆಯು ಶ್ರೇಷ್ಠತೆಯ ಅಳತೆಗೋಲು ಆಗಲಾರದೆಂದು ಘೋಷಿಸಿದ್ದಾರೆ.

ಇಂದಿಗೂ ಹಿಂದೂ ಸಮಾಜದಲ್ಲಿ ಗೊಡ್ಡು ಸಂಪ್ರದಾಯಗಳ ಆಚರಣೆಯನ್ನೇ ಧರ್ಮ ಎಂದು ನಂಬಲಾಗಿದೆ. ಇದು ಹೇಗಾಗಿದೆ ಎಂದರೆ ಕೊಬ್ಬರಿಗಿಂತ ಜುಬ್ಬರವೆ ಶ್ರೇಷ್ಠವೆಂದು ನಂಬಿದಂತಾಗಿದೆ. ಮೂಲಭೂತವಾದಿಗಳು ಈ ಸಮಾಜದಲ್ಲಿ ಸೃಷ್ಟಿಸಿದ ಗೊಂದಲ ಬದುಕನ್ನು ಅಸಹನೀಯಗೊಳಿಸಿದೆ. ಇಂಗ್ಲೀಷ್ ಗಾದೆ ಹೇಳುವಂತೆ "ನಿಮ್ಮ ನಿಮ್ಮ ಮನವ ಸಂತೈಸಿಕೊಳ್ಳಿರಿ...." ಎಂದು ಶರಣರು ಹೇಳಿದಂತೆ ತತ್ವಪದಕಾರರು ಕೃತಿಮ ಆಚರಣೆಯನ್ನು ಬಿಟ್ಟು ಆತ್ಮೋನ್ನತಿಗೆ ಒತ್ತುಕೊಟ್ಟಿದ್ದಾರೆ.

"ಕೂಡಲೂರು ಬಸವಲಿಂಗ ಶರಣರು ಚೈತನ್ಯವಿಲ್ಲದ ಪ್ರತಿಮೆಗಳ ಪೂಜೆ ಅಲ್ಲಗಳೆದು' ಮಾತಾಡದೆ ದೇವರಿಗೆ ಬೆಲ್ಲದ ಪಾಯಸ ಎಡೆಮಾಡಿ ಅಡ್ಡಡ್ಡ ಬೀಳುವುದನ್ನು ಖಂಡಿಸುತ್ತಾ ವ್ರತ ನೇಮಗಳ ಮಾಡಿ ಹತನಾಗಿ ಹೋಗುವೆ' ಎಂದು ಎಚ್ಚರಿಸಿದ್ದಾರೆ. ವೀರಶೈವರಿಗೆ ಸೂತಕ ಪಾತಕಗಳೆ ಇಲ್ಲ ಎಂದು ಮೈಲಾರ ಬಸವಲಿಂಗ ಶರಣರು ಘೋಷಿಸಿದ್ದಾರೆ. ಮಡಿವಾಳೇಶ್ವರರು "ಅಲ್ಲಲ್ಲರುಸುತ ಗುಡಿಗಳ ತಿರುಗುವ ಕಳ್ಳ ಜನರಿಗೆ ಕಲ್ಲಂತೆ ಶಿವ" ಎಂದು ಕೃತಾವರಿ ಆಚರಣೆಗಳನ್ನು ಅಲ್ಲಗಳೆದಿದ್ದಾರೆ. ಎಡಗೈ ಹಲವು ಸಾಮಾನ್ಯ ಕೊಡಬೇಕಾದರೂ ಬಲಗೈ ಮುಂದೆ ಹೋಗುತ್ತದೆಯೇ ಹೊರತು ಎಡಗೈ ಅಲ್ಲ ಬಹುಶಃ ಮೈಲಿಗೆ ಕೆಲಸಕ್ಕೆ ಬಳಕೆಯಾಗುವ ಎಡಗೈಗೆ ನಿಷೇಧ ಹೇರಲಾಗಿದೆ.

ಮಾರೆಪ್ಪ ಚೆನ್ನದಾಸರು ಹಾಡುವ ಪೀರಸಾಹೇಬರು ರಚಿಸಿರುವ 'ಹದಿನೆಂಟು ಕುಲದೈವ ಕೇಳರಿ' ಎಂಬ ಹಾಡಿನಲ್ಲಿ ಬಳಕೆಯಾಗಿರುವ ಮೂಲವನ್ನೇ ಪ್ರಶ್ನಿಸಿದ್ದಾರೆ.

"ಮಡಿಯ ಉಡುಪುಗಳನ್ನಿಟ್ಟು ಮೈಯ ತೊಳೆಯುತೀರಿ
ಲಿಂಗುಪೂಜೆ ಎಡಗೈಯಾಗ
ಎಡಗೈಯೆಂಬುದು ಮಡಿ ಹೆಂಗಾಯಿತು
ಒಡದು ಹೇಳ ನಮಗ"

ಎಂದು ಮಡಿ ಮೈಲಿಗೆಯ ಗುಟ್ಟು ಬಿಟ್ಟಿಟ್ಟಿದ್ದಾರೆ. ಭಾರತೀಯ ಪರಂಪರೆಯಲ್ಲಿ ಹೆಣ್ಣು ಮೈಲಿಗೆ ಹಾಗೂ ಮಾಯೆಯ ಸಂಕೇತವಾಗಿದ್ದಾಳೆ. ಮನು ಪ್ರಣೀತ ಹಿಂದೂ ಸಮಾಜದಲ್ಲಿ ನಾರಿ ಪುರುಷನ ದಾರಿ ತಪ್ಪಿಸುವುದಕ್ಕೆ ಹುಟ್ಟಿದ್ದಾಳೆ ಎಂಬ ನಂಬಿಕೆ ಇದೆ. ಆದರೂ ವಿವಾಹ ಒಂದು ಕಡ್ಡಾಯ ಸಂಸ್ಕಾರವಾಗಿ ರೂಪುಗೊಂಡಿದೆ. ಮಹಿಳೆಯ ಬಗ್ಗೆ ಇರುವ ಈ ನಂಬಿಕೆ ಅವಳ ಸಾಮಾಜಿಕ ಅಂತಸ್ತಿನ ಮೇಲೆ ವಿಭಿನ್ನ ಪರಿಣಾಮ ಬೀರಿದೆ. ತತ್ವಪದಕಾರರು ಹೆಣ್ಣನ್ನು ಹೀಗಳೆದಿಲ್ಲ. ಆದರೆ ಸಂಸಾರದ ವ್ಯಾಮೋಹಕ್ಕೆ ಬಿದ್ದು ಮಾನವ ಹೇಗೆ ಹಾಳಾಗುತ್ತಾನೆ ಎಂಬುದನ್ನು ತತ್ವಪದಕಾರರು ತಮ್ಮದೇ ಆದ ರೀತಿಯಲ್ಲಿ ವ್ಯಕ್ತಪಡಿಸಿದ್ದಾರೆ.

ಜೀವನದ ರಹಸ್ಯವನ್ನು ಧ್ವನಿಸುವ ಕಾವ್ಯ ಪ್ರತಿಮೆಯಾಗಿ ಪರಿಣಮಿಸಿರುವ 'ಹಾವು ತುಳಿದೇನೆ ಮಾನಿನಿ' ಎಂಬ ತತ್ವಪದವನ್ನು ನೋಡಿದಾಗ

"ಹಾವು ತುಳಿದೇನೆ ಮಾನಿನಿ
ಹಾವು ತುಳಿದೇನೆ
ಹಾವು ತುಳಿದು ಹಾರಿನಿಂತೆ
ಜೀವ ಕಳವಳಸಿರು ಗೆಳತಿ ॥ಪ॥
ದೇಹತ್ರಯದ ಸ್ಮೃತಿಯ ತಪ್ಪಿ
ದೇವಾ ನೀನೆ ಗತಿಯು ಎಂದು ॥೧॥

"ಶೈವ ವೈಷ್ಣವರ ಶಿವ ಸರ್ವೋತ್ತಮ ಮತ್ತು ವಿಷ್ಣು ಸರ್ವೋತ್ತಮ ಎಂಬ ಪರಸ್ಪರ ವಿರುದ್ಧ ವಾದವನ್ನು ಇಲ್ಲಿ ಬಳಕೆಯಾಗಿರುವ 'ಹಾವು ಪರಿಹರಿಸಬಲ್ಲದು' ಎಲ್ಲ ಮತ-ಪಂಥಗಳನ್ನು ಮೀರಿ ನಿಂತ ಹಾಗೂ ಶರೀಫರ ಮತ ಸಹಿಷ್ಣುತೆಗೆ ಎಲ್ಲ ಧರ್ಮಗಳ ದೇವಾನುದೇವತೆಗಳನ್ನು ಸ್ತುತಿಸಿರುವುದನ್ನು ಗಮನಿಸಬೇಕು. ಬಸವೇಶ್ವರ ದಂಡಕ, ಹನುಮಂತ ದೇವರ-ದಂಡಕ, ಶ್ರೀಕೃಷ್ಣ ದಂಡಕ, ಶಿವಪರಾಧಸ್ತೋತ್ರ ದಂಡಕಗಳನ್ನು ಗಮನಿಸಬೇಕು. ಸರ್ವಧರ್ಮ ಸಮನ್ವಯಕಾರ ಶರೀಫರು ಸರ್ವಧರ್ಮಗಳ ಅಧಿದೇವತೆಗಳನ್ನು ಕುರಿತು ಮಂಗಳ ಪದಗಳನ್ನು ಬರೆದಿದ್ದಾರೆ.

ಅಡಿಟಿಪ್ಪಣಿಗಳು:

೧. ಬರಗೂರು ರಾಮಚಂದ್ರಪ್ಪ (ಸಂ); ಕನ್ನಡ ತತ್ವಪದಕಾರರು, ಪುಟ-೧೨೮-೧೨೯.

೨. ಅದೇ, ಪುಟ-೧೩೬.

೩. ಅದೇ, ಪುಟ-೪೧.

೪. ಅದೇ, ಪುಟ-೬೦

ಅಧ್ಯಾಯ ಐದು

ಸಮಾರೋಪ

ಸಮಾರೋಪ

ಕೊಪ್ಪಳ ಜಿಲ್ಲೆಯ ಯಲಬುರ್ಗಾ ತಾಲ್ಲೂಕಿನಲ್ಲಿ ವಾಸವಾಗಿರುವಂತಹ ಮಾರೆಪ್ಪ ಚೆನ್ನದಾಸರು ಹೈದ್ರಾಬಾದ್ ಕರ್ನಾಟಕ ಭಾಗದ ಪ್ರಮುಖ ತತ್ವಪದ ಗಾಯಕರಾಗಿ, ಉತ್ತರ ಕರ್ನಾಟಕದ ಸಾಂಸ್ಕೃತಿಕ ಪ್ರತಿನಿಧಿಯಾಗಿ ತತ್ವಪದಗಳನ್ನು ಉಳಿಸಿಕೊಂಡು, ಬೆಳೆಸಿಕೊಂಡು ಬರುವಲ್ಲಿ ತಮ್ಮದೇ ಆದ ಕೊಡುಗೆಯನ್ನು ನೀಡಿದ್ದಾರೆ. ಹಾಗೇನೆ ಇವರು ಕನ್ನಡ ಜಾನಪದ ಸಾಹಿತ್ಯಕ್ಕೆ 'ಮರ್ಯಾದೆಯಿಂದ ಬಾಳಿರೋ', ಹಾಗೂ 'ನ್ಯಾಯಗಳಿಸಿರಯ್ಯಾ' ಎಂಬಂತಹ ತತ್ವಪದಗಳನ್ನು ರಚಿಸಿ ತಮ್ಮದೇ ಆದ ಕೊಡುಗೆಯನ್ನು ನೀಡಿದ್ದಾರೆ. ಇವರ ತತ್ವಪದಗಳಲ್ಲಿ 'ಭಕ್ತಿ, ವೈರಾಗ್ಯ, ಜ್ಞಾನ, ಮೋಕ್ಷ, ಪ್ರಾಮಾಣಿಕತೆ, ನ್ಯಾಯ, ನಿಷ್ಠುರತೆ, ಸಾಮಾಜಿಕ ವಿಡಂಬನೆ' ಮುಂತಾದ ಅಂಶಗಳನ್ನು ಗುರುತಿಸಬಹುದು. ಅಷ್ಟೇ ಅಲ್ಲದೇ ಇವರು ತತ್ವಪದ ಗಾಯಕರಾಗಿ ನೂರಾರು ತತ್ವಪದಗಳನ್ನು ಹಾಡಿ ತತ್ವಪದಸಾಹಿತ್ಯಕ್ಕೆ ನೀಡಿದ ಕೊಡುಗೆಯನ್ನು ಅಧ್ಯಯನದ ಫಲಿತಗಳಲ್ಲಿ ಕಂಡುಕೊಳ್ಳಲಾಗಿದೆ.

ಮಾರೆಪ್ಪ ಚೆನ್ನದಾಸರು ಕಡುಬಡತನದಲ್ಲಿ ಜನಿಸಿ ಜೋಪಡಿಯ ಮಧ್ಯದಲ್ಲಿ ಬುಡ್ಡಿಯ ಬೆಳಕಿನಲ್ಲಿ ಅರಳಿದ ಈ ಪ್ರತಿಭೆ ಮುಂದೊಂದು ದಿನ ಇಡೀ ನಾಡು ಹೊಗಳುವಂತಹ ತತ್ವಪದ ಗಾಯಕರಾಗಿ ಬೆಳೆದು ಬಂದಂತಹ ಅಂಶವನ್ನು ಈ ಅಧ್ಯಯನದಿಂದ ಕಂಡುಕೊಂಡಿದ್ದೇನೆ.

ಮಾರೆಪ್ಪ ಚೆನ್ನದಾಸರು ತಮ್ಮ ಶಿಕ್ಷಣವನ್ನು ಕೇವಲ ನಾಲ್ಕನೇ ತರಗತಿಗೆ ಮೊಟಕು ಗೊಳಿಸಿದ್ದರೂ ಜನಪದ ಕಲೆಯಾದ ಹಾಡುಗಾರಿಕೆಯನ್ನು ಬಿಡದೆ ಬೆಳೆಸಿಕೊಂಡು ಬಂದು ತತ್ವಪದ ಪರಂಪರೆಯನ್ನು ಶ್ರೀಮಂತಗೊಳಿಸಿದ್ದಾರೆ.

ಮಾರೆಪ್ಪ ಚೆನ್ನದಾಸರು ಮಾರೆಪ್ಪ ಮತ್ತು ದುರುಗಮ್ಮ ಎಂಬ ದಂಪತಿಗಳ ಮಗನಾಗಿ ಜನಿಸಿದರು. ಇವರ ತಂದೆ ಕೋಲೆ ಬಸವನನ್ನು ಹಿಡಿದುಕೊಂಡು ಮನೆ ಮನೆಗೆ ಹೋಗಿ ಭಿಕ್ಷೆಯನ್ನು ಬೇಡಿ ಉಪಜೀವನವನ್ನು ಸಾಗಿಸುತ್ತಿದ್ದರು. ಇವರಿಗೆ ಹೊಲ, ಮನೆ, ಏನೂ ಇರಲಿಲ್ಲ. ಅಲೆಮಾರಿ ಜೀವನವನ್ನು ನಡೆಸಿ ಹೊಟ್ಟೆ ತುಂಬಿಸಿಕೊಳ್ಳುತ್ತಿದ್ದರು. ದಿನದಿಂದ ದಿನಕ್ಕೆ ಕುಟುಂಬದ ಸಮಸ್ಯೆಗಳು ಹೆಚ್ಚಿದಾಗ ಕುಟುಂಬದ ಜವಬ್ದಾರಿ ಮಾರೆಪ್ಪನವರ ಮೇಲೆ ಬಿತ್ತು. ಆಗ ಮಾರೆಪ್ಪನವರು ಹೆಗಲಿಗೆ ಜೋಳಿಗೆಯನ್ನು ಹಾಕಿಕೊಂಡು ಏಕತಾರಿ ಹಿಡಿದು ತತ್ವಪದಗಳನ್ನು

ಹಾಡುತ್ತಾ ಭಿಕ್ಷಾಟನೆಯನ್ನು ಮಾಡಿ ತಮ್ಮ ಜೀವನವನ್ನು ಸಾಗಿಸುತ್ತಿದ್ದರು ಎಂಬ ಅಂಶಗಳನ್ನು ಈ ಅಧ್ಯಯನದಲ್ಲಿ ಕಂಡುಕೊಂಡಿದ್ದೇನೆ.

ಮಾರೆಪ್ಪ ಚೆನ್ನದಾಸರು ಬೀದಿ ಬೀದಿಗಳಲ್ಲಿ ಅಲೆಯುತ್ತಾ ಏಕತಾರಿ ಮೀಟಿ ದಾಸರ ಕೀರ್ತನೆಗಳನ್ನು, ತತ್ವಪದಗಳನ್ನು ಹಾಡುತ್ತಾ ರಾಜ್ಯಾದ್ಯಂತ ಸಂಚರಿಸಿ ಹಲವಾರು ಕಾರ್ಯಕ್ರಮಗಳನ್ನು ನೀಡಿ ದೆಹಲಿಯವರೆಗೂ ಹೋಗಿ ತಮ್ಮ ಕಲಾ ಪ್ರೌಢಿಮೆಯನ್ನು ಮೆರೆದಿದ್ದಾರೆ.

ಮಾರೆಪ್ಪ ಚೆನ್ನದಾಸರು ಜನಪದ ಕಲೆಯನ್ನು ಉಳಿಸಿ ಬೆಳೆಸುವಂತಹ ಅಪ್ರತಿಮ ವ್ಯಕ್ತಿಯಾಗಿ ರೂಪಗೊಂಡಿದ್ದರೂ ಸಹ ಅವರ ಜೀವನ ನಿರ್ವಹಣೆಗೆ ಅಗತ್ಯವಾಗಿ ಬೇಕಾಗಿರುವಂತಹ ಮೂಲಭೂತ ಸೌಕರ್ಯಗಳನ್ನು ಒದಗಿಸಿಕೊಡುವಲ್ಲಿ ಸರ್ಕಾರ ಮತ್ತು ಸಂಘ-ಸಂಸ್ಥೆಗಳು ವಿಫಲವಾಗಿವೆ ಎಂಬಂತಹ ಅಂಶವನ್ನು ಈ ಅಧ್ಯಯನದ ಫಲಿತಗಳಲ್ಲಿ ಕಂಡುಕೊಂಡಿದ್ದೇನೆ.

ಮಾರೆಪ್ಪ ಚೆನ್ನದಾಸರು ಗ್ರಾಮದ ನೆರೆಹೊರೆಯ ಜನರೊಂದಿಗೆ ಪ್ರೀತಿ, ವಿಶ್ವಾಸ, ನಂಬಿಕೆಗಳೊಂದಿಗೆ ಜೀವನವನ್ನು ಸಾಗಿಸುತ್ತಿದ್ದರು. ಆದರೆ ಇವರು ಎಂದಿಗೂ ಜಾತಿಬೇಧವನ್ನು ಮಾಡಿದವರಲ್ಲ. ಸಮಾಜದಲ್ಲಿ ನಾವೆಲ್ಲರೂ ಒಂದೇ ಎಂಬ ಮನೋಭಾವನೆಯನ್ನು ಇಟ್ಟುಕೊಂಡು ಇದರ ಹಿನ್ನೆಲೆಯಲ್ಲಿ ತತ್ವಪದಗಳನ್ನು ರಚಿಸಿ ಜನರಿಗೆ ಸಂದೇಶವನ್ನು ನೀಡಿದಂತಹ ತತ್ವಪದ ಗಾಯಕರಾಗಿದ್ದಾರೆ.

ಮಾರೆಪ್ಪ ಚೆನ್ನದಾಸರು ದೇವರಲ್ಲಿ ನಂಬಿಕೆ, ಪೂಜೆ ಪುನಸ್ಕಾರಗಳಲ್ಲಿ ಇಟ್ಟಿರುವ ಅಧ್ಯಾತ್ಮಿಕತೆಯ ಅಂಶವನ್ನು ತಿಳಿದುಕೊಳ್ಳಲಾಗಿದೆ.

ಮಾರೆಪ್ಪ ಚೆನ್ನದಾಸರು ಗ್ರಾಮೀಣ ಪ್ರದೇಶಗಳಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಪ್ರಸಾರ ಮಾಡುವಂತಹ ಮಾಧ್ಯಮಗಳು, ಚಲನಚಿತ್ರಗಳು ಇಲ್ಲದೇ ಇರುವಂತಹ ಸಮಯದಲ್ಲಿ ಒಬ್ಬ ಶ್ರೇಷ್ಠ ಕಲಾವಿದನಾಗಿ ಪ್ರತಿಯೊಂದು ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಗ್ರಾಮೀಣ ಜನರಿಗೆ ತಮ್ಮ ತತ್ವಪದಗಳ ಮೂಲಕ ನೀತಿ ಬೋಧನೆ ಜೊತೆಗೆ ಮನರಂಜನೆಯನ್ನು ನೀಡುತ್ತಿದ್ದರು ಎಂಬುದನ್ನು ಸಾಂಸ್ಕೃತಿಕ ಅಂಶಗಳಲ್ಲಿ ಕಂಡುಕೊಂಡಿದ್ದೇನೆ.

ವಚನಗಳು ಮತ್ತು ಕೀರ್ತನೆಗಳಲ್ಲಿ ಅನುಭಾವ ತುಂಬಿದೆ. ಆದರೆ ತತ್ವಪದಕಾರರನ್ನು ಮಾತ್ರ ಅನುಭಾವಿ ಕವಿಗಳೆಂದು ಕರೆಯಲಾಗಿದೆ. ತತ್ವಪದಕ್ಕೂ ಅನುಭಾವಕ್ಕೂ ಹೇಗೆ ಅವಿನಾಭಾವ ಸಂಬಂಧವಿದೆ ಎಂಬ ಅಂಶವನ್ನು ಈ ಅಧ್ಯಯನದಿಂದ ಕಂಡುಕೊಳ್ಳಲಾಗಿದೆ.

ಇವರು ಹಾಡಿರುವ ತತ್ವಪದಗಳಲ್ಲಿ ಭಕ್ತಿ, ಜ್ಞಾನ, ವೈರಾಗ್ಯ, ವೈಕುಂಠದ ವರ್ಣನೆ, ಮೋಕ್ಷಸಂಪಾದನೆ ಹಾಗೂ ಮಾನವೀಯ ಮೌಲ್ಯಗಳಾದ ಸ್ನೇಹ, ತ್ಯಾಗ, ನೀತಿ, ಅಂತಃಕರಣ,

ಪಾಪ, ಪುಣ್ಯಗಳಂತಹ ವಿಚಾರಗಳು ಹಾಗೂ ಜಾತಿ, ಮತ, ಪಂಥ ಹಾಗೂ ಪ್ರೀತಿ, ವಿಶ್ವಾಸ, ನಂಬಿಕೆ, ಮಮತೆ, ವಾತ್ಸಲ್ಯ, ಕೌಟುಂಬಿಕ ಸಂಬಂಧಗಳು, ಸಾಮಾಜಿಕ ಸಂಬಂಧಗಳು ಹೇಗೆ ಕಂಡುಬರುತ್ತವೆ ಎಂಬ ಅಂಶಗಳನ್ನು ತತ್ವಪದಗಳ ವಿಶ್ಲೇಷಣೆಯ ಅಧ್ಯಯನದಿಂದ ಕಂಡುಕೊಂಡಿದ್ದೇನೆ.

ಅರಿಷಡ್ವರ್ಗಗಳಾದಂತಹ ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರ, ಹಾಗೂ ಸಪ್ತವ್ಯಸನಗಳಾದ ಬೇಟೆ, ಮಧ್ಯಪಾನ, ದ್ಯೂತ, ಕಠಿಣಮಾತು, ಕಠಿಣ ಶಿಕ್ಷೆ, ಕಠಿಣದಂಡ, ವ್ಯಭಿಚಾರ ಇಂತಹ ದುಶ್ಚಟಗಳಲ್ಲಿ ಮನುಷ್ಯನು ಸಿಲುಕಿ ಹೇಗೆ ವಿನಾಶದ ಅಂಚಿನಲ್ಲಿ ಸಾಗುತ್ತಿದ್ದಾನೆ ಎಂಬಂತಹ ಸಂದೇಶವನ್ನು ಸಾರಿ ಇವುಗಳಿಂದ ಮುಕ್ತಿ ಪಡೆಯುವ ಮಾರ್ಗವನ್ನು ಇವರು ಹಾಡಿರುವ ತತ್ವಪದಗಳಲ್ಲಿ ಗುರುತಿಸಿದ್ದೇನೆ.

ಒಟ್ಟಾರೆಯಾಗಿ ಪ್ರಮುಖ ತತ್ವಪದಕಾರರಾಗಿರುವಂತಹ ಶಿಶುನಾಳ ಶರೀಫರು, ಕಡಕೋಳ ಮಡಿವಾಳಪ್ಪ, ಪುರುಂದರದಾಸರು, ಕನಕದಾಸರು, ಗರಗದ ಮಡಿವಾಳಪ್ಪ, ತಾಳಕೇರಿ ಬಸವರಾಜಪ್ಪ, ಸಿದ್ಧರಾಮೇಶ್ವರ ತಮ್ಮಡಿಗೆಸ್ವಾಮಿ ಈ ಮುಂತಾದವರು ರಚಿಸಿದ ತತ್ವಪದಗಳನ್ನು ಇವರು ಹಾಡುವುದರ ಜೊತೆಗೆ ಲಾವಣಿಪದಗಳನ್ನು, ಗೋವಿನ ಹಾಡಿನಂತಹ ಪದ್ಯಗಳನ್ನು ಹಾಡುವಲ್ಲಿ ಪ್ರಭುತ್ವ ಸಾಧಿಸಿರುವ ಅಂಶಗಳನ್ನು ಈ ಅಧ್ಯಯನದ ಫಲಿತಗಳಲ್ಲಿ ಕಂಡುಕೊಂಡಿದ್ದೇನೆ.

ಭಾರತೀಯ ಸಮಾಜದಲ್ಲಿ ತತ್ವಪದ ಮತ್ತು ತತ್ವಪದಗಳನ್ನು ಹಾಡುವ ಗಾಯಕರನ್ನು ಇವರು ಯಾವ ವರ್ಗದಲ್ಲಿ ನಿಲ್ಲುತ್ತಾರೆ ಎಂಬ ಅಂಶವನ್ನು ದಾಸರ ಹಿನ್ನೆಲೆಯಲ್ಲಿ ಗುರುತಿಸಿದ್ದೇನೆ.

ಜಾನಪದ ಜಗತ್ತು ಸಾಗರವಿದ್ದಂತೆ ಅದರಲ್ಲೂ ನಮ್ಮ ಕರ್ನಾಟಕದ ಜಾನಪದವೂ ವಿಶೇಷವಾಗಿದ್ದು ಇಂಥ ಜಾನಪದ ಲೋಕದಲ್ಲಿ ಮಾರೆಪ್ಪ ಚೆನ್ನದಾಸರು ತಮ್ಮ ಜೀವನುದುದ್ದಕ್ಕೂ ಕಲೆಯನ್ನು ಅಳವಡಿಸಿಕೊಂಡು ಕರ್ನಾಟಕದಾದ್ಯಂತ ಅದರ ಕಂಪನ್ನು ಸೂಸಿ, ಈ ಜಾನಪದ ಸಂಸ್ಕೃತಿ, ಕಲೆ, ಸಾಹಿತ್ಯ, ಸಂಗೀತ ಹಾಗೂ ಜಾನಪದ ಜನಾಂಗೀಯ ಬೆಳವಣಿಗೆಯಲ್ಲಿ ಅಪೂರ್ವವಾದ ಸೇವೆಯನ್ನು ಸಲ್ಲಿಸಿ ಕರ್ನಾಟಕದಿಂದ ದೂರದ ದೆಹಲಿಯವರೆಗೂ ಹೋಗಿ ತಮ್ಮ ಅದ್ಭುತವಾದ ಕಲಾ ಪ್ರದರ್ಶನವನ್ನು ನೀಡಿ ಬಂದಿದ್ದಾರೆ.

ಹೀಗೆ ಪರಂಪರೆಯಿಂದ ಬಳುವಳಿಯಾಗಿ ಬಂದ ಕಲೆಯನ್ನು ಮಾರೆಪ್ಪ ಚೆನ್ನದಾಸರು ಜಾಗೃತಿಯಾಗಿ ಉಳಿಸಿಕೊಂಡು ಬಂದಿದ್ದಾರೆ. ಮತ್ತು ಅದನ್ನು ಪರಿಣಾಮಕಾರಿಯಾಗಿ ಜನಗಳಿಗೆ ಪ್ರದರ್ಶಿಸುವ ತಂತ್ರಗಾರಿಕೆಯನ್ನು ಬೆಳೆಸಿಕೊಂಡು ಬಂದವರಾಗಿದ್ದಾರೆ. ಕರ್ನಾಟಕ ಸಂಸ್ಕೃತಿಯ ಬಹು ಅಮೂಲ್ಯವಾದ ಕಲೆಯೊಂದರ ಪ್ರತಿನಿಧಿಯಾಗಿರುವ ಮಾರೆಪ್ಪ ಚೆನ್ನದಾಸರಿಗೆ ಸರ್ಕಾರ, ಸಂಘ ಸಂಸ್ಥೆಗಳು ಇನ್ನೂ ಹೆಚ್ಚಿನ ರೀತಿಯಲ್ಲಿ ನೆರವನ್ನು ನೀಡಿದರೆ ಪರಂಪರಾಗತವಾಗಿ ಬಂದ ಈ ಕಲೆಯನ್ನು ಇವರ ಮಕ್ಕಳು ಮುಂದುವರಿಸಿಕೊಂಡು ಹೋಗುವುದಕ್ಕೆ ಸಹಾಯಕವಾಗುತ್ತದೆ.

ಅನುಬಂಧ

ಮಾರೆಪ್ಪ ಚೆನ್ನದಾಸರ ಸಂದರ್ಶನ

ವಕ್ತೃಗಳ ವಿವರ

ಪ್ರಶಸ್ತಿ ಪುರಸ್ಕಾರಗಳು

ಗ್ರಂಥಋಣ

ಛಾಯಾಚಿತ್ರಗಳು

ಮಾರೆಪ್ಪ ಚೆನ್ನದಾಸರ ಸಂದರ್ಶನ

೧. ಯಜಮಾನ್ರೆ ನಿಮ್ಮ ಹೆಸರು

ಮಾರೆಪ್ಪ

೨. ನಿಮ್ಮ ತಂದೆ ತಾಯಿಗಳು

ತಂದೆ ಮಾರೆಪ್ಪ, ತಾಯಿ ದುರುಗಮ್ಮ

೩. ನಿಮ್ಮ ಜನ್ಮ ಸ್ಥಳ

ಗದಗ ಜಿಲ್ಲೆಯ ಮುಳುಗುಂದ ಗ್ರಾಮ

೪. ನೀವು ಜನಿಸಿದ ವರ್ಷ

೧೬.೦೧.೧೯೩೧.

೫. ನೀವು ಮುಳಗುಂದದಲ್ಲಿ ಎಷ್ಟು ವರ್ಷ ವಾಸವಾಗಿದ್ರೀ

ನಾನು ಹುಟ್ಟಿದ ನಾಲ್ಕೇ ದಿನಗಳಲ್ಲಿ ಬೇರೆ ಊರಿಗೆ ಪ್ರಯಾಣ ಬೆಳೆಸಿದೆವೆಂದು ಮನೆಯಲ್ಲಿ ಹೇಳುತ್ತಾರೆ.

೬. ಅಲ್ಲಿಂದ ಬೇರೆ ಕಡೆ ಬರಲು ಕಾರಣ

ನಮ್ಮದು ಅಲೆಮಾರಿ ಬದುಕುರ್ರಿ, ಒಂದೇ ಕಡೆ ಇದ್ರೆ ನಮ್ಮ ಜೀವನ ಸಾಗಬೇಕಲ್ರಿ,

೭. 'ಮುಳಗುಂದ ಬಿಟ್ಟ ಮೇಲೆ ಯಾವ ಪ್ರದೇಶದಲ್ಲಿ ನೆಲೆಯೂರಿದ್ರೀ

ಅಲ್ಲಿಂದ ಕೊಪ್ಪಳ ಜಿಲ್ಲಾ ಯಲಬುರ್ಗಾ ತಾಲ್ಲೂಕಿನ ಲಿಂಗನಬಂಡಿಗೆ ಬಂದು ನೆಲೆಸಿದವು.

೮. ನೀವು ಓದಿದ್ದು

ಲಿಂಗನಬಂಡಿಯಲ್ಲಿಯೇ ನಾನು ಶಾಲೆ ಓದಿದ್ದು.

೯. ಎಷ್ಟನೇ ತರಗತಿವರೆಗೆ ಅಭ್ಯಾಸ ಮಾಡಿದ್ದೀರಿ

ನಾನು ಓದಿದ್ದು ನಾಲ್ಕನೇ ತರಗತಿವರೆಗೆ ಮಾತ್ರ

೧೦. ನೀವು ವಿದ್ಯಾಭ್ಯಾಸವನ್ನು ಅಷ್ಟಕ್ಕೆ ನಿಲ್ಲಿಸಲು ಕಾರಣ

ಲಿಂಗನಬಂಡಿಯಲ್ಲಿ ನಾಲ್ಕನೇ ತರಗತಿವರೆಗೆ ಮಾತ್ರ ಶಾಲೆ ಇತ್ತು. ಮುಂದಿನ ತರಗತಿಗೆ ಹೋಗಬೇಕಾದರೆ ಗಾವೂದ ದೂರ ನಡೆದುಕೊಂಡೇ ಹೋಗಬೇಕಾಗಿತ್ತು. ಈಗಿನ ಹಾಗೆ ಬಸ್ಸಿನ ಸೌಕರ್ಯ ಆಗ ಇದ್ದಿಲ್ಲ. ಆ ಕಾರಣದಿಂದ ನಾನು ಮುಂದೆ ಅಭ್ಯಾಸ ಮಾಡುವುದಕ್ಕೆ ಸಾಧ್ಯವಾಗಲಿಲ್ಲ.

೧೧. ಮುಂದೆ ನಿಮ್ಮ ಬದುಕಿನ ಬಂಡಿ ಲಿಂಗನಬಂಡಿಯಿಂದ ಎಲ್ಲಿಗೆ ಸಾಗಿತು

ಲಿಂಗನಬಂಡಿಯಿಂದ ರಾಯಚೂರ ಜಿಲ್ಲಾ ಲಿಂಗಸೂರು ತಾಲ್ಲೂಕಿನ ನೀರಲೂಟಿ ಎಂಬಲ್ಲಿಗೆ ಹೋಗಿ ಬಿಡಾರ ಹೂಡಿದೆವು. ಚಿಕ್ಕಂದಿನಲ್ಲಿಯೇ ಕೈಯಲ್ಲಿ ಒಂದು ಏಕತಾರಿ ಹಿಡಿದುಕೊಂಡು ಊರೂರು ತಿರುಗುತ್ತ ತತ್ವಪದಗಳನ್ನು ಹಾಡಿ ಭಿಕ್ಷಾ ಬೇಡುವುದೇ ನನ್ನ ಕಾಯಕವಾಗಿ ಹೋಯಿತು. ಮೀನಿಗೆ ಈಜು ಹೇಗೆ ಬರುತ್ತದೋ ಅದೇ ರೀತಿ ನನಗೂ ಹಾಡುವುದು ಹುಟ್ಟಿನಿಂದಲೇ ರೂಢಿಯಾಯಿತು. ತತ್ವಪದ ಎಂದರೆ ಅಪಾರ ಅರ್ಥವನ್ನು ಹೊರಸೂಸುವ ಪದಬಂಧ. ಅದಕ್ಕೆ ತಕ್ಕ ಲಯ, ಭಾವ ಹೊಸೆದು ಹಾಡುವುದನ್ನು ಕಲಿತೆ. ಶಾಸ್ತ್ರೋಕ್ತವಾಗಿ ಸಂಗೀತ ಕಲಿಯಬೇಕೆಂಬ ನನ್ನ ಬಯಕೆ ಈಡೇರಲಿಲ್ಲ.

೧೨. ಸಂಗೀತಾಭ್ಯಾಸ ಮಾಡುವ ಸಮಯದಲ್ಲಿ ನಿಮಗಾದ ತೊಂದರೆ

ಮೊದಲು ನಾನು ಏಕತಾರಿ ಹಿಡಿದು ಹಾಡಲು ಪ್ರಾರಂಭಿಸಿದೆ. 'ಏಕತಾರಿ' ಅಂದರೆ 'ಸಿಂಗ್ರಿ'ಕಾಯಿಯಿಂದ ಮಾಡಿದ್ದು, ಇದಕ್ಕೆ ಒಂದೇ ತಂತಿ ಇರುತ್ತದೆ. ನಂತರದಲ್ಲಿ ಮೂರು ತಂತಿಯ ತಂಬೂರಿ ನುಡಿಸುವುದನ್ನು ಕಲಿತುಕೊಂಡೆ. ಆಮೇಲೆ ರಾಮಣ್ಣ ಮಾಸ್ತರರ ಬಳಿ ಸಂಗೀತ ಹೇಳಿಸಿಕೊಳ್ಳಲು ಹೋದೆ. ಅವರು ಪಿಟೀಲು ನುಡಿಸಿ ಸಂಗೀತ ಹೇಳಿಕೊಡುತ್ತಿದ್ದರು. ಮೂರುವರ್ಷ ಕಳೆದರೂ ರಾಮಣ್ಣ ಮಾಸ್ತರರು ಸರಿಗಮ ಬಿಟ್ಟು ಮುಂದಕ್ಕೆ ಸರಿಯಲಿಲ್ಲ. ಪದನಿಸ ಹೇಳಿಕೊಡುವುದನ್ನೇ ಮರೆತ ಅವರ ಬಳಿ ಇದ್ದರೆ, ಈಗ ಬರುವ ಅಷ್ಟು ಇಷ್ಟು ಪದವೂ ಮರೆತು ಹೋದೀತು ಎಂದು ಹೆದರಿ ಇವರ ಬಳಿ ಸಂಗೀತ ಕಲಿಯುವುದೇ ಬೇಡ ಎಂದು ತೀರ್ಮಾನಿಸಿ ಹೆಗಲಿಗೊಂದು ಜೋಳಿಗೆ ತಗುಲಿ ಹಾಕಿಕೊಂಡು ಪಿಟೀಲು ಹಿಡಿದುಕೊಂಡು ಊರೂರು ಅಲೆಯುತ್ತಾ ಹೊರಟೆ. ಪದ ಪದ ಸೇರಿದರೆ ಪಲ್ಲವಿಯಾಗುತ್ತದೆ. ಅಲ್ಲಲ್ಲಿ ದೊರೆತಂತಹ ಪದಗಳು ನಮ್ಮೂರಿನ ಜನ ಹಾಡಿಕೊಳ್ಳುತ್ತಿದ್ದ ಅರ್ಥಗರ್ಭಿತ ಹಾಡುಗಳನ್ನು ಸಂಗ್ರಹಿಸಿ ಹಾಡುವುದರಲ್ಲೇ ಹೆಚ್ಚು ಖುಷಿಯಾಗುತ್ತದೆ ಎಂಬುದನ್ನು ಅರಿತು ಹಾಡುವುದನ್ನೇ ಕಾಯಕವಾಗಿಸಿಕೊಂಡೆ.

[illegible]

[illegible]

[illegible]

[illegible]

೧೩. ನೀವೊಬ್ಬ ಉತ್ತಮ ತತ್ವಪದ ಗಾಯಕನೆಂದು ಮೊದಲು ಗುರುತಿಸಿದವರು

ಡಾ. ಮಲ್ಲಿಕಾರ್ಜುನ ಮನ್ಸೂರ್

೧೪. ನಿಮಗೆ ಹೆಚ್ಚಿನ ಪ್ರೇರಣೆ, ಪ್ರೋತ್ಸಾಹ, ನೀಡಿದ ಸಂಗೀತಗಾರರು

ಅದೊಂದು ದಿನ ನಾನು ಧಾರವಾಡದ ಬೀದಿ ಬೀದಿಯಲ್ಲಿ ಹಾಡುತ್ತಾ ಇದ್ದೆ. ನನ್ನ ಹಾಡುಗಳನ್ನು ಕೇಳಿಸಿಕೊಂಡ ಅದೇ ಓಣಿಯಲ್ಲಿರುವ ಮಲ್ಲಿಕಾರ್ಜುನ ಮನ್ಸೂರ್‌ರು ನಮ್ಮನ್ನು ತಮ್ಮ ಮನೆಗೆ ಕರೆಯಿಸಿ ಮತ್ತೊಮ್ಮೆ ಹಾಡಲು ಸೂಚಿಸಿದರು. ಆಗ ಮನೆ ಹೊರಗೆ ಕೂತು ಎರಡು ತತ್ವಪದಗಳನ್ನು ಹಾಡೆದೆವು. ಆಗ ನಮ್ಮ ಹಾಡಿಗೆ ಮೆಚ್ಚುಗೆ ವ್ಯಕ್ತಪಡಿಸಿ ಮನ್ಸೂರರು ನಮ್ಮನ್ನು ಮನೆ ಒಳಗೆ ಕರೆದು ಕುಡಿಯಲು ನೀರು ಕೊಟ್ಟು ನಂತರ ಫಲಹಾರ ಕೊಟ್ಟರು. ಅಷ್ಟೊತ್ತಿಗಾಗಲೇ ಅವರು ತಮ್ಮ ಸಂಬಂಧಿಕರಿಗೆ ಫೋನ್ ಮಾಡಿ ಬಹಳಷ್ಟು ಜನರನ್ನು ಮನೆಯಲ್ಲಿ ಜಮಾಯಿಸಿದ್ದರು. ಪುನಃ ನಮಗೆ ಹಾಡಲು ಸೂಚಿಸಿದರು. ಆಗ ನಾವು ಸುಮಾರು ೩-೪ ತಾಸು ಕಾರ್ಯಕ್ರಮ ಕೊಟ್ಟೆವು. ನಮಗೆ ಸಂಭಾವನೆ ಕೊಟ್ಟ ನಂತರ ಆಕಾಶವಾಣಿ ಕೇಂದ್ರಕ್ಕೆ ಕಾರ್ಯಕ್ರಮ ಕೊಡಲು ಅವಕಾಶ ಮಾಡಿಕೊಟ್ಟರು. ಹಾಗೇನೆ ಶ್ರೀಯುತ ಬಾನಂದೂರು ಕೆಂಪಯ್ಯ, ಎಚ್.ಎಂ. ನೀಲಗಾರರು, ಶ್ರೀಮತಿ. ಎಚ್.ಆರ್.ಗಾಯಿತ್ರಮ್ಮ, ಎಚ್.ಎಸ್. ಶಿವಪ್ರಕಾಶ, ಡಾ. ಪುರುಷೋತ್ತಮ ಬಿಳಿಮಲೆ ಮತ್ತು ಶಿವರಾಮ ಕಾರಂತರರು ಇನ್ನು ಮುಂತಾದವರು ನನಗೆ ಸಹಾಯ ಮಾಡಿದ್ದಾರೆ. ದೇಶದ ತುಂಬೆಲ್ಲಾ ನನ್ನ ಕಲೆಯನ್ನು ಮೆಚ್ಚುವವರೆ ಇದ್ದರು. ನಾನು ಒಂದು ಹಾಡು ಹಾಡಿದರೆ ಇನ್ನು ಒಂದು ಹಾಡು ಹಾಡು ಎನ್ನುವವರೇ ಇದ್ದಾರೆ.

೧೫. ದೂರದರ್ಶನದಲ್ಲಿ ಹಾಡಲು ಅವಕಾಶ ಸಿಕ್ಕಿದೆಯಾ

ಬಾನಂದೂರು ಕೆಂಪಯ್ಯನವರು ದೂರದರ್ಶನ ಕೇಂದ್ರದ ನಿರ್ದೇಶಕರಾಗಿದ್ದಾಗ ನಮ್ಮನ್ನು ಕರೆಸಿ ಕಾರ್ಯಕ್ರಮ ಕೊಡಲು ಅವಕಾಶ ಮಾಡಿಕೊಟ್ಟಿದ್ದರು.

೧೬. ರಾಷ್ಟ್ರಮಟ್ಟದಲ್ಲಿ

ಹೌದು. ದೆಹಲಿಗೆ ಹೋಗಿ ಕಾರ್‍ಯಕ್ರಮ ಕೊಟ್ಟು ಬಂದಿದ್ದೇನೆ. ಆಗ ಅಲ್ಲಿರುವ ಡಾ.ಎಚ್.ಎಸ್. ಶಿವಪ್ರಕಾಶ, ಡಾ. ಪುರುಷೋತ್ತಮ ಬಿಳಿಮಲೆಯವರು ನನ್ನನ್ನು ಗೌರವಿಸಿ ನೆನಪಿನ ಕಾಣಿಕೆ ನೀಡಿ ಸನ್ಮಾನಿಸಿದ್ದಾರೆ.

೧೭. ವಿದೇಶದಲ್ಲಿ ಹಾಡಲು ಅವಕಾಶ ಸಿಕ್ಕರೂ ನಿರಾಕಾರಿಸಿದ್ದೇಕೆ

ಬೆಂಗಳೂರಿನಲ್ಲಿರುವ ಖ್ಯಾತ ವೀಣಾವಾಧಕರಾದ ಶ್ರೀಮತಿ ಎಚ್.ಆರ್.ಗಾಯಿತ್ರಮ್ಮನವರು ನನ್ನ ಹಾಡುಗಳನ್ನು ಕೇಳಿಸಿಕೊಂಡು ತಮ್ಮ ಮನೆಗೆ ಕರೆಸಿಕೊಂಡು, ಮಾರೆಪ್ಪ ನಿನ್ನಲ್ಲಿ

ಒಳ್ಳೆಯ ಪ್ರತಿಭೆ ಇದೆ. ನೀನು ನನ್ನ ಜೊತೆ ಅಮೇರಿಕಾಕಕ್ಕೆ ಬಾ. ನಿನಗೆ ಹೆಚ್ಚಿನ ಅವಕಾಶ ಕಲ್ಪಿಸಿಕೊಡುತ್ತೇನೆ ಎಂದರು. ಆಗ ನಾನು ಹೋಗಲು ಒಪ್ಪಲಿಲ್ಲ. ಕಾರಣ ನನಗೆ ಏಕೋಭಯ, ಅನುಮಾನವಾಯಿತು. ಅದು ವಿಮಾನದಲ್ಲಿ ಹೋಗಬೇಕು. ಜೊತೆಗೆ ಅಲ್ಲಿಯ ಭಾಷೆಯೇ ಬೇರೆ ಆಗಿದ್ದರಿಂದ ಹೋಗಲು ಹಿಂಜರಿದೆ. ಈಗಿನಷ್ಟು ತಿಳುವಳಿಕೆ ಆಗ ಇರಲಿಲ್ಲ.

೧೮. ನೀವು ಕಾರ್ಯಕ್ರಮ ನೀಡಿದ ಪ್ರಮುಖ ಸ್ಥಳಗಳು

ದೊಡ್ಡ ದೊಡ್ಡ ಪಟ್ಟಣಗಳೆಲ್ಲಾ ಮುಗಿದಿವೆ. ಚಿಕ್ಕಮಗಳೂರು, ದೊಡ್ಡಮಂಗಳೂರು, ಕೆ.ಆರ.ಪೇಟೆ, ಹೊನ್ನಾವರ, ಹಂಪಿ, ಬಳ್ಳಾರಿ, ಹುಬ್ಬಳ್ಳಿ, ಧಾರವಾಡ, ಗುಲಬರ್ಗಾ, ಬೀದರ್, ಚಿತ್ರದುರ್ಗ, ಬೆಂಗಳೂರಿನಲ್ಲಿ ಸುಮಾರು ೫೦ಕ್ಕಿಂತ ಹೆಚ್ಚಿಗೆ ಕಾರ್ಯಕ್ರಮ ಕೊಟ್ಟಿದ್ದೇನೆ. ಇಂಥಲ್ಲೇ ನಾನು ಕಾರ್ಯಕ್ರಮ ಕೊಟ್ಟಿದ್ದೇನೆ ಎಂಬುದು ನನಗೆ ನೆನಪಿನಲ್ಲಿ ಉಳಿದಿಲ್ಲ.

೧೯. ನಿಮಗೆ ಬಂದ ಪ್ರಶಸ್ತಿಗಳು

ಸಾಕಷ್ಟು ಪ್ರಶಸ್ತಿಗಳು ಬಂದಿವೆ. ಮತ್ತು ಮೂರು ಬಿರುದುಗಳು ದೊರೆತಿವೆ.

೧. 'ಜಾನಪದ ರತ್ನ' ಎಂಬ ಬಿರುದನ್ನು ಯಲಬುರ್ಗಾ ತಾಲ್ಲೂಕಿನ ಕಲ್ಮೇಶ್ವರ ದೇವಸ್ಥಾನದಲ್ಲಿ ನೀಡಿದ್ದಾರೆ.

೨. 'ಜಾನಪದ ಕೋಗಿಲೆ' ಎಂಬ ಬಿರುದನ್ನು ಹುಬ್ಬಳ್ಳಿಯಲ್ಲಿ ವೀರಪುಲಕೇಶಿ ಕನ್ನಡ ಬಳಗದವರು ನೀಡಿದ್ದಾರೆ.

೩. 'ಕರುನಾಡ ಕೋಗಿಲೆ' ಎಂಬ ಬಿರುದನ್ನು ಯಲಬುರ್ಗಾದ ಶ್ರೀ ಸಿದ್ಧರಾಮೇಶ್ವರ ಸಂಸ್ಥಾನ ಹಿರೇಮಠದಲ್ಲಿ ಶ್ರೀ ಸಿದ್ಧರಾಮೇಶ್ವರ ಶಿವಾಚಾರ್ಯರ ಸನ್ನಿಧಿಯಲ್ಲಿ ನೀಡಿದ್ದಾರೆ.

೨೦. ಇಷ್ಟೆಲ್ಲಾ ಪ್ರಶಸ್ತಿ, ಬಿರುದುಗಳನ್ನು ಪಡೆದುಕೊಂಡ ನಿಮಗೆ ಸರಕಾರವಾಗಲಿ ಅಥವಾ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಯಾವ ರೀತಿಯ ನೆರವು ನೀಡಿದೆ

ಸಾಹಿತ್ಯ ಸಮ್ಮೇಳನಕ್ಕೆ ಕರೆಸುತ್ತಾರೆ. ಆಗಾಗ ಕರೆಯಿಸಿ ಕಾರ್ಯಕ್ರಮಕೊಡಿಸಿ ನನಗೆ ಸಂಭಾವನೆ ಕೊಡುತ್ತಾರೆ.

೨೧. ಕೇಂದ್ರ ಅಥವಾ ರಾಜ್ಯ ಸರಕಾರದಿಂದ ಕಲಾವಿದರಿಗಾಗಿ ದೊರೆಯುವ ಮಾಶಾಸನ ಲಭಿಸುತ್ತಿದೆಯೋ

ಕಲಾವಿದರ ಮಾಶಾಸನ ಕೊಡಲಾಗುವುದು ಎಂದು ಡಾ. ಪುರುಷೋತ್ತಮ ಬಿಳಿಮಲೆಯವರು ದೆಹಲಿಯೊಳಗೆ ಕಾರ್ಯಕ್ರಮ ನೀಡಿದಾಗ ಹೇಳಿದ್ದರು. 'ಮಾರೆಪ್ಪ ನೀನು ರಾಜ್ಯ ಪ್ರಶಸ್ತಿ ವಿಜೇತನಾಗಿರುವುದರಿಂದ ನಿನಗೆ ಕೇಂದ್ರ ಸರಕಾರದ ಮಾಶಾಸನ ದೊರೆಯುತ್ತದೆ. ಕೆಲವೊಂದು

ಪ್ರಶಸ್ತಿ ಪತ್ರಗಳನ್ನು ಝೆರಾಕ್ಸ್ ಮಾಡಿ ಹಚ್ಚಿ ಅರ್ಜಿ ಹಾಕು' ಎಂದು ತಿಳಿಸಿದರು. ಆಗ ನಾನು ಎರಡು ಬಾರಿ ಅರ್ಜಿ ಹಾಕಿದರೂ ಕೂಡ ಕೇಂದ್ರ ಸರಕಾರದಿಂದ ಯಾವುದೇ ಮಾಶಾಸನ ಬಂದಿಲ್ಲ. ರಾಜ್ಯ ಸರಕಾರದಿಂದ ಮಾತ್ರ ರೂ. ೧೦೦೦.೦೦ ಬರುತ್ತದೆ.

೨೨. ನಿಮಗೆ ಎಷ್ಟು ಜನ ಮಕ್ಕಳು

ಆರು ಜನ ಗಂಡುಮಕ್ಕಳು, ಇಬ್ಬರು ಹೆಣ್ಣುಮಕ್ಕಳಿದ್ದಾರೆ.

೨೩. ನಿಮ್ಮ ಮಕ್ಕಳ ಶಾಲಾ ಶಿಕ್ಷಣ

ಐದು ಮಂದಿ ಮಕ್ಕಳನ್ನು ಶಾಲೆಗೆ ಹಾಕೀನಿ. ಇಂತಹ ಕಷ್ಟದಲ್ಲಿದ್ದರೂ ಕೂಡಾ ಒಬ್ಬನು ಪಿ.ಯು.ಸಿ., ಇಬ್ಬರು ಎಸ್.ಎಸ್.ಎಲ್.ಸಿ. ಒಬ್ಬನು ೯ನೇ ತರಗತಿ ಇನ್ನೊಬ್ಬ ಸಣ್ಣ ಮಗ ೮ನೇ ತರಗತಿಯಲ್ಲಿ ಓದುತ್ತಿದ್ದಾನೆ. ಹಿರಿಯ ಮಗ ಮಾತ್ರ ಶಾಲೆ ಕಟ್ಟೆ ಹತ್ತಿಲ್ಲವಾದರೂ ಆತನು ಪತ್ರ ಓದುತ್ತಾನೆ, ಬರೆಯುತ್ತಾನೆ. ಮನೆಯಲ್ಲಿಯೇ ನಾನು ಆತನಿಗೆ ಕಲಿಸಿದ್ದೇನೆ.

೨೪. ವಂಶ ಪಾರಂಪರ್ಯವಾಗಿ ಉಳಿದುಕೊಂಡು ಬಂದಿರುವ ಈ ತತ್ವಪದ ಹಾಡುಗಾರಿಕಾ ಕಲೆಯನ್ನು ಮನೆಯಲ್ಲಿ ನಿಮ್ಮ ಮಕ್ಕಳಿಗೆ ಕಲಿಸಿದ್ದೀರಾ

ನಾನು ನನ್ನ ತಮ್ಮಂದಿರಾದ, ಆಂಜನಪ್ಪ, ಸಂಜೀವಪ್ಪ ಹಾಗೂ ವೆಂಕಪ್ಪನಿಗೆ ಕಲಿಸಿದ್ದೇನೆ. ಜೊತೆಗೆ ನನ್ನ ಹಿರಿಯ ಮಗ ವೆಂಕಪ್ಪ ನನ್ನ ಹಿಂದೆ ಬರಬೇಕಾದರೆ ನಾನೇ ಕಾರಣ.

೨೫. 'ತತ್ವಪದ' ಹಾಡುಗಳು ನಿಮ್ಮ ಭವಿಷ್ಯವನ್ನು ರೂಢಿಸಿಕೊಳ್ಳಲು ಹೇಗೆ ಸಹಕರಿಸಿವೆ?

ತತ್ವಪದಗಳು ಕೇವಲ ಹಣವನ್ನಷ್ಟೆ ಕೊಡದೆ ಜನರಿಗೆ ಬುದ್ಧಿ ಮಾತು ಹೇಳುವಂತಹ ಪದಗಳು ನನ್ನಲ್ಲಿ ಇವೆ. ಹುಡುಗ ತಪ್ಪು ಮಾಡಿದಾಗ ಅವನಿಗೆ ತಿಳುವಳಿಕೆ ನೀಡುವ ಹಾಗೂ ಹೆಣ್ಣುಮಕ್ಕಳು ಗಂಡನ ಮನೆಯಲ್ಲಿ ಯಾವ ರೀತಿ ಬಾಳಿ ಬದುಕಬೇಕು ಎಂದು ತಿಳಿಸುವ 'ತತ್ವ' ಪದಗಳು ನಮ್ಮಲ್ಲಿವೆ. ಈ ಕಾರಣದಿಂದಲೇ ನನಗೆ ಇಷ್ಟೆಲ್ಲಾ ಪ್ರಶಸ್ತಿಗಳು ಬಂದಿವೆ. ಜೊತೆಗೆ ಇದ್ದುದರಲ್ಲಿಯೇ ನನ್ನ ಮಕ್ಕಳನ್ನು ಶಾಲೆಗೆ ಸೇರಿಸಲು ಸಹಾಯಕವಾಗಿವೆ.

೨೬. ರಾಜ್ಯ ಪ್ರಶಸ್ತಿ ದೊರೆತಾಗ ನಿಮಗಾದ ಅನುಭವ.

ಒಳ್ಳೆ ಖುಷಿ ಅನ್ನಿಸಿತು. ರಾಜ್ಯ ಪ್ರಶಸ್ತಿ ಎಂಥೆಂತವರಿಗೆ ಸಿಕ್ಕಿಲ್ಲ. ರಾಜ್ಯ ಪ್ರಶಸ್ತಿಗೆ ನಾನು ಒಂದು ಪತ್ರ ಹಾಕಿಲ್ಲ, ಅರ್ಜಿ ಹಾಕಿಲ್ಲ. ತಾನಾಗಿಯೇ ಹುಡುಕಿಕೊಂಡು ಬಂದಿದೆ. ಆ ಪ್ರಶಸ್ತಿ ಬಂದಾಗ ನಮ್ಮ ತಾಲ್ಲೂಕಿನಲ್ಲಿ ಎಷ್ಟು ಹಳ್ಳಿ ಇವೆಯೋ ಎಲ್ಲರೂ ನನ್ನನ್ನು ಕರೆಯಿಸಿ ಸನ್ಮಾನಿಸಿರು. ಸುಮಾರು ೪೦ಕ್ಕೂ ಹೆಚ್ಚು ಹಳ್ಳಿಗಳಿಗೆ ನನ್ನನ್ನು ಕರೆಯಿಸಿ ಸನ್ಮಾನಿಸಿದರು. ಆದರೆ ರಾಜ್ಯ ಪ್ರಶಸ್ತಿಯ ಮೊತ್ತ ಈಗ ೧ಲಕ್ಷ ರೂಪಾಯಿ ಇದೆ. ಆಗ ಏನೂ ಇರಲಿಲ್ಲ. ಇದು ನನಗೆ ಬಹಳ ನೋವನ್ನುಂಟು ಮಾಡಿದೆ.

೨೭. ನೀವು ಹಾಡುವ ಹಾಡುಗಳನ್ನು ಈಗಾಗಲೇ ಯಾರಾದರೂ ಸಂಗ್ರಹಿಸಿಕೊಂಡಿದ್ದಾರೆಯೇ?

ನನ್ನನ್ನು ೧೯೮೭ರಲ್ಲಿ ಕರ್ನಾಟಕ ಜಾನಪದ ಟ್ರಸ್ಟ್ ಗೌರವಿಸಿ ನೆನಪಿನ ಕಾಣಿಕೆ ನೀಡಿ ಸನ್ಮಾನಿಸಿತು. ಆ ಸಂದರ್ಭದಲ್ಲಿ ಅಂದಿನ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಅಧ್ಯಕ್ಷರಾಗಿದ್ದ ಎಚ್.ಎಲ್.ನಾಗೇಗೌಡರು ನನ್ನ ಹಾಡುಗಳನ್ನೆಲ್ಲಾ ಸಂಗ್ರಹಿಸಿ ಆದಿಚುಂಚನಗಿರಿ ಗ್ರಾಮಗೀತೆ ಮಾಲಿಕೆ–೨, ಎಂಬ 'ಹಾವು ತುಳಿದೇನಾ ಮಾನಿನಿ' ಎಂಬ ಹೆಸರಿನಲ್ಲಿ ಪುಸ್ತಕ ರೂಪದಲ್ಲಿ ಹಾಗೂ ಕ್ಯಾಸೆಟ್‌ಗಳನ್ನು ಹೊರತಂದಿದ್ದಾರೆ.

೨೮. ನೀವು ಹಾಡುವ ಹಾಡುಗಳನ್ನು ಸಂಗ್ರಹಿಸಿ ಪ್ರಕಟಿಸಿದ ಪುಸ್ತಕ ಈಗ ನಿಮ್ಮ ಬಳಿ ಇದೆಯೇ

ಪುಸ್ತಕ ಇತ್ತ್ರೀ. ಆದರೆ ಈಗ ಕಳೆದು ಹೋಗಿದೆ. ಅದರ ಅವಶ್ಯಕತೆಯೂ ನಮಗೆ ಇಲ್ಲ. ಏಕೆಂದರೆ ನಾವು ಯಾವುದೇ ಒಂದು ಪುಸ್ತಕ ಮುಂದಿಟ್ಟುಕೊಂಡು ಹಾಡುವವರಲ್ಲ. ರಾತ್ರಿ ೧೦ ಗಂಟೆಗೆ ಹಾಡಲು ಪ್ರಾರಂಭಿಸಿದರೆ ಬೆಳಗಿನ ಸಮಯದವರೆಗೂ ಹಾಡಿದರೂ ಮುಗಿಯದಷ್ಟು ಹಾಡುಗಳು ನಮ್ಮ ಒಡಲಿನಲ್ಲಿ ಇವೆ.

೨೯. ನೀವು ತತ್ವಪದಗಳನ್ನು ಹಾಡುವಾಗ ಬಳಸಿಕೊಳ್ಳುವ ಪರಿಕರ

ಮೊದಲು ಏಕತಾರಿ, ಸಿಂಗ್ರಿಕಾಯಿ, ಒಂದೇ ತಂತಿ ಇರುತ್ತಿತ್ತು. ನಂತರದಲ್ಲಿ ತಂಬೂರಿ ನುಡಿಸಿ ಹಾಡುತ್ತಿದ್ದೆ. ಇದು ಗೆಜ್ಜೆ ಕಟ್ಟಿಗೆಯ ವಾದ್ಯ. ಇದು ತಬಲಾ ವಾದ್ಯ ನುಡಿದಂತೆ ಆಗುತ್ತದೆ. ಇದಕ್ಕೆ ೩ ತಂತಿಗಳಿರುತ್ತವೆ. ನುಡಿಸುವುದು ಪಿಟೀಲು ಇದಕ್ಕೆ ನಾಲ್ಕು ತಂತಿಗಳಿವೆ. ಜೊತೆಗೆ ನನ್ನ ಜೊತೆ ಹಾಡುವ ಸಹ ಹಾಡುಗಾರರು ತಂಬೂರಿ ನುಡಿಸುತ್ತಾರೆ. ತಂಬೂರಿಗೆ ಮೂರು ತಂತಿ, ಪೀಟಿಲಿಗೆ ನಾಲ್ಕು ತಂತಿ ಸೇರಿ ಏಳು ತಂತಿಗಳಿಂದ ಸಪ್ತಸ್ವರ ಹೊರ ಹೊಮ್ಮುತ್ತದೆ.

೩೦. ನೀವು ಈಗ ಎಪ್ಪತ್ತೊಂದನೇ ವರ್ಷಕ್ಕೆ ಪಾದಾರ್ಪಣೆ ಮಾಡಿದ್ದೀರಾ. ಬದುಕಿನ ಹೆಚ್ಚು ಕಾಲವನ್ನು ಯಾವ ಊರಿನಲ್ಲಿ ಕಳೆದಿದ್ದೀರಿ?

ಲಿಂಗನಬಂಡಿಯಲ್ಲಿ ೧೦–೧೨ ವರ್ಷ ಅಲ್ಲಿಂದ ಲಿಂಗಸೂರು ತಾಲ್ಲೂಕಿನ ನೀರಲೂಟಿನಲ್ಲಿ ೩೦ ವರ್ಷ ವಾಸವಾಗಿದ್ದ ನಂತರದಲ್ಲಿ ವಜ್ರಬಂಡಿ, ತುಮ್ಮರಗುದ್ದಿ ಹಾಗೂ ಕುಷ್ಟಗಿ ತಾಲ್ಲೂಕಿನ ಹನುಮನಾಳದಲ್ಲಿ ಕಾಲ ಕಳೆದಿದ್ದೇವೆ.

೩೧. ನೀವು ತುಮ್ಮರಗುದ್ದಿ ಮಾರೆಪ್ಪ ಎಂದೇ ಪ್ರಸಿದ್ಧಿ ಪಡೆದಿದ್ದೀರಿ? ಇದಕ್ಕೆ ಕಾರಣ

ನಾವು ತುಮ್ಮರಗುದ್ದಿಯಲ್ಲಿ ಸುಮಾರು ೨೦ ವರ್ಷಕ್ಕಿಂತಲೂ ಹೆಚ್ಚು ವರ್ಷ ವಾಸವಿದ್ವಿ ಅಲ್ಲಿ ಸರಕಾರದವರು ಇಂದಿರಾವಿಕಾಸ ಯೋಜನೆಯಲ್ಲಿ ಒಂದು ಮನೆ ಕಟ್ಟಿಸಿಕೊಟ್ಟಿದ್ದರು.

[illegible]

[illegible]

[illegible]

[illegible]

[illegible]

[illegible]

[illegible]

[illegible]

ಈಗ ಅದು ಬಿದ್ದು ಹೋಗಿದೆ. ಖಾಲಿ ಜಾಗ ಮಾತ್ರ ಅಲ್ಲಿ ಇದೆ. ಮೊದಲೆಲ್ಲಾ ನಾವು ಪ್ರತಿವರ್ಷ ಮಹಾನವಮಿಗೆ ತುಮ್ಮರಗುದ್ದಿಗೆ ಬಂದು ಸೇರುತ್ತಿದ್ದೆವು.

೩೨. ನೀವು ಮುಖ್ಯವಾಗಿ ಆಚರಿಸುವಂತಹ ಹಬ್ಬ

ಮಹಾನವಮಿ ಹಬ್ಬ ನಮ್ಮ ಜನಾಂಗಕ್ಕೆ ಪ್ರಮುಖವಾದದ್ದು. ಇದಕ್ಕೆ ಹಿರೇರ ಹಬ್ಬ ಎನ್ನುತ್ತೇವೆ. ಯಾವುದೇ ಊರಿಗೆ ಹೋಗಿದ್ದರೂ ನಾವು ಈಗ ವಾಸವಾಗಿರುವ ಯಲಬುರ್ಗಾಕ್ಕೆ ಬಂದು ಸಂಪ್ರದಾಯಬದ್ಧವಾಗಿ ಹಬ್ಬವನ್ನು ಬಹಳ ಖುಷಿಯಿಂದ ಆಚರಿಸುತ್ತೇವೆ.

೩೩. ಯಲಬುರ್ಗಾದಲ್ಲಿ ಎಷ್ಟು ವರ್ಷಗಳಿಂದ ನೀವು ವಾಸ ಮಾಡುತ್ತಿದ್ದೀರಾ?

ಸುಮಾರು ೧೮ ವರ್ಷಗಳಿಂದ ನಾವು ಇಲ್ಲಿಯೇ ವಾಸವಾಗಿದ್ದೇವೆ. ಈ ಮೊದಲು ಸರಕಾರಿ ಬಸ್ ನಿಲ್ದಾಣದ ಪಕ್ಕದಲ್ಲಿ ಜೋಪುಡಿ ಹಾಕಿಕೊಂಡು ವಾಸ ಮಾಡ್ತಾ ಇದ್ವಿ ನಂತರ ಮೀನಾಕ್ಷಿ ನಗರದಲ್ಲಿ ಒಂದು ಭೂಮಿ ಖರೀದಿ ಮಾಡಿಕೊಂಡ್ವಿ, ಈ ಜಾಗದಲ್ಲಿ ಸರಕಾರದವರು ಸು. ೩೧ ಮನೆಗಳನ್ನು ನಮ್ಮ ಚೆನ್ನದಾಸರಿಗೆ ಆಶ್ರಯ ಮನೆ ಕಟ್ಟಿಸಿಕೊಟ್ಟಿದ್ದಾರೆ. ಈಗ ಒಂದು ವರ್ಷದಿಂದ ಎಲ್ಲರೂ ಇಲ್ಲಿಯೇ ವಾಸಮಾಡ್ತಾ ಇದ್ದೇವೆ.

೩೪. ನೀವು ಮಾತನಾಡುವ ಭಾಷೆ

ನಾವು ಮೂಲತಃ ಆಂಧ್ರದಿಂದ ಬಂದವರಾಗಿದ್ದಾರಿಂದ ನಮ್ಮ ಮಾತೃಭಾಷೆ ತೆಲುಗು. ಕನ್ನಡ ನಾಡಿಗೆ ಬಂದ ಮೇಲೆ ಕನ್ನಡವನ್ನು ಮಾತನಾಡುವುದನ್ನು ಕಲಿತೆವು. ತೆಲುಗು ಮತ್ತು ಕನ್ನಡವನ್ನು ಲೀಲಾಜಾಲವಾಗಿ ಮಾತನಾಡುತ್ತೇವೆ. ಇನ್ನುಳಿದ ಭಾಷೆಗಳು ಬರುವುದಿಲ್ಲ.

೩೫. ನಿಮ್ಮ ಸಮುದಾಯದಲ್ಲಿ ಯಾವುದಾದರೂ ಸಂಘ, ಸಂಸ್ಥೆಗಳನ್ನು ಕಟ್ಟಿರುವೀರಾ?

ಯಲಬುರ್ಗಾ ತಾಲ್ಲೂಕು ಶ್ರೀ ವೆಂಕಟೇಶ್ವರ ಸೇವಾ ಸಂಘ (ರಿ), ಕಾರ್ಯಾಲಯ, ಮೀನಾಕ್ಷಿ ನಗರ, ಯಲಬುರ್ಗಾ ಎಂಬ ಸಂಘವನ್ನು ನೊಂದಾವಣೆ ಮಾಡಿಸಿದ್ದೇವೆ. ಇದರ ಅಧ್ಯಕ್ಷರಾಗಿ ನಾನೇ ಕಾರ್ಯ ನಿರ್ವಹಿಸುತ್ತಿದ್ದೇನೆ. ಕಾರ್ಯದರ್ಶಿಗಳಾಗಿ ತುಮ್ಮರಗುದ್ದಿಯ ರಾಜಪ್ಪ ಮಾಡಿಬೈನ್ ಇವರು ನಿರ್ವಹಿಸುತ್ತಿದ್ದಾರೆ.

೩೬. ನೀವು ತತ್ವಪದ ಹಾಡುವುದರ ಜೊತೆಗೆ ಇನ್ನಾವ ಕಾರ್ಯದಲ್ಲಿ ನಿಮ್ಮನ್ನು ತೊಡಗಿಸಿಕೊಂಡಿರುವಿರಿ.

ನಾನು ಯಕ್ಸಲ್‌ಪುರದಲ್ಲಿದ್ದಾಗ ಕನಕಾಂಗಿ ಎಂಬ ನಾಟಕವನ್ನು ನಿರ್ದೇಶನ ಮಾಡಿದ್ದೇನೆ. ಜೊತೆಗೆ ಹಲವಾರು ಬಯಲು ನಾಟಕಗಳಿಗೆ ತಾಲೀಮು ನೀಡಿ ಹಲವು ಪ್ರದರ್ಶನಗಳನ್ನು ಕೊಡಿಸಿದ್ದೇನೆ ಮತ್ತು ೨೦೦೪ರಲ್ಲಿ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ ಇವರು

ಏರ್ಪಡಿಸಿದ್ದ 'ಮನೆಯಂಗಳದಲ್ಲಿ ಮಾತುಕತೆ' ಕಾರ್ಯಕ್ರಮದಲ್ಲಿ ನನ್ನನ್ನು ವಿಶೇಷ ಆಹ್ವಾನಿತರೆಂದು ಪರಿಗಣಿಸಿ ಸಾರ್ವಜನಿಕರೊಂದಿಗೆ ಸಂವಾದ ಕಾರ್ಯಕ್ರಮ ಏರ್ಪಡಿಸಿದ್ದರು. ಇದರಲ್ಲಿ ಭಾಗವಹಿಸಿದ್ದು ನನಗೆ ಸಂತೋಷವನ್ನುಂಟು ಮಾಡಿದೆ. 'ಜಾನಪದ ಸಿರಿ' ಪ್ರಶಸ್ತಿಯ ಆಯ್ಕೆ ಸಮಿತಿ ಸದಸ್ಯನಾಗಿ ಕಾರ್ಯ ನಿರ್ವಹಿಸಿದ್ದಾನೆ. ಡಾ. ಮುದ್ದುಮೋಹನ ಅವರು ಆಯ್ಕೆ ಸಮಿತಿಯ ನಿರ್ದೇಶಕರಾಗಿದ್ದರು. ಜೊತೆಗೆ ಉಷಾಗಣೇಶ, ಕಾಳೇಗೌಡ ನಾಗವಾರ, ಮುಖ್ಯಮಂತ್ರಿ ಚಂದ್ರು, ಪುತ್ತೂರು ನರಸಿಂಹ ನಾಯಕರು ಸದಸ್ಯರಾಗಿದ್ದರು. ಆ ವರ್ಷ ಎನ್.ಕೆ.ನಾರಾಯಣರಾವ್ ಅವರಿಗೆ 'ಜಾನಪದ ಸಿರಿ' ಪ್ರಶಸ್ತಿ ಕೊಡ ಮಾಡಲಾಯಿತು. ನಂತರ ವರ್ಷದಲ್ಲಿ ಮಾರೆಪ್ಪ ನಿಮಗೆ 'ಜಾನಪದ ಸಿರಿ' ಪ್ರಶಸ್ತಿ ಕೊಡಲಾಗುವುದು ಎಂದು ಹೇಳಿದ್ದರೂ ಕೂಡ ಇದುವರೆಗೂ ಬಂದಿರುವುದಿಲ್ಲ.

೩೭. ಯಲಬುರ್ಗಾದಲ್ಲಿ ಎಷ್ಟು ಚೆನ್ನದಾಸರ ಕುಟುಂಬಗಳಿವೆ

೫೦ ಕುಟುಂಬಗಳಿವೆ. ಅದರಲ್ಲಿ ಮೂವತ್ತೊಂದು ಕುಟುಂಬಗಳಿಗೆ ನಾವೆಲ್ಲ ಸೇರಿ ಖರೀದಿಸಿದ ಭೂಮಿಯಲ್ಲಿ ಸರ್ಕಾರದವರು ಆಶ್ರಯ ಮನೆಗಳನ್ನು ಕಟ್ಟಿಸಿಕೊಟ್ಟಿದ್ದಾರೆ.

೩೮. ತುಮ್ಮರಗುದ್ದಿಯಲ್ಲಿ ಎಷ್ಟು ಚೆನ್ನದಾಸರ ಕುಟುಂಬಗಳಿವೆ ಮತ್ತು ಅವರು ಕೃಷಿಯಲ್ಲಿ ತೊಡಗಿದ್ದಾರೆಯೇ?

೧೩೮ ಕುಟುಂಬಗಳಿವೆ. ಅದರಲ್ಲಿ ಮೂರು ಕುಟುಂಬಗಳಿಗೆ ಅಲ್ಪಸ್ವಲ್ಪ ಕೃಷಿ ಭೂಮಿಯಿದ್ದು, ಅವರು ಮಾತ್ರ ಬೇಸಾಯ ಮಾಡುತ್ತಾರೆ.

೩೯. ಈಗಲೂ ಕಾರ್ಯಕ್ರಮ ನೀಡಲು ಆಹ್ವಾನ ಬಂದರೆ ಹೋಗುವಿರಾ?

ಹೋಗಲಿಲ್ಲ ಅಂದ್ರೆ ಜೀವನ ಸಾಗಬೇಕಲ್ರಿ, ಹೋಗಲಿಲ್ಲ ಅಂದರೆ ಹೇಗೆ? ನನ್ನ ವೃತ್ತಿಯೇ ಅದು.

ವೃಕ್ಷಗಳ ವಿವರ

ವ್ಯಕ್ತಿಗಳ ವಿವರ

ಕ್ರಸಂ.	ಹೆಸರು	ವಯಸ್ಸು	ವೃತ್ತಿ	ಊರು
೧.	ಸಂಜೀವಪ್ಪ ಎಂ. ಚೆನ್ನದಾಸರ	೫೫	ವ್ಯಾಪಾರ	ಯಲಬುರ್ಗಾ
೨.	ಆಂಜನೆಪ್ಪ ಎಂ. ಚೆನ್ನದಾಸರ	೫೦	ಹಾಡುಗಾರಿಕೆ	ಯಲಬುರ್ಗಾ
೩.	ಸಣ್ಣವೆಂಕಪ್ಪ ಎಂ. ಚೆನ್ನದಾಸರ	೩೮	ಹಾಡುಗಾರಿಕೆ	ಯಲಬುರ್ಗಾ
೪.	ದುರಗವ್ವ ಎಂ. ಚೆನ್ನದಾಸರ	೬೦	ಹಾಡುಗಾರಿಕೆ	ಯಲಬುರ್ಗಾ
೫.	ಶಂಕ್ರಪ್ಪ ಡಿ. ಚೆನ್ನದಾಸರ	೩೫	ಹಾಡುಗಾರಿಕೆ	ಯಲಬುರ್ಗಾ
೬.	ವೆಂಕಪ್ಪ ರಾಜಪ್ಪ ಚೆನ್ನದಾಸರ	೫೮	ವ್ಯಾಪಾರ	ಯಲಬುರ್ಗಾ
೭.	ನೀಲವ್ವ ಯಮನಪ್ಪ ಚೆನ್ನದಾಸರ	೪೦	ವ್ಯಾಪಾರ	ಯಲಬುರ್ಗಾ
೮.	ದುರುಗಪ್ಪ ಮೇಲುಕೋಟಿ	೬೫	ಕೂಲಿ	ಯಲಬುರ್ಗಾ
೯.	ದುರುಗಪ್ಪ ಹನ್ಮಂತಪ್ಪ ಚೆನ್ನದಾಸರ	೫೦	ವ್ಯಾಪಾರ	ಯಲಬುರ್ಗಾ
೧೦.	ಗೋವಿಂದಪ್ಪ ದುರುಗಪ್ಪ ಚೆನ್ನದಾಸರ	೩೦	ಒಕ್ಕುಲತನ	ತುಮ್ಮರಗುದ್ದಿ
೧೧.	ದುರುಗಪ್ಪ ಚೆನ್ನದಾಸರ	೫೮	ಒಕ್ಕುಲತನ	ತುಮ್ಮರಗುದ್ದಿ
೧೨.	ಹನುಮಪ್ಪ ಲಿಂಗನಬಂಡಿ	೫೨	ಒಕ್ಕುಲತನ	ತುಮ್ಮರಗುದ್ದಿ
೧೩.	ಮಾರುತಿ ಗಿತ್ತೊಡೆಪ್ಪ ಚೆನ್ನದಾಸರ	೩೮	ಹಾಡುಗಾರಿಕೆ	ತುಮ್ಮರಗುದ್ದಿ
೧೪.	ದುರುಗಪ್ಪ ಹುಳ್ಳಿಬರಮಪ್ಪ ಚೆನ್ನದಾಸರ	೪೦	ವ್ಯಾಪಾರ	ತುಮ್ಮರಗುದ್ದಿ
೧೫.	ಮಾರೆಪ್ಪ ಹುಸೇನಪ್ಪ ಗಾದಿ	೪೫	ಹಾಡುಗಾರಿಕೆ	ತುಮ್ಮರಗುದ್ದಿ
೧೬.	ಹನುಮಂತಪ್ಪ ಚೆನ್ನದಾಸರ	೫೭	ವ್ಯಾಪಾರ	ತುಮ್ಮರಗುದ್ದಿ
೧೭.	ವೀರಪ್ಪ ವೀರಪ್ಪ ಚೆನ್ನದಾಸರ	೬೨	ವ್ಯಾಪಾರ	ಯಲಬುರ್ಗಾ
೧೮.	ರಾಜಪ್ಪ ಯಮನಪ್ಪ ಚೆನ್ನದಾಸರ	೩೫	ವ್ಯಾಪಾರ	ಯಲಬುರ್ಗಾ
೧೯.	ವೆಂಕಮ್ಮ ಚಿನ್ನಪ್ಪ ಚೆನ್ನದಾಸರ	೩೫	ವ್ಯಾಪಾರ	ಯಲಬುರ್ಗಾ
೨೦.	ಫಕ್ಕೀರಪ್ಪ ಪಿ. ಗಾಣಗೇರ	೫೧	ಸಮಾಜಸೇವಕ	ಯಲಬರ್ಗಾ

ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಬೆಂಗಳೂರು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು
ಕರ್ನಾಟಕ ಸಂಘ, ನವದೆಹಲಿ

ಪ್ರಮಾಣ ಪತ್ರ


ಶ್ರೀಮತಿ / ಶ್ರೀ.......ಮಾರಿಸ್ವಾ ದಾಸ [illegible] ಅವರು


ದಿನಾಂಕ ೨೧-೭-೨೦೦೭ ಮತ್ತು ೨೨-೭-೨೦೦೭ ರಂದು ದೆಹಲಿ ಕರ್ನಾಟಕ ಸಂಘ [illegible]

ಮಾರ್ಗ, ಸೆಕ್ಟರ್-೧೨, ಆರ್. ಕೆ. ಪುರಂ, ನವದೆಹಲಿ. ಇಲ್ಲಿ ನಡೆದ ಸುವರ್ಣ ಕರ್ನಾಟಕ ಜಾನಪದ [illegible]

ಕಾರ್ಯಕ್ರಮದಲ್ಲಿ ಭಾಗವಹಿಸಿ.........ತತ್ವಗಾನ [illegible] ಕಲೆಯನ್ನು ಪ್ರದರ್ಶಿಸಿದ್ದಾರೆ

ಪಿ. ನಾರಾಯಣಸ್ವಾಮಿ	ಡಾ. ಪುರುಷೋತ್ತಮ ಬಿಳಿಮಲೆ	ಕೆರೆಮನೆ ಶಂಭುಹೆಗಡೆ
ರಿಜಿಸ್ಟ್ರಾರ್	ಅಧ್ಯಕ್ಷರು	ಅಧ್ಯಕ್ಷರು
ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ	ಕರ್ನಾಟಕ ಸಂಘ	ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ
ಬೆಂಗಳೂರು	ನವದೆಹಲಿ	ಬೆಂಗಳೂರು












ರಾಜ್ಯ ಪ್ರಶಸ್ತಿ ಯನ್ನು"

ಉಷಾ ಗಣೇಶ್, ಭಾ.ಆ.ಸೇ.,
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ
ಬೆಂಗಳೂರು

ಮುದ್ದುಮೋಹನ್, ಕ.ಆ.ಸೇ.,
ನಿರ್ದೇಶಕರು
ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ
ಬೆಂಗಳೂರು

೧ನೇ ನವೆಂಬರ್ ೨೦೦೪, ಬೆಂಗಳೂರು



ಹಂಪಿ ಉತ್ಸವ '02
Hampi Utsav

೩, ೪ ಮತ್ತು ೫, ನವೆಂಬರ್

ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು.

ಕರ್ನಾಟಕ ಪ್ರವಾಸೋದ್ಯಮ ಇಲಾಖೆ, ಬೆಂಗಳೂರು.

ಜಿಲ್ಲಾ ಆಡಳಿತ, ಬಳ್ಳಾರಿ.

ಹಂಪಿ ಉತ್ಸವ - ೨೦೦೨

ಶ್ರೀ [illegible] ರವರು

೨೦೦೨ ರ ನವೆಂಬರ್ [illegible] ರಂದು [illegible]

ವೇದಿಕೆಯಲ್ಲಿ / ಜನಪದ ವಾಹಿನಿಯಲ್ಲಿ [illegible]

ಕಾರ್ಯಕ್ರಮ ನೀಡಿದ್ದಾರೆಂದು ದೃಢೀಕರಿಸಲಾಗಿದೆ.


ದಿನಾಂಕ : ೪-೧೧-೨೦೦೨

ಸ್ಥಳ : ಹಂಪಿ

ಆಯುಕ್ತರು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಅಧ್ಯಕ್ಷರು
ಹಂಪಿ ಉತ್ಸವ ಕಾರ್ಯಕಾರಿ ಸಮಿತಿ ಹಾಗೂ
ಜಿಲ್ಲಾಧಿಕಾರಿಗಳು, ಬಳ್ಳಾರಿ.

ಇವನಾರವ, ಇವನಾರವ, ಇವನಾರವ ? ಎಂದೆನಿಸದಿರಯ್ಯಾ.
ಇವ ನಮ್ಮವ, ಇವ ನಮ್ಮವ, ಇವ ನಮ್ಮವನೆಂದೆನಿಸಯ್ಯಾ.
ಕೂಡಲ ಸಂಗಮದೇವಾ ನಿಮ್ಮ ಮನೆಯ ಮಗನೆಂದೆನಿಸಯ್ಯಾ.



ಕಾಯಕವೇ ಕೈಲಾಸ

ಪ್ರಶಸ್ತಿ ಪತ್ರ

ತುಮರಗುದ್ದಿಯ ಶರಣರಾದ ಶ್ರೀ ಮಾರೆಪ್ಪ ಮಾರೆಪ್ಪ ದಾಸರವರೇ,

ಸಂಗೀತ ಶಾರದೆಯ ಕೃಪೆಗೆ ಪಾತ್ರರಾಗಿ ದೈವೀದತ್ತ ಕೊಡುಗೆಯಾದ ಮಧುರ-ಮಾಧುರ್ಯ ಕಂಠಶ್ರೀಯಲ್ಲಿ ಈ ನಾಡಿನ ಜನ ಜೀವನ ನಾಡಿಯ ಮಿಡಿತವಾದ ಜನಪದ ಸಾಹಿತ್ಯ ರೂಢಿಸಿಕೊಂಡು, ತನ್ಮೂಲಕ ಭಕ್ತಿ ಹಾಗೂ ನೀತಿಯುಕ್ತ ಪದಗಳನ್ನು ಹಾಡಿ ಸೇವೆ ಗೈಯುತ್ತಿರುವುದು ಯಲಬುರ್ಗಿ ತಾಲೂಕಿನ ಪುಣ್ಯವಿಶೇಷವೆಂದು ಬಗೆದಿರುವೆವು.

ನವ ಮನ್ವಂತರ ಇಂದಿನ ಯುಗದಲ್ಲೂ ಚಿತ್-ಚೇತನ ಶಕ್ತಿಗೆ ಪ್ರೇರಣೆ ಪ್ರಬುದ್ಧತೆಯನ್ನು ನೀಡಬಲ್ಲ ತಮ್ಮ [illegible] ಹಾಡುಗಾರಿಕೆಯು ಸದಾ ಪ್ರವಹಿಸಲೆಂದು ೨೬ ನೆ ಶಿವಾನುಭವ ಗೋಷ್ಠಿಯಲ್ಲಿ ಪೂಜ್ಯ ಶ್ರೀ ಷ. ಬ್ರ. ಸಿದ್ಧರಾಮಶಿವಾಚಾರ್ಯ ಮಹಾಸ್ವಾಮಿಗಳ ಸನ್ನಿಧಿಯಲ್ಲಿ "ಕರುನಾಡ ಕೋಗಿಲೆ" ಎಂಬ ಅಭಿದಾನದೊಂದಿಗೆ ಈ ಪ್ರಶಸ್ತಿ ಪ್ರದಾನ ಮಾಡಿರುವೆವು.

ಮನೆಯಿಲ್ಲದೆ-ಹೊಲವಿಲ್ಲದೆ-ನಿಲ್ಲಲು ನೆಲೆಯಿಲ್ಲದೆ ಅಲೆಯುತ್ತಾ ವಂಶಪಾರಂಪರ್ಯ ಹಾಡುಗಾರಿಕೆಯ ಸೇವೆ ಸಲ್ಲಿಸುತ್ತಿರುವ ತಮಗೆ ಶ್ರೀ ಗುರು ಸಿದ್ಧರಾಮೇಶ್ವರನ ಕೃಪೆಯಿಂದ ಸಕಲ ಭಾಗ್ಯ ಲಭಿಸಿ, ಕಾಲ ಗರ್ಭದಲ್ಲಿ ಕಣ್ಮರೆಯಾಗುತ್ತಿರುವ ಜನಪದ ಸಾಹಿತ್ಯ ಹಾಡುಗಾರಿಕೆಯು ತಮ್ಮ ಕಂಠಶ್ರೀಯೊಂದಿಗೆ ಮತ್ತೆ ನಾಡಿನ ತುಂಬೆಲ್ಲ ಬೆಳಗಲೆಂದು ಹಾರೈಸುವೆವು.


ದಿನಾಂಕ: ೬-೫-೮೫

ಸ್ಥಳ: ಯಲಬುರ್ಗಾ

ಜಿಲ್ಲಾ: ರಾಯಚೂರ.

ಶಿವಾನುಭವ ಸೇವಾ ಸಮಿತಿ
ಶ್ರೀ ಸಿದ್ಧರಾಮೇಶ್ವರ ಸಂಸ್ಥಾನ ಹಿರೇಮಠ
ಯಲಬುರ್ಗಿ — [illegible]

॥ ಶ್ರೀ ಕಲ್ಲಿನಾಥೇಶ್ವರ ಕೃಪಾ ॥



ಕಲ್ಲೂರ ಶ್ರೀ ಕಲ್ಲಿನಾಥೇಶ್ವರ
ಕಾರ್ತಿಕೋತ್ಸವ ೨೦೦೮

ಜಾನಪದ ರತ್ನ

ಭಾರತ ಪುಣ್ಯ ಭೂಮಿ, ಧರ್ಮದರ್ಶನಗಳ ತವರೂರು, ವಿವಿಧತೆಯಲ್ಲಿ ಏಕತೆಯನ್ನು ಕಾಣುವ ಸಂಸ್ಕೃತಿಯ ನೆಲೆವೀಡು, ಮಹಾತ್ಮರ ತಪಸ್ಸಿನ ತಪೋಭೂಮಿ, ಶರಣರ ಕಾಯಕ ದಾಸೋಹದ ಕಲ್ಯಾಣನಾಡು. ಕರ್ನಾಟಕ ನಾದ ಮಹರ್ಷಿಗಳ ಗಾನಭೂಮಿ, ದೇವಾಲಯಗಳ ಶಿಲ್ಪಕಲೆಯ ತವರುಮನೆ, ದಾನಚಿಂತಮಣಿಗಳ ಪವಿತ್ರ ಸ್ಂಸ್ಕೃತಿ ಹಾಗೂ ಸಂಸ್ಕಾರವನ್ನು ಕಾಲಕಾಲಕ್ಕೆ ಮುನ್ನೆಡಸುತ್ತಾ ಬಂದವರು, ಯುಗಪುರುಷರು, ಧರ್ಮವಂತರು, ಅಂತಹ ದೇವ ಪುರುಷರ ಮಾರ್ಗವನ್ನು ಹಿಡಿದು ಕಲಾದೇವತೆಯ ಆರಧನೆಯಿಂದ ನಾಡಿನಾದ್ಯಂತ ಹೆಸರುವಾಸಿಯದ ಸುಮಧುರ ಕಂಠದ ಹಿರಿಯ ಜಾನಪದ ತಜ್ಞರಾದ

ಶ್ರೀ ಪಂ॥ ಮಾರೇಪ್ಪ ದಾಸರ ಯಲಬುರ್ಗಾ(ತುಂಬರಗುದ್ದಿ) ಇವರಿಗೆ

ಶ್ರೀ ಕಲ್ಲಿನಾಥೇಶ್ವರ ಕಾರ್ತಿಕೋತ್ಸವದಲ್ಲಿ **"ಜಾನಪದ ರತ್ನ"** ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಸದ್ಭಕ್ತ ಮಂಡಳಿ,ಕಲ್ಲೂರು

ದಿನಾಂಕ: 01-12-2008
ಸೋಮವಾರ

ಭಕ್ತಿ ಸೇವೆ : **ಶಿವಪ್ಪ ಸಂಕನೂರ**, ಗಜೇಂದ್ರಗಡ.

ವೀರ ಪುಲಿಕೇಶಿ ಕನ್ನಡ ಬಳಗ ಹುಬ್ಬಳ್ಳಿ

(ನೊಂದಣಿ ಸಂ :- 306 / 99/2000)

ಲಕ್ಷ್ಮೀಶ ಕವಿ ಮಾರ್ಗ, ವೀರಾಪುರ ರಸ್ತೆ, ಹುಬ್ಬಳ್ಳಿ.

ಏಕತಾರಿ ಪದಗಳನ್ನು ಹಾಡುವುದರಲ್ಲಿ ಅಪ್ರತಿಮ ಸಾಧನೆಗೈದ

ಶ್ರೀಯುತ ಮಾರೆಪ್ಪ ಮಾರೆಪ್ಪ ದಾಸರ (ತುಮ್ಮರಗುದ್ದಿ)

ಇವರಿಗೆ ಬಳಗದ ವತಿಯಿಂದ

"ಜಾನಪದ ಕೋಗಿಲೆ"


ಬಿರುದು ನೀಡಿ ಸನ್ಮಾನಿಸಲಾಯಿತು.


ಸೋಮವಾರ

ದಿನಾಂಕ : 3-7-2000

ವೆಂಕಟೇಶ ಕೃ. ಮರೇಗುದ್ದಿ

ಅಧ್ಯಕ್ಷರು





ಸಂಸ್ಥಾನ ಶ್ರೀ ಗವಿಮಠ ಕೊಪ್ಪಳ

ಶ್ರೀ ಗವಿಸಿದ್ಧೇಶ್ವರ ಜಾತ್ರಾ ಮಹೋತ್ಸವ, ಕೊಪ್ಪಳ

ಶುಭಾಶೀರ್ವಾದ ಪತ್ರ

ಪರತರಾನಂದದಲಿ ಜನದಿಂತು ಹೊಗಳುವುದು
ವರಕೀರ್ತಿಯುತನೆಳು ಬೆಳಗಾಂಖಿತು
ಕೆರೆಹೊಂಡಗಳು ತೀರ್ಥ ತವಮಠವೇ ಕೈಲಾಸ
ಸುರುಚಿರಾಂಬಲಿ ಮಹಾಸುಪ್ರಸಾದ

ಶ್ರೀಮತಿ / ಶ್ರೀ ....[illegible].... ಇವರು

ದಿನಾಂಕ ....24-01-2008.... ರಂದು ಜರುಗಿದ ಮಹಾಮಹಿಮ ಶ್ರೀ ಗವಿಸಿದ್ಧೇಶ್ವರ ರಥೋತ್ಸವದ ಅಂಗವಾಗಿ ಜರುಗಿದ ಸಾಹಿತ್ಯಿಕ / ಸಾಂಸ್ಕೃತಿಕ / ಸನ್ಮಾನ ಸಮಾರಂಭದಲ್ಲಿ ಭಾಗವಹಿಸಿ ಜಾತ್ರಾ ಮಹೋತ್ಸವದ ಯಶಸ್ಸಿಗೆ ತಮ್ಮ ಅಮೂಲ್ಯ ಸೇವೆ ನೀಡಿರುವುದಕ್ಕೆ ಅಭಿನಂದಿಸಿ ಶುಭಾಶೀರ್ವಾದ ನೀಡಲಾಗಿದೆ.



ಕೊಪ್ಪಳ

ದಿನಾಂಕ : 24-01-2008

ಶ್ರೀ ಮ.ನಿ.ಪ್ರ.ಜ
ಶ್ರೀ ಗವಿಸಿದ್ಧೇಶ್ವರ ಮಹಾಸ್ವಾಮಿಗಳು
ಸಂಸ್ಥಾನ ಶ್ರೀ ಗವಿಮಠ, ಕೊಪ್ಪಳ

ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ

ಖಾದಿ ಭವನ್ ನಂ. 10 ಜಸ್ಮಾಭವನ ರಸ್ತೆ, ಬೆಂಗಳೂರು

ಖಾದಿ ಮತ್ತು ಗ್ರಾಮೋದ್ಯೋಗದ [illegible]

ಮತ್ತು

ರಾಷ್ಟ್ರ ಮಟ್ಟದ ಖಾದಿ ಮತ್ತು ಗ್ರಾಮೋದ್ಯೋಗ ವಸ್ತು ಪ್ರದರ್ಶನ

ಪ್ರಶಸ್ತಿ ಪತ್ರ

ಶ್ರೀ/ಶ್ರೀಮತಿ .... [illegible] .... ಇವರು / ತಂಡದವರು

ದಿನಾಂಕ .... 29.01.2008 .... ರಂದು ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಭಾಗವಹಿಸಿ,

.... [illegible] .... ಕಾರ್ಯಕ್ರಮವನ್ನು ಯಶಸ್ವಿಯಾಗಿ

ನೀಡಿರುತ್ತಾರೆ / ಪ್ರದರ್ಶಿಸಿರುತ್ತಾರೆ ಇವರ ಕಲಾ ಪ್ರೌಢಿಮೆಯನ್ನು ಸಮಿತಿಯು ಶ್ಲಾಘಿಸಿ ಅಭಿನಂದಿಸಿದೆ.

ಆರ್. ರಮೇಶಪ್ಪ
ಅಧ್ಯಕ್ಷರು, ಸಾಂಸ್ಕೃತಿಕ ಸಮಿತಿ
ಮುಖ್ಯ ಕಾರ್ಯನಿರ್ವಹಣಾಧಿಕಾರಿ

ದಿನಾಂಕ :

I ಶ್ರೀ ಶರೀಫ ಶಿವಯೋ...

ಓಂ

ಶ್ರೀ ಶರೀಫ ಶಿವಯೋಗೀಶ್ವರ ಸೇವಾ ಸಮಿತಿ

ಹಿರೇಪೇಟ, ಹುಬ್ಬ.



'ಮೈ ತುಂಬ ದುಡಿ
ಹೊಟ್ಟೆ ತುಂಬ ಹೊಡಿ
ಪುಣ್ಯದ ಹಾದಿ ಹಿಡಿ'

ಭಾವೈಕ್ಯ ದಿನಾಚರಣೆ

ಪ್ರಮಾಣ ಪತ್ರ

ಶ್ರೀಮತಿ/ಶ್ರೀ [illegible]

ಇವರು ಶ್ರೀ ಶರೀಫ ಶಿವಯೋಗಿಗಳವರ ಜಯಂತ್ಯೋತ್ಸವ ಹಾಗೂ ಪುಣ್ಯಸ್ಮರಣೆ ಅಂಗವಾಗಿ ದಿನಾಂಕ 2-7-2001 ರಂದು ನಡೆದ [illegible] ... ದ್ದಕ್ಕಾಗಿ ಶ್ರೀ ಶರೀಫ ಶಿವಯೋಗಿಗಳವರ ಆಶೀರ್ವಾದ, ಅನುಗ್ರಹ ಉಂಟಾಗಲಿ.

ಸ್ಥಳ : ಹುಬ್ಬಳ್ಳಿ

ದಿನಾಂಕ :

ಈರಣ್ಣಾ ಕೊಪ್ಪಳ	**ಶೇಖಣ್ಣಾ ಬೆಂಡಿಗೇರಿ**	ಮಹೇಂದ್ರ ಸಿಂಘಿ
ಸಂಸ್ಥಾಪಕರು	ಕಾರ್ಯದರ್ಶಿ	ಅಧ್ಯಕ್ಷರು

ಜಿಲ್ಲಾ ಆಡಳಿತ, ಧಾರವಾಡ
ಕನ್ನಡ ಮತ್ತು ಸಂಸ್ಕೃತಿ ಇಲಾಖೆ
ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ


ಧಾರವಾಡ ಉತ್ಸವ-02
DHARWAD UTSAV-07
ಸಂಸ್ಕೃತಿ ಸಮಾಗಮ

ಧಾರವಾಡ ಉತ್ಸವ-02
ಪ್ರಮಾಣ ಪತ್ರ




ಶ್ರೀ [illegible]

[illegible]




ಎಮ್. ಎಸ್. ಶ್ರೀಕರ್

ಕರ್ನಾಟಕ ಸರ್ಕಾರ

ಮೈಸೂರು ದಸರಾ ಮಹೋತ್ಸವ 2005

ಸಾಂಸ್ಕೃತಿಕ ಉಪಸಮಿತಿ, ಮೈಸೂರು

ಅಭಿನಂದನಾ ಪತ್ರ

ಶ್ರೀಮತಿ / ಶ್ರೀ ....ಮಾರಪ್ಪ ದಾಸರು........ ಅವರು

ಮೈಸೂರು ದಸರಾ ಮಹೋತ್ಸವದ ಅಂಗವಾಗಿ ಅರಮನೆ / ಕಲಾಮಂದಿರ / ಜಗನ್ಮೋಹನ ಅರಮನೆ / ಪುರಭವನ / ಅರಮನೆ ಅಂಗಳದಲ್ಲಿ ...೭...10...೨೦೦೫... ರಂದು ಜರುಗಿದ ಸಂಗೀತ / ನೃತ್ಯ / ಜಾನಪದ / ನಾಟಕೋತ್ಸವದಲ್ಲಿ ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದ್ದಾರೆ. ಕಲಾವಿದರನ್ನು ಸಾಂಸ್ಕೃತಿಕ ಉಪಸಮಿತಿ ಹರ್ಷದಿಂದ ಅಭಿನಂದಿಸುತ್ತದೆ.

ಟಿ.ಎಸ್. ರವಿಶಂಕರ್	ಮುದ್ದು ಮೋಹನ್	ಜಿ.ಎಸ್. ಗೋಪಾಲಕೃಷ್ಣ
ಅಧ್ಯಕ್ಷ	ಕಾರ್ಯಾಧ್ಯಕ್ಷ	ಸದಸ್ಯ ಕಾರ್ಯದರ್ಶಿ

ಕರ್ನಾಟಕ ಸರಕಾರ

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಗುಲಬರ್ಗಾ ವಿಭಾಗ, ಗುಲಬರ್ಗಾ

ಗುಲಬರ್ಗಾ ವಿಭಾಗ ಮಟ್ಟದ

ಸಮತಾ ಸಂಸ್ಕೃತಿ ಸಂಭ್ರಮ

ಪ್ರಮಾಣ ಪತ್ರ

ಶ್ರೀ / ಶ್ರೀಮತಿ [illegible] ಇವರು

ದಿನಾಂಕ 03, 04 ಜನವರಿ 2004ರಂದು ಬೀದರ್‌ನಲ್ಲಿ ಜರುಗಿದ ವಿಭಾಗ ಮಟ್ಟದ ಸಮತಾ ಸಂಸ್ಕೃತಿ ಸಂಭ್ರಮ ಕಾರ್ಯಕ್ರಮದಲ್ಲಿ ಭಾಗವಹಿಸಿ

[illegible] ಕಲೆಯನ್ನು ಪ್ರದರ್ಶಿಸಿದ್ದಕ್ಕಾಗಿ ಈ ಪ್ರಮಾಣ ಪತ್ರವನ್ನು ನೀಡಲಾಗಿದೆ.

ದಿನಾಂಕ : 03-01-2004

ಸ್ಥಳ : ಬೀದರ

ಬಲವಂತರಾವ್ ಪಾಟೀಲ್
ಉಪನಿರ್ದೇಶಕರು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ
ಗುಲಬರ್ಗಾ ವಿಭಾಗ, ಗುಲಬರ್ಗಾ

ಕರ್ನಾಟಕ
ಜಾನಪದ ಮತ್ತು ಯಕ್ಷಗಾನ ಅಕಾಡೆಮಿ
ಬೆಂಗಳೂರು

ಶ್ರೀ ಮಾರೆಪ್ಪ ದಾಸರ ರವರು
ಜೋಟಿದಾಸರು ರಂಗದಲ್ಲಿ ಸಲ್ಲಿಸಿರುವ
ಸುದೀರ್ಘ ಸೇವೆಗಾಗಿ ಗೌರವಪೂರ್ವಕವಾಗಿ ನೀಡಿದ
ಪ್ರಶಸ್ತಿ ಪತ್ರ.

19-3-98
ಬೆಂಗಳೂರು

ಪ್ರಶಸ್ತಿ ನೀಡುವವರು

ಅಧ್ಯಕ್ಷರು
ಕ.ಜಾ.ಯ.ಅಕಾಡೆಮಿ

ಕರ್ನಾಟಕ ಸರಕಾರ

೫೦ ಕರ್ನಾಟಕ KARNATAKA

ಜಿಲ್ಲಾಡಳಿತ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕೊಪ್ಪಳ

ಜಾನಪದ ಜಾತ್ರೆ - ೨೦೦೭

ಪ್ರಶಸ್ತಿ ಪತ್ರ

ಶ್ರೀ/ಶ್ರೀಮತಿ ....

.... ಇವರು ದಿನಾಂಕ ೨೦೦೭ ನೇ ಮಾರ್ಚ್ ೧೭, ೧೮ ಮತ್ತು ೧೯ ರಂದು

ನಡೆದ ಜಾನಪದ ಜಾತ್ರೆ - ೨೦೦೭ ರಲ್ಲಿ ಸಾಂಸ್ಕೃತಿಕ ಕಾರ್ಯಕ್ರಮದ ....

.... ಭಾಗವಹಿಸಿರುತ್ತಾರೆ

ವಿಠ್ಠಪ್ಪ ಗೋರಂಟ್ಲಿ	ಟಿ. ಮುರ್ತೆಪ್ಪ	ನವೀನ್ ರಾಜ್ ಸಿಂಗ್ ಭಾ.ಆ.ಸೇ.
ಸಂಚಾಲಕರು	ಸಹಾಯಕ ನಿರ್ದೇಶಕರು	ಜಿಲ್ಲಾಧಿಕಾರಿಗಳು ಹಾಗೂ ಅಧ್ಯಕ್ಷರು
ಜಾನಪದ ಜಾತ್ರೆ, ಕೊಪ್ಪಳ	ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಕಾರ್ಯದರ್ಶಿ ಜಾನಪದ ಜಾತ್ರೆ, ಕೊಪ್ಪಳ	ಜಾನಪದ ಜಾತ್ರೆ, ಕೊಪ್ಪಳ

ಸುವರ್ಣ ಕರ್ನಾಟಕ - 2006

ಜಾನಪದ ಸಾಂಸ್ಕೃತಿಕ ಕಲಾ ಸಂಘ (ರಿ) ಬೆಂಗಳೂರು ಜಿಲ್ಲೆ ಹಾಗೂ

ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕರ್ನಾಟಕ ಸರ್ಕಾರ ಮತ್ತು ಜನಧ್ವನಿ ಸಾಂಸ್ಕೃತಿಕ ಸಂಘಟನೆ (ರಿ) ಬೆಂಗಳೂರು

ಸಂಯುಕ್ತ ಆಶ್ರಯದಲ್ಲಿ

" ಅಖಿಲ ಕರ್ನಾಟಕ ಸಾಂಸ್ಕೃತಿಕ ಕಲಾಮಹೋತ್ಸವ "


ಸೆಪ್ಟೆಂಬರ್ 03 ಮತ್ತು 04, 2005

ಪ್ರಮಾಣ ಪತ್ರ

ಶ್ರೀಮತಿ / ಶ್ರೀ .... **ಮೂರಪ್ಪ ದಾಸರು.** .... ರವರು

ದಿನಾಂಕ 03/09/2005 ರಿಂದ 04/09/2005 ರವರೆವಿಗೂ ಕೋಲಾರದ ಟಿ. ಚನ್ನಯ್ಯ ರಂಗಮಂದಿರದಲ್ಲಿ ನಡೆದ " ಅಖಿಲ ಕರ್ನಾಟಕ ಸಾಂಸ್ಕೃತಿಕ ಕಲಾ ಮಹೋತ್ಸವ" ದಲ್ಲಿ ಭಾಗವಹಿಸಿ **ತತ್ವಪದ.** .... ಕಾರ್ಯಕ್ರಮ ನೀಡಿರುತ್ತಾರೆ.

ಸಿದ್ಧರಾಜು	ಕಾಕೋಳು ಲಕ್ಕಪ್ಪ	ಕೆ. ಹೆಚ್. ಮುನಿಯಪ್ಪ	ವಿ. ರಾಮಚಂದ್ರ
ಸಹಾಯಕ ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕೋಲಾರ.	ಅಧ್ಯಕ್ಷರು, ಜನಧ್ವನಿ ಸಾಂಸ್ಕೃತಿಕ ಸಂಘಟನೆ (ರಿ), ಬೆಂಗಳೂರು.	ಕೇಂದ್ರ ಭೂ ಸಾರಿಗೆ ಹೆದ್ದಾರಿ ಹಾಗೂ ಬಂದರು, ರಾಜ್ಯ ಸಚಿವರು, ಭಾರತ ಸರ್ಕಾರ ಹಾಗೂ ಸಮಾರಂಭದ ಉದ್ಘಾಟಕರು, ಅಖಿಲ ಕರ್ನಾಟಕ ಸಾಂಸ್ಕೃತಿಕ ಕಲಾ ಮಹೋತ್ಸವ, ಕೋಲಾರ.	ಕಾರ್ಯದರ್ಶಿ ಹಾಗೂ ಗಾಯಕ ಜಾನಪದ ಸಾಂಸ್ಕೃತಿಕ ಕಲಾ ಸಂಘ(ರಿ), ಬೆಂಗಳೂರು ಜಿಲ್ಲೆ.



ಶ್ರೀ ಸಿದ್ಧಲಿಂಗ ಪ್ರಸೀದ

ವೀರಶೈವ ಪ್ರಗತಿಶೀಲ ಯುವಕ ಸಂಘ

ಶ್ರೀ ಜಗದ್ಗುರು ತೋಂಟದಾರ್ಯಮಠ,

ಗದಗ-ಬೆಟಗೇರಿ

ಸ್ಥಾಪನೆ : ೧೯೬೦ ಫೋನ : ೮೩೩೭

ಸಂಸ್ಥಾಪಕರು : ಲಿಂ. ಗಂಗಾಧರಪ್ಪ ೩. ಮಾನ್ವಿ, ಗದಗ.

ಅಧ್ಯಕ್ಷರು :
...ಪ್ಪ ವೀರಪ್ಪ ಗದಗ
...ಎಸ್. ಬಿ. ಗದಗ ರೋಲರ್
...ರ ಮಿಲ್ಸ್, ಗದಗ
...ನ : ಮನೆ : ೮೭೭೯
ಆಫೀಸ : ೮೪೪೫

卐

ಕಾರ್ಯದರ್ಶಿ :
...ಟ್ಟಬಸಪ್ಪ ಶಿವಾನಪ್ಪ ಚಿಟ್ಟಿ
...ಟರ್ಡ ಅಕೌಂಟಂಟ
...ಗ.
...ನ : ೬೧೬೫

卐

...ಸೋಮವಾರ ಸಾಯಂಕಾಲ
...೬ ಗಂಟೆಗೆ ಶ್ರೀ ಮಠದಲ್ಲಿ
...ನಡೆಯುತ್ತಿರುವ ಶಿವಾನುಭವ
...ಕ್ಕೆ ತಮಗೆ ಆದರದ ಸ್ವಾಗತ.

ಉಲ್ಲೇಖ______ ದಿನಾಂಕ 16/11/೧೯೮೧

-: ಪ್ರಶಸ್ತಿ ಪತ್ರ :-

೦೦೦

ಶ್ರೀ ಮಾರೆಪ್ಪ ದಾಸರ ಸಾ : ತುಂಬರಗುದ್ದಿ, ಇವರು ಅತ್ಯಂತ ಶ್ರೇಷ್ಠವಾಗಿ ಜನರ ಮನದ ಮೇಲೆ ಆಳವಾಗಿ ಪರಿಣಾಮ ಬೀರುವಂತೆ ದಾಸರ ಮತ್ತು ಜನಪದ ಹಾಡುಗಳನ್ನು ಹಾಡುತ್ತಾರೆ. ಇವರು ಇಂದು ನಮ್ಮ ಸಂಘದ ಆಶ್ರಯದಲ್ಲಿ ನೆರವೇರಿದ 850ನೇಯ ಶಿವಾನುಭವ ಕಾರ್ಯಕ್ರಮದಲ್ಲಿ ಭಾಗವಹಿಸಿ ಕೇಳುಗರ ಮನಸ್ಸನ್ನು ಸೂರೆಗೊಂಡಿದ್ದಾರೆ. ಇವರು ಎಲ್ಲ ರೀತಿಯಿಂದ ಪ್ರೋತ್ಸಾಹಕ್ಕೆ ಅರ್ಹರು.

(ಎಸ್. ವಿ. ಗದಗ)
ಅಧ್ಯಕ್ಷರು.

೦೦೦

ಲಬಹೊ.

ಆನೆಗೊಂದಿ ಉತ್ಸವ-೨೦೦೩

೩ ಹಾಗೂ ೪ನೇ ನವೆಂಬರ ೨೦೦೩

ಪ್ರಶಸ್ತಿ ಪತ್ರ

ಶ್ರೀ/~~ಶ್ರೀಮತಿ~~ ಮೊರೆಪ್ಪ ಮಾರೆಪ್ಪ ದಿಣಿ ಸಾಕಿನ : ತುಮ್ಮರಗುದ್ದಿ

ಜಿಲ್ಲಾ ಕೊಪ್ಪಳ ಇವರು ದಿನಾಂಕ : ೩ ಹಾಗೂ ೪-೧೧-೨೦೦೩ ರಂದು ಕೊಪ್ಪಳ ಜಿಲ್ಲೆ ಗಂಗಾವತಿ ತಾಲೂಕಿನ ಆನೆಗೊಂದಿಯಲ್ಲಿ ನಡೆದ ಆನೆಗೊಂದಿ ಉತ್ಸವ -೨೦೦೩ ನಿಮಿತ್ಯ ಏರ್ಪಡಿಸಲಾದ ಕೆಲ್ಸ ಪದಗಳು ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಪ್ರದರ್ಶಿಸಿದ ಕಾರ್ಯಕ್ರಮದ ಬಗ್ಗೆ ಮೆಚ್ಚುಗೆ ಪಡೆದಿರುವುದನ್ನು ಗುರುತಿಸಿ ಈ ಪ್ರಶಸ್ತಿ ಪತ್ರ ನೀಡಲಾಗಿದೆ.

ಎನ್. ಪ್ರಭಾಕರಪ್ಪ ಕ.ಆ.ಸೇ
ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು
ಜಿಲ್ಲಾ ಪಂಚಾಯತ್, ಕೊಪ್ಪಳ

ಡಾ|| ಎನ್.ನಾಗಾಂಬಿಕಾ ದೇವಿ ಭಾ.ಆ.ಸೇ
[illegible]
ಆನೆಗೊಂದಿ ಉತ್ಸವ ಸಮಿತಿ, ಕೊಪ್ಪಳ

ಸ್ಥಳ : ಆನೆಗೊಂದಿ

ದಿನಾಂಕ : ೩, ೪-೧೧-೨೦೦೩

तार : आकाशवाणी "
Telegram : "AKASHVANI"

भारतीय संगीत / INDIAN MUSIC

आकाशवाणी / All India Radio

आकाशवाणी फॉर्म - 3
(पैरा 5-5-6 देखिए)
AIR -- P -- 3
(See paragraph 5-5-6)

DHARWAD केन्द्र / Station No. Dha. 12(2)/93-PII

FOLK MUSIC

महोदय / महोदया,
Dear Sir,

दिनांक / Date 28.3.93 199

निम्नलिखित कार्यक्रम के प्रसारणार्थ आकाशवाणी को आपके सहयोग और सेवाओं की आवश्यकता है। इस हेतु यह प्रस्ताव पत्र प्रेषित है।
We offer you an engagement to broadcast and to perform as follows :-

दिनांक / Date : 23.4.93 (Recording on 16.4.93 at 11.00 a.m.)

समय / Time 6.45 a.m. 2.15 p.m. 6.50 p.m.

स्थान : आकाशवाणी / Place : All India Radio Dharwad.

कार्यक्रम की अनुमानित अवधि
Approximate duration of performance 30 mts.

कार्यक्रम / Programme : To record Ektari Songs.

प्रसारण फीस / Fee for broadcast Rs.1100/- (Rupees Onethousand Onehundred only) (Inclusive of all allowances)

ध्वनि अंकित रूप में कार्यवस्तु की प्रसारण फीस
Fee per broadcast of a mechanical reproduction of the performance ...NIL...

उपर्युक्त प्रस्ताव (आफर) इस बात पर समाश्रित है कि नीचे लिखे निबन्धनों तथा अगले पृष्ठ पर छपी शर्तों का अनुपालन किया जाए।
The above offer is contingent on your compliance with the following terms, and with the conditions printed on the next page :-

1. समस्त आवश्यक विवरणों के साथ आपका हस्ताक्षर किया हुआ स्वीकृति पत्र हमारे पास तारीख ________ तक पहुँच जाना चाहिए
   That your signed acceptance together with all necessary particulars, is in our hands by return of post
2. यदि और जब भी आपसे अपेक्षा की जाए आप पूर्वाभ्यास के लिए उपस्थित होंगे / होंगी।
   That you shall attend rehearsals if and when required.
3. आप कार्यक्रम संबंधी प्रपत्र, जो इसके साथ संलग्न है, भरकर (और उसके साथ उन सब गीतों, बोलों और सामग्रियों की जिन्हें प्रयोग में लाने का आपका विचार है, मुद्रित या टंकित प्रति) आकाशवाणी, ________ के केन्द्र निदेशक को अनुमोदनार्थ भेज देंगे।
   That you shall complete, return and submit for approval the programme form which is attached hereto (together, with a printed copy or typescript of songs, words and material you propose to use) to the Station Director, All India Radio Dhar.
4. स्टैम्प शुल्क सरकार द्वारा वहन किया जाएगा।
   The Stamp Duty will be borne by the Government.

s/o Yenkappa Shri Mareppa Dasar and Party
of 2 in all,
Gajendragad,
Tq: Ron,
Dist: Dharwad.

नाम / Name ________

पता / Address ________

भवदीय,
Yours faithfully,

केन्द्र निदेशक / Station Director
भारत के राष्ट्रपति के लिये और उनकी ओर से
For and on behalf of the President of India.

तार : "आकाशवाणी"
Telegram : "AKASHVANI"

भारतीय संगीत
INDIAN MUSIC

आकाशवाणी
All India Radio

आकाशवाणी – कार्यक्रम – 3
(पैरा 5 – 5 – 6 देखिए)
AIR—P—3
(See paragraph 5-5-6)

No.Dha.12(2)/98-P2(FM)

Dharwad केन्द्र Station

महोदय / महोदया,
Dear Sir /Madam,

दिनांक
Date 9-10-1998 19

निम्नलिखित कार्यक्रम के प्रसारणार्थ आकाशवाणी को आपके सहयोग और सेवाओं की आवश्यकता है। इस हेतु यह प्रस्ताव पत्र प्रेषित है।
We offer you an engagement to broadcast and to perform as follows :—

दिनांक
Date 10-11-98 at 6-40am & 1-05pm and 17-11-98 at 6-40am (To be Rec.on 21-10-98 at 11-00am) समय Time

स्थान : आकाशवाणी
Place : All India Radio Dharwad

कार्यक्रम की अनुमानित अवधि
Approximate duration of performance 25 Minutes

कार्यक्रम
Programme To record Ekatari Tatwa pada with his party of two in all (~~x~~ 1+1)

प्रसारण फीस
Fee for broadcast Rs.1410/-(Rupees ~~Two~~ One thousand four hundred and ten only) (INCLUSIVE OF TA & DA)

ध्वनि अंकित रूप में कार्यवस्तु की प्रसारण फीस
Fee per broadcast of a mechanical reproduction of the performance Nil

उपर्युक्त प्रस्ताव (आफर) इस बात पर समाश्रित है कि नीचे लिखे निबन्धनों तथा अगले पृष्ठ पर छपी शर्तों का अनुपालन किया जाए।
The above offer is contingent on your compliance with the following terms, and with the conditions printed on the next page :—

1. समस्त आवश्यक विवरणों के साथ आपका हस्ताक्षर किया हुआ स्वीकृति पत्र हमारे पास तारीक तक पहुँच जाना चाहिए।
   That your signed acceptance together with all necessary particulars, is in our hands by immediately
2. यदि और जब भी आपसे अपेक्षा की जाए आप पूर्वाभ्यास के लिए उपस्थित होंगे / होंगी।
   That you shall attend rehearsals if and when required.
3. आप कार्यक्रम संबंधी प्रपत्र, जो इसके साथ संलग्न है, भरकर (और उसके साथ उन सब गीतों, बोलों और सामग्रियों की जिन्हें प्रयोग में लाने का आपका विचार है, मुद्रित या टंकित प्रति) आकाशवाणी, ———— के केन्द्र निदेशक को अनुमोदनार्थ भेज दें।
   That you shall complete, return and submit for approval the programme form which is attached hereto (together, with a printed copy or typescript of all songs, words and material you propose to use) to the Station Director, All India Radio Dharwad
4. स्टैम्प शुल्क सरकार द्वारा वहन किया जाएगा।
   The Stamp Duty will be borne by the Government.

भवदीय,
Yours faithfully,

नाम
Name Shri Mareppa Dasar,
पता
Address C/o M.N.Havalad,
Novelty Stores,
GAJENDRAGAD.

केन्द्र निदेशक
Station Director
भारत के राष्ट्रपति के लिये और उनकी ओर से
For and on behalf of The President of India

ಗ್ರಂಥಋಣ

ಗ್ರಂಥಋಣ

೦೧. ಅಮರೇಶ ನುಗಡೋಣಿ; ನುಡಿವ ಬೆಡಗು; ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೦.

೦೨. ಎ.ಎಸ್.ಪ್ರಭಾಕರ (ಸಂ); ಆದಿವಾಸಿ ಆಖ್ಯಾನ; ಸಿದ್ಧಾರ್ಥ ಪ್ರಕಾಶನ, ಹೊಸಪೇಟೆ.

೦೩. ಬಸವರಾಜ ಸಬರದ (ಸಂ); ಹೈದರಾಬಾದ್ ಕರ್ನಾಟಕದ ತತ್ವಪದಗಳು; ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೦.

೦೪. ಬರಗೂರು ರಾಮಚಂದ್ರಪ್ಪ (ಸಂ); ಕನ್ನಡ ತತ್ವಪದಕಾರರು; ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು

೦೫. ದೇವಿಕಾಗೌಡ ಎನ್.ಎಸ್.; ದೇ.ಜ.ಗೌ. ಸಾಹಿತ್ಯಮಾಲೆ ಕುಸುಮ–೨; ಜನಪದ ಹಾಡುಗಾರ್ತಿ ಚೆನ್ನಮ್ಮ

೦೬. ಹರಿಶ್ಚಂದ್ರ ದಿಗ್ಸಂಗಿಕರ್; ಸಾವಳಗಿ ಮಹ್ಮದ್ ಸಾಹೇಬರ ಜೀವನ ಮತ್ತು ಕೃತಿಗಳ ಸಮೀಕ್ಷೆ; ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು.

೦೭. ಹರಿಶ್ಚಂದ್ರ ದಿಗ್ಸಂಗಿಕರ್; ದಲಿತ ತತ್ವಪದಕಾರ ಜಂಬಗಿ ಶರಣ; ಅಭಯ ಪ್ರಕಾಶನ, ಗುಲಬರ್ಗಾ.

೦೮. ಹಿ.ಚಿ.ಬೋರಲಿಂಗಯ್ಯ (ಸಂ); ಕರ್ನಾಟಕ ಜಾನಪದಗಳ ಕೋಶ; ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೦೯. ಹೆಬ್ಬಾಲೆ ಕೆ. ನಾಗೇಶ್; ಬಿಂಬದೊಳಗಣ ಪ್ರಾಣ; ಸೃಷ್ಠಿ ಪಬ್ಲಿಕೇಶನ್ಸ್, ಬೆಂಗಳೂರು.

೧೦. ಹೆಬ್ಬಾಲೆ ಕೆ. ನಾಗೇಶ್; ಜಾನಪದ ಬನಸಿರಿ; ರುಚಿರ ಪ್ರಕಾಶನ; ಎಂ.ಪಿ.ಪ್ರಕಾಶ ನಗರ, ಹೊಸಪೇಟೆ.

೧೧. ಎಚ್.ಎಲ್. ನಾಗೇಗೌಡ; 'ಹಾವು ತುಳಿದೇನೆ; ಶ್ರೀ ಆದಿ ಚುಂಚನಗಿರಿ ಗ್ರಾಮಗೀತೆ ಮಾಲಿಕೆ–೨, ಕರ್ನಾಟಕ ಜಾನಪದ ಟ್ರಸ್ಟ್, ಬೆಂಗಳೂರು–೨–

೧೨. ಎಚ್.ಟಿ.ಮಹಾಂತೇಶ ಶಾಸ್ತ್ರಿ(ಸಂಗ್ರಹಕಾರರು); ಪುರುಂದರದಾಸರ ಪದಗಳು; ಎಂ.ಎಸ್.ಶಾಬಾದಿಮಠ ಆಫ್‌ಸೆಟ್ ಪ್ರಿಂಟರ್ಸ್.

೧೩. ಗುರುಲಿಂಗಪ್ಪ ಧಬಾಲೆ; ಬೀದರ್ ಜಿಲ್ಲೆಯ ತತ್ವಪದಕಾರರು; ಕನ್ನಡ ಸಾಹಿತ್ಯ ಪರಿಷತ್; ಬೆಂಗಳೂರು.

೧೪. ಕಾಳೇಗೌಡ ನಾಗವಾರ, ಜಿ.ವಿ.ಆನಂದಮೂರ್ತಿ (ಸಂ); ಹಲವು ತೋಟದ ಹೂಗಳು; ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಕನ್ನಡ ಭವನ, ಕೆ.ಸಿ.ರಸ್ತೆ, ಬೆಂಗಳೂರು.

೧೫. ಕಾಳೇಗೌಡ ನಾಗವಾರ, ಜಿ.ವಿ.ಆನಂದಮೂರ್ತಿ (ಸಂ); ಗರಿಗೆದರಿದ ನವಿಲು; ಜಾನಪದ ಸಾಹಿತ್ಯ ಅಕಾಡೆಮಿ, ಬೆಂಗಳೂರು.

೧೬. ಲಠ್ಠೆ ಎಂ.ಎಸ್.; ಕಡಕೋಳ ಮಡಿವಾಳೇಶ್ವರ ಸ್ವರವಚನಗಳು.

೧೭. ಲಕ್ಷ್ಮೀ ನಾರಾಯಣ ಭಟ್ಟರು ಎನ್.ಎಸ್.; ಶಿಶುನಾಳ ಷರೀಫ್‌ರ ಜೀವನ ಮತ್ತು ಕೃತಿಗಳು.

೧೮. ಲಕ್ಕಪ್ಪಗೌಡ ಎಚ್.ಜೆ, ಡಾ, ಪುರಷೋತ್ತಮ ಬಿಳಿಮಲೆ, ತಿ.ನಂ.ಶಂಕರನಾರಾಯಣ, ಅಂಬಳಿಕೆ ಹಿರಿಯಣ್ಣ, ಎ.ವಿ.ನಾವಡ, ಶ್ರೀರಾಮ ಇಟ್ಟಣ್ಣವರ; ಜಾನಪದ ಕೈಪಿಡಿ, ಜಾನಪದ ಮಾಲೆ–೧,

೧೯. ಮಲ್ಲಿಕಾರ್ಜುನ ಜೆ. ಅಮ್ಲೆ; ದಲಿತ ತತ್ವಪದಕಾರ ಕಾಶೀನಾಥ; ಪಂಚಶೀಲ ಗವಾಯಿ; ಕನ್ನಡ ಪುಸ್ತಕ ಪ್ರಾಧಿಕಾರ; ಬೆಂಗಳೂರು.

೨೦. ಮಂಜುನಾಥ ಬೇವಿನಕಟ್ಟಿ; ಜನಪದ ಸಂಸ್ಕೃತಿ; ತೇಜಸ್ವಿ ಪ್ರಕಾಶನ; ಹ್ಯಾರಡ, ೧೯೯೪.

೨೧. ಎಂ.ಎಂ.ಕಲಬುರ್ಗಿ; ಉತ್ತರ ಕರ್ನಾಟಕದ ಜನಪದ ಪದ್ಯ ಸಾಹಿತ್ಯ; ಸಮಾಜ ಪುಸ್ತಕಾಲಯ, ಧಾರವಾಡ.

೨೨. ನಾಯಕ್ ಹಾ.ಮಾ.; ಜಾನಪದ ಸ್ವರೂಪ; ತಳಕಿನ ವೆಂಕಣಯ್ಯ ಸ್ಮಾರಕ ಗ್ರಂಥಮಾಲೆ, ಮೈಸೂರು, ೧೯೭೧.

೨೩. ರಘುನಾಥನ್ ಡಿ.; ತತ್ವಪದಕಾರರು ಮತ್ತು ವಸಾಹತುಶಾಹಿ ವ್ಯವಸ್ಥೆ : ಒಂದು ಅಧ್ಯಯನ; ನವಕರ್ನಾಟಕ ಪ್ರಕಾಶನ.

೨೪. ಶಕುಂತಲಾ ಸಿಂಧೂರ; ಜಾನಪದ ವಿದ್ವಾಂಸ ಡಾ. ಬಿ.ಎಸ್.ಗದ್ದಗಿಮಠ, ಉಪನ್ಯಾಸ ಮಾಲೆ–೫೨೮; ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ಅಕ್ಟೋಬರ್, ೨೦೦೬.

೨೫. ಶಾಂತರಸ (ಸಂ); ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು; ತತ್ವಪದಗಳ ಪ್ರಾತಿನಿಧಿಕ ಸಂಕಲನ.

೨೬. ಶಿವರಾತ್ರೀಶ್ವರ ದೇಸಿಕೇಂದ್ರ ಸ್ವಾಮಿಗಳು ಸುತ್ತೂರುಮಠ; ಮುಪ್ಪಿನ ಷಡಕ್ಷರಿಯ ಕೈವಲ್ಯ ಪದಗಳು.

೨೭. ಶಿವಾನಂದ ಗುಬ್ಬಣ್ಣವರ್ ; ಬರಕೋ ಪದ ಬರಕೊ

೨೮. ಶಿವಣ್ಣ ಎಸ್; ಕೈವಲ್ಯ ಕಲ್ಪವಲ್ಲರಿ

೨೯. ಶಿರೂರು ಬಿ.ವಿ.; ಸಂಶೋಧನಾ ಸ್ವರೂಪ; ಅನ್ನಪೂರ್ಣ ಪ್ರಕಾಶನ; ಹುಬ್ಬಳಿ, ೧೯೯೨.

೩೦. ರಮೇಶ್ ಸ.ಚಿ. (ಸಂ); ಅಲೆಮಾರಿಗಳ ಸ್ಥಿತಿಗತಿ; ಕನ್ನಡ ವಿಶ್ವವಿದ್ಯಾಲಯ, ಹಂಪಿ.
ರಹಮತ್ ತರೀಕೆರೆ; ಕನ್ನಡ ಸಂಶೋಧನೆ ಮತ್ತು ತಾತ್ವಿಕ ವಿಚಾರ; ಕನ್ನಡ ವಿಶ್ವವಿದ್ಯಾಲಯ, ಹಂಪಿ.

೩೧. ವೀರಣ್ಣ ದಂಡೆ (ಸಂ); ಜಾನಪದ ಶಾಸ್ತ್ರ ಸಿದ್ಧಾಂತಗಳು; ನೆಲಮನೆ ಪ್ರಕಾಶನ; ರಂಗನಾಥನಗರ, ಶ್ರೀರಂಗಪಟ್ಟಣ, ಮಂಡ್ಯ ಜಿಲ್ಲೆ; ೧೯೯೯.

೩೨. ಯಲ್ಲಪ್ಪ. ಬಿ. ಹಿಮ್ಮಡಿ; ಅಲೆಮಾರಿ ಸಮುದಾಯಗಳ ಅಧ್ಯಯನ ಮಾಲೆ : ಚೆನ್ನದಾಸರ; ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು; ೨೦೦೮.

ಛಾಯಚಿತ್ರಗಳು



ರಾಮಣ್ಣ ಮಾಸ್ತರ್-ಮಾರೆಪ್ಪ ಚೆನ್ನದಾಸರ ಗುರುಗಳು



ಮಾರೆಪ್ಪ ಚೆನ್ನದಾಸರು ಭಾವಚಿತ್ರ



ಕೊಪ್ಪಳದ ಅಭಿನವ ಗವಿಸಿದ್ದೇಶ್ವರ ಶ್ರೀಗಳು ಮಾರೆಪ್ಪನವರನ್ನು
ಸನ್ಮಾನಿಸುತ್ತಿರುವುದು



ಕಲಬುರ್ಗಿಯ ಪೂಜ್ಯ ದೊಡ್ಡಪ್ಪ ಅಪ್ಪಗಳೊಂದಿಗೆ
ಮಾರೆಪ್ಪಚೆನ್ನದಾಸರು



ಮಾರೆಪ್ಪಚೆನ್ನದಾಸರನ್ನು ದೆಹಲಿಯಲ್ಲಿ ಡಾ.ಹೆಚ್.ಎಸ್.ಶಿವಪ್ರಕಾಶ್ ಹಾಗೂ ಡಾ.ಪುರುಷೋತ್ತಮ ಬಿಳಿಮಲೆ ನೆನಪಿನ ಕಾಣಿಕೆ ನೀಡಿ ಸನ್ಮಾನಿಸಿರುವ ದೃಶ್ಯ



ಮಾರೆಪ್ಪ ಚೆನ್ನದಾಸರಿಗೆ ಸಂದ ಪ್ರಶಸ್ತಿಪುರಸ್ಕಾರಗಳು



ಪ್ರೊ. ಕಾಳೇಗೌಡ ನಾಗವಾರ, ಮಾನ್ಯ.ಎಂ.ಪಿ.ಪ್ರಕಾಶ್‌ರವರಿಂದ
ಸನ್ಮಾನಿತಗೊಳ್ಳುತ್ತಿರುವ ಮಾರೆಪ್ಪಚೆನ್ನದಾಸರು



ಸೋಮಶೇಖರ್ ಇಮ್ರಾಪೂರ್‌ರವರೊಂದಿಗೆ
ಮಾರೆಪ್ಪ ಚೆನ್ನದಾಸರು



ಮಾರೆಪ್ಪನವರು ಕಾರ್ಯಕ್ರಮಕ್ಕೆ ತೆರಳುವ ಮುನ್ನ ಅಲಂಕಾರ ಮಾಡಿಕೊಳ್ಳುತ್ತಿರುವ ದೃಶ್ಯ



ದೆಹಲಿ ಕಾರ್ಯಕ್ರಮದಲ್ಲಿ ಮಾರೆಪ್ಪಚೆನ್ನದಾಸರು



ಮೈಸೂರಿನ ರಂಗಾಯಣ ಕಾರ್ಯಕ್ರಮದಲ್ಲಿ ಮಾರೆಪ್ಪಚೆನ್ನದಾಸರು ಸನ್ಮಾನಿತಗೊಳ್ಳುತ್ತಿರುವುದು



೧೯೮೫–೮೬ರಲ್ಲಿ ಆಕಾಶವಾಣಿಕೇಂದ್ರದಲ್ಲಿ ಡಾ. ಬಾನಂದೂರು ಕೆಂಪಯ್ಯನವರೊಂದಿಗೆ ಮಾರೆಪ್ಪಚೆನ್ನದಾಸರು



ಮಾರೆಪ್ಪಚೆನ್ನದಾಸರು ಸಾಯಂಕಾಲದ ಸಮಯದಲ್ಲಿ
ಮಕ್ಕಳಿಗೆ ಪಾಠಹೇಳಿಕೊಡುತ್ತಿರುವುದು



ಮಾರೆಪ್ಪನವರ ಮಗ ಹನುಮಂತಪ್ಪನು ತಾವುವಾಸಿಸುವ ಮೀನಾಕ್ಷಿನಗರದಲ್ಲಿನ
ಆರ್ಥಿಕವಾಗಿ ಸಂಕಷ್ಟದಲ್ಲಿರುವ ಮಕ್ಕಳಿಗೆ ಆಶಾಕಿರಣ ಕೇಂದ್ರದ ವತಿಯಿಂದ
ಪಠ್ಯಮಸ್ತಕ ಹಾಗೂ ಸಾಮಾಗ್ರಿಗಳನ್ನು ವಿತರಿಸುತ್ತಿರುವುದು



ದೆಹಲಿಕಾರ್ಯಕ್ರಮದಲ್ಲಿ ತತ್ವಪದ ಗಾಯನದಲ್ಲಿ ನಿರತರಾಗಿರುವ
ಮಾರೆಪ್ಪ ಮತ್ತುಅವರ ಹಿರಿಯ ಮಗಸಣ್ಣವೆಂಕಪ್ಪ



ದೆಹಲಿಯಲ್ಲಿ ತತ್ವಪದ ಪ್ರಸ್ತುತಪಡಿಸಿದ ನಂತರ ಕಾರ್ಯಕ್ರಮದಲ್ಲಿ
ಮಾತನಾಡುತ್ತಿರುವ ಮಾರೆಪ್ಪ ಚೆನ್ನದಾಸರು



ಮಾರೆಪ್ಪ ಚೆನ್ನದಾಸರ ದಂಪತಿಗಳಿಂದ ಹಿರಿಯಮಗ ಸಣ್ಣವೆಂಕಪ್ಪ ಹಾಗೂ
ಕಿರಿಯಮಗ ಹನುಮಂತಪ್ಪ ನವರುಆಶೀರ್ವಾದ ಪಡೆಯುತ್ತಿರುವುದು



ಮಾರೆಪ್ಪ ಚೆನ್ನದಾಸರು ಸಂಗೀತ ಕಾರ್ಯಕ್ರಮಕ್ಕೆ
ಹೋಗುವ ಮುನ್ನ ದೇವರಿಗೆ ಪೂಜಿಸುತ್ತಿರುವುದು



ಕುಷ್ಟಗಿಯ ಸರ್ಕಾರ ಪ್ರಥಮದರ್ಜೆ ಕಾಲೇಜಿನಲ್ಲಿ ಸಾಂಸ್ಕೃತಿಕ ಕಾರ್ಯಕ್ರಮ[illegible] ಉದ್ವಾಟಿಸುತ್ತಿರುವ ಮಾರೆಪ್ಪಚೆನ್ನದಾಸರು



ಕೊಪ್ಪಳದ ಜಿಲ್ಲಾಧಿಕಾರಿಯಾಗಿದ್ದ ಡಾ. ಅಶ್ವಥ್ ಅವರು ಮಾರೆಪ್ಪಚೆನ್ನದಾಸರಿಗೆ ಕಾಣಿಕೆ ನೀಡುತ್ತಿರುವುದು



ಮಾರೆಪ್ಪ ಮತ್ತು ಸಣ್ಣ ವೆಂಕಪ್ಪ



ತಮ್ಮನಾದ ಆಂಜನಪ್ಪ ಜೊತೆಮಾರೆಪ್ಪ
ಚೆನ್ನದಾಸರು



೨೦೦೮ ರಲ್ಲಿ ಲಕ್ಷ್ಮೇಶ್ವರದಲ್ಲಿ ಹನುಮಜಯಂತಿ ನಿಮಿತ್ತ ತತ್ವಪದ ಪ್ರಸ್ತುತ ಪಡಿಸುತ್ತಿರುವ ಮಾರೆಪ್ಪ ಹಾಗೂ ಅವರ ಮಗ ವೆಂಕಪ್ಪ



ದೆಹಲಿಯಲ್ಲಿ ಕಾರ್ಯಕ್ರಮ ನೀಡುತ್ತಿರುವುದು



ಗದಗದ ಅಡವೇಂದ್ರಸ್ವಾಮಿ ಮಠದಲ್ಲಿ ಕಾರ್ಯಕ್ರಮ
ನೀಡುತ್ತಿರುವುದು



ಶ್ರೀಬಸವಲಿಂಗಯ್ಯ ಹಿರೇಮಠ ಅವರು ಹಾಡಿದ ಹಾಡಿನಧ್ವನಿಸುರುಳಿ
ಬಿಡುಗಡೆಗೊಳಿಸಿದ ಮಾರೆಪ್ಪಚೆನ್ನದಾಸರು



ಮಾರೆಪ್ಪಚೆನ್ನದಾಸರು ತಮ್ಮ ಮಗನ ಮದುವೆ ಸಮಾರಂಭದಲ್ಲಿ
ಆರತಿ ಎತ್ತುತ್ತಿರುವುದು



ಚೆನ್ನದಾಸರ ಸಮುದಾಯದ ಮಹಿಳೆ ವ್ಯಾಪಾರದಲ್ಲಿ
ತೊಡಗಿರುವುದು



ಮಾರೆಪ್ಪಚೆನ್ನದಾಸರೊಂದಿಗೆ ಸಂಶೋಧಕರು



ಮಾರೆಪ್ಪಚೆನ್ನದಾಸರು ಹಾಗೂ ಅವರ ಧರ್ಮಪತ್ನಿ ದುರುಗಮ್ಮ
ಮತ್ತು ಅವರ ಮಕ್ಕಳೊಂದಿಗೆ ಸಂಶೋಧಕರು